ವುದನ್ನು ತಪ್ಪಿಸುವುದರ ಬಗ್ಗೆ, ಯಂತ್ರೋಪಕರಣಗಳು ಹಾನಿಯಾಗುವುದರ ಬಗ್ಗೆ ಎಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೋ ಅಷ್ಟೇ ಕಳಕಳಿ ಕಾರ್ಮಿಕ ವರ್ಗದವರಿಗೆ, ಕಾರ್ಮಿಕ ನಾಯಕರಿಗೆ ಹಾಗೂ ಎಲ್ಲರಿಗೂ ಇದೆ. ಆದರೆ ಇದನ್ನು ಸಾಧಿಸಬೇಕಾದರೆ ಇಂಥ ಶಾಸನಗಳಿಂದ ಆಗುವುದಿಲ್ಲ. ಇದಕ್ಕೆ ಕಾರ್ಮಿಕ ಸಂಘಗಳು ಏನು ಹೇಳುತ್ತವೆ ಆ ಅಭಿಪ್ರಾಯಗಳನ್ನು ನಾವು ತಿಳಿಯಬೇಕು. ಹಾಗೆಯೇ, ಕಾರ್ಮಿಕ ಸಂಘಗಳು ಅಷ್ಟೇ ಅಲ್ಲ, ಕೈಗಾರಿಕೋದ್ಯಮಗಳನ್ನು ನಡೆಸುವಂತಹ ಮಾಲೀಕರು ಏನು ಹೇಳುತ್ತಾರೆ, ಆಡಳಿತ ವರ್ಗದವರು ಏನು ಹೇಳುತ್ತಾರೆಂಬುದನ್ನೆಲ್ಲ ತಿಳಿಯಬೇಕು. ಅವರುಗಳು ಇಂಥ ಶಾಸನದ ಮೂಲಕ ಮಾತ್ರ ಉದ್ಯಮಗಳನ್ನು ನಡೆಸುವುದಕ್ಕೆ ಸಾಧ್ಯ, ಈ ಅಧಿಕಾರಿಗಳು ಇಲ್ಲದಿದ್ದರೆ ಸೇವಾ ಸೌಲಭ್ಯಗಳನ್ನು ಜನತೆಗೆ ಒದಗಿಸುವುದಕ್ಕೆ ಆಗುವುದಿದೆ ಎಂದು ಏನಾದರೂ ಹೇಳುತ್ತಾರೆಯೇ ಎಂಬುದನ್ನು ತಿಳಿಯಬೇಕು. ಅಧಿಕಾರಗಳು ಸರ್ಕಾರದ ಕೈಯ್ಯಲ್ಲಿದ್ದಾಗ, ಕಾರ್ಮಿಕ ಇಲಾಖೆಯು, ಪೋಲೀಸ್ ಇಲಾಖೆಯು ಅಥವಾ ಕೆ.ಎಸ್.ಆರ್.ಟಿ.ಸಿ. ಇತ್ಯಾದಿ ಸಾರ್ವಜನಿಕ ಸಂಸ್ಥೆಗಳನ್ನು ನಡೆಸುವಂತಹ ಅಧಿಕಾರಿಗಳು, ವಿಶೇಷವಾದ ಅಧಿಕಾರಗಳು ತಮ್ಮ ಕೈಯ್ಯಲ್ಲಿಲ್ಲದಿದ್ದರೆ ನಮಗೆ ಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಅಭಿಪ್ರಾಯವನ್ನೇನಾದರೂ ಕೊಡುತ್ತಾರೆಯೇ ಎಂಬುದನ್ನು ಈ ಸದನ ತಿಳಿಯುವುದು ಬಹಳ ಅವಶ್ಯಕವಾಗಿದೆ. ಸಾರ್ವಜನಿಕರೂ ಕೂಡ ಇದನ್ನು ತಿಳಿಯಬೇಕು. ಅವರೆಲ್ಲರ ಸಹಕಾರದಿಂದ ಮಾತ್ರ ಈ ಸೇವಾ ಸೌಲಭ್ಯವನ್ನು ಪಡೆಯಬಹುದು ಮತ್ತು ಇದನ್ನು ಸುಸೂತ್ರವಾಗಿಯೂ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆ ಇದನ್ನೆಲ್ಲ ಕ್ರೋಢೀಕರಿಸಿ ಇಂಥ ಒಂದು ಶಾಸನವನ್ನಾಗಲೀ ಅಥವಾ ಬೇರೆ ರೀತಿಯ ಶಾಸನವನ್ನಾಗಲೀ ರಚಿಸಿ ನಿರಂತರ ಸೇವಾ ಸೌಲಭ್ಯವನ್ನು ಪಡೆಯಬಹುದು. ಅದಕ್ಕೋಸ್ಕರವೇ ನಾನು ಈ ಎಲ್ಲ ಸಲಹೆಗಳನ್ನು ಕೊಡುತ್ತಿದ್ದೇನೆ. ಈ ವಿಚಾರವನ್ನು ಸಂಬಂಧಪಟ್ಟ ಎಲ್ಲ ಸಾರ್ವಜನಿಕರಿಗೂ ತಿಳಿಯಪಡಿಸಿ ಅದಷ್ಟು ಬೇಗನೆ ಅಂದರೆ ಒಂದೆರಡು ತಿಂಗಳೊಳಗಾಗಿ ಅವರೆಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಎಲ್ಲ ತಿದ್ದುಪಡಿಗಳನ್ನು ಕ್ರೋಢೀಕರಿಸಿ ಸಮಂಜಸವಾದ ಒಂದು ಮಸೂದೆಯನ್ನು ರೂಪಿಸಿದರೆ ಬಹುಶಃ ಸದನದ ಎಲ್ಲ ಸದಸ್ಯರ ಒಪ್ಪಿಗೆಯನ್ನು ಹಾಗೂ ಬೆಂಬಲವನ್ನು ತಾವು ಪಡೆದು, ತಾವು ಹೇಳಿದ ಹಾಗೆ ಸುಲಭವಾಗಿ ಜಾರಿಗೆ ತರಬಹುದು. ಆಗ ಅದು ಪರಿಣಾಮಕಾರಿಯಾಗಿ ಜಾರಿಗೆ ಬರಬಹುದೆಂದು ನಾನು ಭಾವಿಸುತ್ತೇನೆ. ಆದರೆ ತಾವು ಇವತ್ತು ತಂದಿರುವ ಈ ಮಸೂದೆಯಲ್ಲಿ ತಾವು ಹೇಳಿರುವ ಉದ್ದೇಶವನ್ನು ಖಂಡಿತವಾಗಿ ಈ ಮಸೂದೆಯಿಂದ ಸಾಧಿಸುವುದಕ್ಕಾಗುವುದಿಲ್ಲವೆಂದು ನನ್ನ ಬಲವಾದ ಅಭಿಪ್ರಾಯ. ಏತಕ್ಕೆಂದರೆ, ಹಿಂದೆ ಮುಖ್ಯ ಮಂತ್ರಿಗಳಾಗಿದ್ದು ಈಗ ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ದೇವರಾಜ ಅರಸುರವರು ಈ ಮಸೂದೆಯನ್ನು ತಂದರು ಎಂದು ಇವತ್ತಿನ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ; ಆದರೆ ಒಂದು ಮಾತು ಹೇಳುವುದನ್ನು ಮರೆತರು. ಅವರು ಏತಕ್ಕೆ ಮಸೂದೆಯನ್ನು ತಂದರು ಎಂದು ಗೊತ್ತಿಲ್ಲ. ಅವರು ಈ ಮಸೂದೆಯನ್ನು ತಂದಾಗ ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿತ್ತು. ಆಗ ಅದು ಈಗಿನ ಇಂಡಸ್ಟ್ರಿಯಲಿಸ್ಟ್ ಆಕ್ಟಿನ ಬದಲು ಇಂಡಸ್ಟ್ರಿಯಲ್ ರಿಲೇಷನ್ ಬಿಲ್ಲನ್ನು ತರಲು ಪ್ರಯತ್ನ ಮಾಡಿತ್ತು ಎಂಬುದನ್ನು ತಾವು ತಿಳಿದುಕೊಂಡಿರಬಹುದು. ಆ ಸಂದರ್ಭದಲ್ಲಿ, ದೇಶದಲ್ಲಿರುವ ಎಲ್ಲ ಟ್ರೇಡ್ ಯೂನಿಯನ್‌ಗಳು, ಕಾರ್ಮಿಕ ಸಂಘಗಳು ಆ ಮಸೂದೆಯನ್ನು ಜಾರಿಗೆ ತರಬಾರದೆಂದು ವಿರೋಧಿಸಿದವು. ಅದನ್ನೇನಾದರೂ ಅಂಗೀಕಾರ ಮಾಡಿದರೆ ಎಲ್ಲರೂ ಒಂದಾಗಿ ದೊಡ್ಡ ಪ್ರತಿಭಟನೆಯನ್ನೇ ಮಾಡಬೇಕಾದೀತೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದವು.

೬-00 ಪಿ.ಎಂ.

ಹಿಂದಿನ ಸರ್ಕಾರದವರು ಈ ಮಸೂದೆ ತರುವುದನ್ನು ಕೈಬಿಡಬೇಕಾಗಿ ಬಂತು. ಆದ್ದರಿಂದ ಅವರು ಇದನ್ನು ಹಿಂದಕ್ಕೆ ಹಾಕಿದರು. ಈ ಮಸೂದೆ ಕೆಲವು ಅಂಶಗಳನ್ನೊಳಗೊಂಡಿದೆ. ಕೆಲವು ರಾಜ್ಯಗಳಲ್ಲಿ ಇದನ್ನು ಅನುಸರಿಸಿ ಶಾಸನಗಳನ್ನು ತೆಗೆದುಕೊಂಡು ಬಂದರು. ಹೆಚ್ಚು ಕಡಿಮೆ ಇದೇರೀತಿ ಮಧ್ಯ ಪ್ರದೇಶದಲ್ಲಿ ಶಾಸನವನ್ನು ತೆಗೆದುಕೊಂಡು ಬಂದು ಮಿನಿ ಮಿಸಾ ತರಹ ಆಗಿರುವುದು ತಮಗೆ ಗೊತ್ತಿದೆ. ಅಲ್ಲಿ ಈ ಶಾಸನವನ್ನು ತರುವುದಕ್ಕೆ ವಿಶೇಷವಾದ ಕಾರಣವಿತ್ತು. ಅಲ್ಲಿ ವಿದ್ಯುನ್ಮಂಡಲಿಯ ಇಂಜನಿಯರುಗಳು, ಅಲ್ಲಿನ ನೌಕರರು ನೋಟೀಸ್ ಕೊಟ್ಟು ಮುಷ್ಕರ ಹೂಡುವುದಕ್ಕೆ ತಯಾರಾದಾಗ ಸರ್ಕಾರ ನೌಕರರ ಜೊತೆ ಕಾರ್ಮಿಕ ಇಲಾಖೆ ಮೂಲಕ ಮಾತುಕತೆ ಕನ್ಸಿಲಿಯೇಷನ್ ಮಾಡಿ ಇದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುವುದರ ಬದಲು ಇಂಥಾ ಒಂದು ಮಸೂದೆಯನ್ನು ತೆಗೆದುಕೊಂಡು ಬಂದು ಹತೋಟಿಗೆ

ತರಬಹುದು ಎಂದು ಹೇಳಿ ಈ ಮಸೂದೆಯನ್ನು ತಂದರು. ಮಧ್ಯಪ್ರದೇಶದಲ್ಲಿ ಅದು ಶಾಸನವಾಗಿ ಉಳಿಯಿತು. ಇಂಡಸ್ಟ್ರಿಯಲ್ ರಿಲೇಷನ್ ಬಿಲ್ಲನ್ನು ಕೇಂದ್ರ ಸರ್ಕಾರದವರೂ ಕೂಡ ಕೈಬಿಟ್ಟರು. ಮಧ್ಯಪ್ರದೇಶ ಒಂದು ಬಿಟ್ಟು ರಾಷ್ಟ್ರದ ಯಾವ ಭಾಗದಲ್ಲೂ, ಯಾವುದೇ ರಾಜ್ಯದಲ್ಲೂ ಇಂಥಾ ಒಂದು ಕಾನೂನನ್ನು ಜಾರಿಗೆ ತಂದಿಲ್ಲ. ಕರ್ನಾಟಕದಲ್ಲಿ ಯಾವಾಗ ಇಂಥಾ ಪರಿಸ್ಥಿತಿ ಬಂತು ಅಂದರೆ, ಬಹುಶಃ ಕೇಂದ್ರಸರ್ಕಾರದ ಸಲಹೆ ಮೇರೆಗೆ ಕರ್ನಾಟಕದೊಳಗೆ ಇದ್ದಂಥ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಜವಾಬ್ದಾರಿಯನ್ನು ವಹಿಸಿಕೊಂಡಂಥ ಆಗಿನ ಸಾರಿಗೆ ಸಚಿವರು ಮತ್ತು ಈಗಿನ ಮುಖ್ಯ ಮುಖ್ಯ ಮಂತ್ರಿಗಳ ಒತ್ತಡದಿಂದ ಇವರಿಗೆ ಬೇಕು ಎಂದು ಕಂಡುಬಂದಿದ್ದರಿಂದಲೇ ಈ ಮಸೂದೆ ಆ ಸಮಯದಲ್ಲಿ ಬಂತು, ಬಂದಾಗ ಹಿಂದಿನ ಮುಖ್ಯ ಮಂತ್ರಿಯವರಿಗೆ ಇಲ್ಲಿನ ಕಾರ್ಮಿಕ ಸಂಘಗಳು ಮನವಿ ಕೊಟ್ಟಾಗ, ಇದನ್ನು ಪರಿಶೀಲನೆಮಾಡಿ ಈ ಮಸೂದೆಯನ್ನು ನಾನು ಇಂಟರ್‌ಡ್ಯೂಸ್ ಮಾಡುವುದಿಲ್ಲ ಎಂದು ಹೇಳಿದರು. ಆದರೆ ಇಂಟರ್‌ಡ್ಯೂಸ್ ಆಗಿಹೋಗಿತ್ತು, ಆದರೆ ಇದನ್ನು ಕನ್ಸಿಡರೇಷನ್‌ಗೆ, ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಎಂದು ಎಲ್ಲಾ ಕಾರ್ಮಿಕ ಸಂಘಗಳಿಗೆ ಭರವಸೆ ಕೊಟ್ಟರು. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ಕಾರ್ಮಿಕರಿಗೆ ಆಶ್ವಾಸನೆ ಕೊಟ್ಟಿದ್ದು ಅಷ್ಟೇ ಅಲ್ಲ, ನಂತರ ಒಂದೂವರೆ, ಎರಡು ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಕೂಡ, ಮೂರು ನಾಲ್ಕು ಬಾರಿ ಶಾಸನಸಭೆ ಸೇರಿದ್ದರೂ ಕೂಡ, ಯಾವುದೇ ಶಾಸನ ಸಭೆಯಲ್ಲೂ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಆಗಿನ ಸರ್ಕಾರದಲ್ಲಿದ್ದಂಥ ಯಾರೇ ಸಚಿವರಾಗಲೀ, ಸರ್ಕಾರದ ಪರವಾಗಿ ಯಾವುದೇರೀತಿಯ ಒತ್ತಡ ತರಲಿಲ್ಲ, ತರುವುದಿಲ್ಲ ಎಂದು ಭರವಸೆ ಕೊಟ್ಟು ಅವರು ತರಲಿಲ್ಲ ಎನ್ನುವುದನ್ನು ಇವತ್ತು ತಮ್ಮ ಮುಂದೆ ಹೇಳಬೇಕಾಗಿದೆ. ಈ ಮಸೂದೆಯನ್ನು ತರುವುದಿಲ್ಲ ಎಂದು ಕೈಬಿಟ್ಟರು. ನಂತರ ಅವರು ತಮ್ಮ ಅಧಿಕಾರವನ್ನು ಕಳೆದುಕೊಂಡರು. ಈಗ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ೧೧೦ ದಿವಸಗಳಲ್ಲಿ ಇಂಥಾ ಮಸೂದೆಯನ್ನು ತರಲೇಬೇಕಾದಂಥ ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇದೆ ಎಂದು ಒಪ್ಪುತ್ತೀರಾ ಎಂದು ನಾನು ಕೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮುಷ್ಕರಗಳು ಆಗಿಲ್ಲ ಎಂದು ನಾನು ಹೇಳುವುದಿಲ್ಲ ಮುಷ್ಕರ ಮಾಡುವುದಿಲ್ಲ ಎಂದು ಯಾವ ಕಾರ್ಮಿಕನೂ ಭರವಸೆ ಕೊಡುವ ಹಾಗಿಲ್ಲ. ಕಾರ್ಮಿಕ ಸಂಘ ಇದ್ದರೆ ಆಯುಧವನ್ನು ಉಪಯೋಗ ಮಾಡುತ್ತಾರೆ. ಜವಾಬ್ದಾರಿಯುತವಾಗಿ ಆಯುಧವನ್ನು ಉಪಯೋಗ ಮಾಡಿ ತೆಗೆದುಕೊಳ್ಳುತ್ತಾ ಇದ್ದಾರೆ. ಯಾವುದೇ ಕಾರ್ಮಿಕನು ಜವಾಬ್ದಾರಿಯುತವಾಗಿ ಅದನ್ನು ವ್ಯವಹರಿಸಬೇಕಾದರೆ ಅವನ ಕೆಲವು ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಮಾಲೀಕರು, ಸರ್ಕಾರ, ಇತರೆ ಇಲಾಖೆಗಳವರು ವ್ಯವಹರಿಸದೆ ಹೋಗಿದ್ದರೆ ದೇಶದ ಸ್ವತ್ತನ್ನು ಹಾಳು ಮಾಡಬೇಕು ಎಂಬ ಭಾವನೆ ಯಾವ ಕಾರ್ಮಿಕನಿಗೂ ಇದೆ ಎಂದು ನಾನು ತಿಳಿದುಕೊಂಡಿಲ್ಲ ಅಂಥಾ ಭಾವನೆ ಇರಬಾರದು, ಅಂಥಾ ಭಾವನೆ ಕಂಡುಬಂದರೆ ಅದನ್ನು ಪರಿಹರಿಸಲಿಕ್ಕೆ ಸಾಧ್ಯವಿದೆ, ಅಂಥಾ ಒಂದು ದಾರಿಯನ್ನು ನಾವು ಹಿಡಿಯಬೇಕು. ನಮ್ಮ ರಾಜ್ಯದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ೧೦೦ ದಿವಸಗಳಲ್ಲಿ ಅಂಥಾ ದೊಡ್ಡ ಅರಾಜಕತೆ ಪರಿಸ್ಥಿತಿ ಏನಾದರೂ ಬಂದಿದೆಯೇ. ಬೆಂಗಳೂರು ಡೈರಿಯ ನೌಕರರ ಮುಷ್ಕರದ ವಿಷಯ ನಿನ್ನೆ ಮೊನ್ನೆಯಿಂದ ಬಹಳ ಮುಖ್ಯವಾಗಿ ನಮಗೆ ಕಾಣುತ್ತಾ ಇದೆ. ಇದರ ಬಗ್ಗೆ ಆಳವಾಗಿ ಪರಿಶೀಲನೆ ಮಾಡಿ, ಸದನದಲ್ಲಿ ಚರ್ಚೆಮಾಡಿ ಕಾರ್ಮಿಕರ ಸಮಸ್ಯೆಗಳನ್ನು ಹತೋಟಿಗೆ ತರಬೇಕು. ಅವರು ನೋಟೀಸ್ ಕೊಡದೆ ಇರಬಹುದು, ಇದು ಹೊಸದಾಗಿ ಉದ್ಭವಿಸಿದಂಥ ಪರಿಸ್ಥಿತಿ ಏನಲ್ಲ. ಅವರ ನ್ಯಾಯವಾದ ಬೇಡಿಕೆಗಳ ಬಗ್ಗೆ ಶ್ರೀಮಾನ್ ಗಂಗಾಧರನ್ ಅವರು ಮತ್ತು ಶ್ರೀಮಾನ್ ಫರ್ನಾಂಡಿಸ್ ಅವರು ಮಾತನಾಡುವಾಗ ಕೆಲವು ಅಂಶಗಳನ್ನು ವ್ಯಕ್ತಪಡಿಸಿ ಹೇಳಿದರು. ಆಡಳಿತ ನಡೆಸತಕ್ಕವರು ಕಾರ್ಮಿಕರ ಸಮಸ್ಯೆಗಳನ್ನು ಸೌಜನ್ಯತೆಯಿಂದ ಪರಿಶೀಲನೆ ಮಾಡಿದ್ದರೆ ಈ ಒಂದು ಹಂತಕ್ಕೆ ಹೋಗುತ್ತಿರಲಿಲ್ಲ. ಬೆಂಗಳೂರು ಡೈರಿ ನಡೆಯುವುದು ಕೇವಲ ಅಧಿಕಾರಿಗಳಿಂದ ಮಾತ್ರವಲ್ಲ ಕಾರ್ಮಿಕರೂ ಕೂಡ ಅದಕ್ಕೆ ಭಾಗಿಯಾಗಿದ್ದಾರೆ ಎನ್ನುವ ಮನೋಭಾವ ಇವರಿಗೆ ಇದ್ದಿದ್ದರೆ ಖಂಡಿತವಾಗಿಯೂ ಇವರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸಾಧ್ಯವಿತ್ತು. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಈ ಒಂದು ಸಣ್ಣ ವಿವಾದ ಈ ಮಟ್ಟಕ್ಕೆ ಬೆಳೆಯಲಿಕ್ಕೆ ಬಿಟ್ಟಿರತಕ್ಕ ಆಡಳಿತ ವರ್ಗ ಇದಕ್ಕೆ ಖಂಡಿತವಾಗಿಯೂ ಕಾರಣವಾಗಿದೆ. ಈ ಮಸೂದೆ ಕಳೆದ ೩–೪ ಅಧಿವೇಶನಗಳಲ್ಲಿ ಯಾವಾಗ ಬರುತ್ತದೊ ಎಂದು ಇದ್ದೆವು. ಈ ಅಧಿವೇಶನದಲ್ಲಿ ಬಂತು. ಈಗಿನ ಮುಖ್ಯ ಮಂತ್ರಿಗಳು ಹಠದಿಂದ ಇದನ್ನು ಮಾಡಲೇಬೇಕು ಎಂದು ಕಾತುರರಾಗಿ ಮಾಡಿಸಲಿಕ್ಕೆ ಅವರಿಗೆ ಪ್ರಚೋದನೆ ಕೊಡುವುದಕ್ಕೋಸ್ಕರ ಆಡಳಿತ ವರ್ಗದವರು ಹಠಮಾರಿತನವನ್ನನುಸರಿಸಿ ಮಾಡಿದ್ದಾರೆ ಎನ್ನತಕ್ಕ ಆರೋಪ, ಅನುಮಾನ ಬರುತ್ತದೆ. ಯಾವುದೇ ವಿವಾದ ಅವರ ಮುಂದೆ ಬಂದಾಗ ಸೌಜನ್ಯತೆಯಿಂದ ವರ್ತನೆ ಮಾಡದಿದ್ದರೆ ಮಾನ್ಯ ಮೈಕೇಲ್

ಫರ್ನಾಂಡೀಸರಂಥ ಒಬ್ಬ ಶಾಸನಸಭಾ ಸದಸ್ಯರು, ನಾನು ಹೇಳಿದಂತೆಮಾಡಿ, ಮುಷ್ಕರಹೂಡಿ ಎಂದು ಯಾವ ಕಾರ್ಮಿಕನಿಗೂ ಹೇಳುವುದಿಲ್ಲ. ಆಡಳಿತವರ್ಗದವರು ಇವರ ಜೊತೆಯಲ್ಲಿ ಮಾತುಕತೆ ನಡೆಸದೆ, ಇವರು ಕಳುಹಿಸಕೊಟ್ಟ ನಿರ್ಣಯಗಳನ್ನು ಓದದೆ, ಅದಕ್ಕೆ ಉತ್ತರಗಳನ್ನು ಕೊಡದೆ ಮುಷ್ಕರ ಹೂಡ ತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣಮಾಡಿ ಇಂಥಾ ಮಸೂದೆಯನ್ನು ತರುವುದಕ್ಕೆ ಸರ್ಕಾರದ ಕೈ ಬಲಪಡಿ ಬೇಕು ಎಂದು ಆಡಳಿತವರ್ಗದವರು ಮಾಡಿರುತ್ತಾರೆ ಎನ್ನುವಂಥ ಆರೋಪವನ್ನು ನಾವು ಅವರ ಮೇಲೆ ಮಾಡಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲವು ಕಡೆಗಳಲ್ಲಿ ಮುಷ್ಕರಗಳಾಗುತ್ತವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಮುಷ್ಕರ ಯಾವರೀತಿ ನಡೆಯುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಒಂದು ಕಡೆ ಏನಾಯಿತು ಅಂದರೆ, ಒಬ್ಬ ಕಂಡಕ್ಟರ್‌ಗೆ ಬಸ್ಸಿನಲ್ಲಿ ಹೆಚ್ಚು ಜನ ಇದ್ದುದರಿಂದ ಎಲ್ಲರಿಗೂ ಟಿಕೆಟ್. ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಒಬ್ಬ ಹೆಣ್ಣು ಮಗಳು ಬಸ್ಸಿನಿಂದ ಇಳಿದು ಕಂಡಕ್ಟರನ್ನು ಸಿಕ್ಕಾಪಟ್ಟೆ ಬೈದು ಟಿಕೆಟ್ ದುಡ್ಡು ಕೊಟ್ಟು ಹೋದಳು. ಆ ಹೆಣ್ಣು ಮಗಳು ಕೆ.ಎಸ್.ಆರ್.ಟಿ.ಸಿ ಯಲ್ಲಿ ಉನ್ನತ ಪದವಿಯಲ್ಲಿರತಕ್ಕ ಒಬ್ಬ ಅಧಿಕಾರಿಯ ಮಗಳು. ಆಕೆ ತಂದೆಗೆ ದೂರು ಕೊಟ್ಟಿದ್ದರಿಂದ ಅವರು ಆಫೀಸಿಗೆ ಕಂಡಕ್ಟರನ್ನು ಕರೆಸಿ ಚೆನ್ನಾಗಿ ಬೈದು, ಬೂಟು ಕಾಲಿನಿಂದ ಆಫೀಸಿನಲ್ಲಿ ಒದ್ದರೆ ಅಲ್ಲಿ ನೋಡುತ್ತಾ ಇರುವಂಥ ಇತರೆ ಕಂಡಕ್ಟರ್ಸ್, ಡ್ರೈವರ್ಸ್ ಮೆಕಾನಿಕರ್‌ಗಳು ನೋಟೀಸ್ ಕೊಡಲಿಕ್ಕೆ ಕಾಯದೆ ಮಿಂಚಿನ ಮುಷ್ಕರ ಹೂಡದೆ ಇದ್ದರೆ ಅವರು ಕಾರ್ಮಿಕರು ಎಂದು ಅನ್ನಿಸಿಕೊಳ್ಳಲಿಕ್ಕೆ ಯೋಗ್ಯರಲ್ಲ. ತಮ್ಮ ಕಣ್ಣು ಮುಂದೆ ತಮ್ಮ ಸಹೋದ್ಯೋಗಿಯನ್ನು ಒಬ್ಬ ಅಧಿಕಾರಿ ಒದೆಯುತ್ತಾರೆ ಅಂದರೆ ಕಾರ್ಮಿಕರು ಎಂದು ಅನ್ನಿಸಿಕೊಂಡವರು ಖಂಡಿತವಾಗಿಯೂ ಮಿಂಚಿನ ಮುಷ್ಕರ ಹೂಡಲೇ ಬೇಕು, ಹೂಡುತ್ತಾರೆ. ಇದರಿಂದ ಸಾರ್ವಜನಿಕರಿಗೆ ಅರ್ಥವಾಗುತ್ತದೆ, ಇವರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ, ಇವರು ನಮ್ಮ ಸೇವೆ ಮಾಡುವಂಥ ಜನ, ಯಾವ ಪ್ರಚೋದನೆಯೂ ಇಲ್ಲದೆ ಇಂಥಾ ಒಂದು ಕ್ರಮ ಇವರು ತೆಗೆದುಕೊಳ್ಳುವುದಿಲ್ಲ ಎಂದು ಅರ್ಥವಾಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಕಕ್ಕಿಲಾಯ ಅವರು ಕಾರ್ಮಿಕ ಮುಖಂಡರು, ಹೇಳುತ್ತಿದ್ದಾರೆ. ಬೂಟು ಕಾಲಿನಿಂದ ಒದ್ದಂಥ ಅಧಿಕಾರಿಯ ಮೇಲೆ ಕಾರ್ಮಿಕರು ಮಿಂಚಿನ ಮುಷ್ಕರ ಹೂಡದೇ ಇದ್ದರೆ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವುದು ಏನು ಗ್ಯಾರಂಟಿ? ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳದೇಹೋದರೆ ಮುಷ್ಕರ ಹೂಡಬಹುದು. ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ಮುಷ್ಕರ ಹೂಡುವುದು ಒಂದೇ ಮಾರ್ಗ ಎಂದು ತಾವೇ ನಿರ್ಧರಿಸಿದರೆ ಹೇಗೆ?

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಸಚಿವರು ಒಳ್ಳೆಯ ವಿಷಯವನ್ನು ಹೇಳಿದರು. ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ಅವರು ಕಳೆದುಕೊಂಡಿದ್ದಾರೆ, ಅದೇ ಇದಕ್ಕೆ ಮುಖ್ಯ ಕಾರಣ. ತಮ್ಮ ಗಮನಕ್ಕೆ ತಂದರೂ ಕೂಡ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ.........

ಶ್ರೀ ಸಿ.ಎಂ. ಇಬ್ರಾಹಿಂ (ಕಾರ್ಮಿಕ ಮಂತ್ರಿಗಳು).—ನೀವು ಈ ಸರ್ಕಾರ ಬಂದಮೇಲೆ ಕೊಟ್ಟಂಥ ಪ್ರತಿಯೊಂದು ವಿಷಯದ ಬಗ್ಗೆಯೂ ಗಮನ ಹರಿಸಿ ಕ್ರಮ ತೆಗೆದುಕೊಂಡಿದ್ದೇವೆ. ಕ್ರಮ ತೆಗೆದುಕೊಳ್ಳದೇ ಇರುವ ಒಂದು ಸಣ್ಣ ಪ್ರಕರಣವನ್ನು ತೋರಿಸಿ ಸಾಕು ಯಾವ ವಿಷಯದ ಬಗೆ ಹೇಳಿದ್ದರೂ ನಾವು ನಿಗಾ ವಹಿಸಿದ್ದೇವೆ. ಪ್ರತಿಯೊಂದರ ಬಗ್ಗೆಯೂ ಗಮನ ಹರಿಸಿ ಪರಿಹಾರ ಮಾಡಿದ್ದೇವೆ. ಕರ್ನಾಟಕ ರಾಜ್ಯದ ೩೦ ವರ್ಷದ ಇತಿಹಾಸದಲ್ಲಿ ಪ್ರತಿಯೊಂದು ಟ್ರೇಡ್ ಯೂನಿಯನಿ ನವರನ್ನು ಕರೆಸಿ ಸಭೆ ಮಾಡಿರತಕ್ಕ ಯಾವುದಾದರೂ ಸರ್ಕಾರ ಇದ್ದರೆ ಹೇಳಿ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಕಾರ್ಮಿಕ ಮಂತ್ರಿಗಳು ನೀವು ಕೇಳಿದ್ದನ್ನೆಲ್ಲಾ ಮಾಡಿದ್ದೇವೆ ಎಂದು ಹೇಳಿದ್ದಾರೆ, ಸಂಯುಕ್ತ ಕರ್ನಾಟಕ ಪತ್ರಿಕೆಯ ನೌಕರ ಕನ್ನಂಬಾಡಿ ಕಟ್ಟೆಗೆ ಬಿದ್ದು ಸತ್ತು ಹೋದ. ಸಂಯುಕ್ತ ಕರ್ನಾಟಕ ಪತ್ರಿಕೆ ವಿವಾದ ಇನ್ನೂ ಬಗೆಹರಿದಿಲ್ಲ. ಈ ಬಗ್ಗೆ ಏನು ಮಾಡಿದ್ದಾರೆ? ಈ ಬಗೆ ಸದನದಲ್ಲಿ ಒಂದೇ ಸಮನೆ ಬಾಯಿ ಬಡಿದುಕೊಂಡರೂ ಏನೂ ಪ ಯೋಜನವಾಗಲಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ಕಾರ್ಮಿಕ ಇಲಾಖೆ ಬೇಡಿಕೆಯ ಮೇಲೆ ಚರ್ಚೆ ನಡೆಯುವಾಗ ಈ ವಿಷಯಗಳನ್ನು ಹೇಳುತ್ತೇನೆ. ಆದರೆ ಈಗ...

ಅಧ್ಯಕ್ಷರು. ಈಗ ಈ ಮಸೂದೆ ಬಗ್ಗೆ ಮಾತನಾಡಿ. ಬೇರೆ ವಿಷಯ ಬೇಡ.

ಶ್ರೀ ಡಿ. ದೇವರಾಜ ಅರಸ್.—ಅದು ಹೇಗೆ ಸಾಧ್ಯ ? ಕಾರ್ಮಿಕ ಮಂತ್ರಿಗಳು ಎಲ್ಲಾ ಮಾಡಿದ್ದೇವೆ ಎಂದು ಹೇಳಿದ್ದಕ್ಕೆ ಅವರು ಕೇಳುತ್ತಿದ್ದಾರೆ. ಅದರಲೇನು ತಪ್ಪು ?

ಅಧ್ಯಕ್ಷರು.—ನಾನು ಇಬ್ಬರಿಗೂ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಇಬ್ಬರಿಗೂ ಹೇಳಿ.

ಶ್ರೀ ಬಸವಲಿಂಗಪ್ಪ.—ಮಾನ್ಯ ಕಾರ್ಮಿಕ ಮಂತ್ರಿಗಳು ೩೦ ವರ್ಷದ ಅನುಭವವನ್ನು ಹೇಳುತ್ತಿದ್ದಾರೆ. ಆದರೆ ಅವರ ವಯಸ್ಸೇ ಇನ್ನೂ ೩೨ ವರ್ಷ.

ಶ್ರೀ ಸಿ.ಎಂ. ಇಬ್ರಾಹಿಂ.—ನಾನು ಹೇಳುತ್ತಿಲ್ಲ. ಕಾರ್ಮಿಕ ನಾಯಕರು ಹಾಗೆ ಹೇಳುತ್ತಿದ್ದಾರೆ. ೩೦ ವರ್ಷದಿಂದ ಯಾರೂ ಮಾಡದೇ ಇದ್ದಂಥ ಕೆಲಸ ನೀವು ಮಾಡಿದ್ದೀರಿ ಎಂದು ಕಾರ್ಮಿಕ ನಾಯಕರು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಇಬ್ರಾಹಿಂ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರಿಗೆ ಶಹಬಾಸ್‌ಗಿರಿ ಕೊಡೋಣ. ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನಿಲ್ಲಿಸಿದ್ದಾರೆ. ಅಲ್ಲಿನ ಕಾರ್ಮಿಕರು ಮುಷ್ಕರ ಹೂಡಿದ್ದರು. ಆ ಬಗ್ಗೆ ಸಂಧಾನ ಮಾಡಲು ಎರಡು ಮೂರು ಸಭೆಗಳನ್ನು ಮಾಡಿದ್ದಾರೆ. ಆದರೂ ಏನೂ ಪ್ರಯೋಜನವಾಗಲಿಲ್ಲ. ಈ ಕೆಲಸ ಇಬ್ರಾಹಿಂ ಅವರ ಕೈಯಲ್ಲಿ ಆಗುವುದಿಲ್ಲ, ಮುಖ್ಯ ಮಂತ್ರಿಗಳೇ ಮಾಡಲಿ ಎಂದು ನಾನು ಅವತ್ತೇ ಹೇಳಿದ್ದೆ. ಇವತ್ತೂ ಹೇಳುತ್ತಿದ್ದೇನೆ. ಈ ಬೆಂಗಳೂರು ಡೈರಿ ಕಾರ್ಮಿಕರು ಮುಷ್ಕರ ಮಾಡಿದ್ದಾರೆ. ಸಾರ್ವಜನಿಕರಿಗೆ ಹಾಲು ಸಿಗುತ್ತಿಲ್ಲ. ಕಾರ್ಮಿಕರನ್ನು ಕರೆದು ಏನಾದರು ಮಾತನಾಡಿದ್ದಾರಾ ? ಇವರಿಗೆ ಶಹಬಾಸ್‌ಗಿರಿ ಏತಕ್ಕೆ ಕೊಡಬೇಕು ? ಹೀಗೆ ಹಲವಾರು ಸಮಸ್ಯೆಗಳು ತಲೆಮೇಲೆ ಕುಳಿತಿದೆ. ಆದರೂ ಇಬ್ರಾಹಿಂ ಅವರು ಎಲ್ಲಾ ಮಾಡಿದ್ದೇವೆ, ಎಲ್ಲಾ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಏನು ಮಾಡಿರುವುದು ? ನಾವು ಮಾಡಿದ್ದೇವೆ, ನೀವು ಮಾಡಿದ್ದೀರಿ. ಹಿಂದೆ ಹಿರಿಯರು ಮಾಡಿದ್ದಾರೆ. ಅವರು ಅವರಿಗೆ ತಿಳಿದ ಹಾಗೆ ಮಾಡಿದ್ದಾರೆ. ಮುಂದೆ ಬರುವವರು ಅವರಿಗೆ ತಿಳಿದಹಾಗೆ ಮಾಡುತ್ತಾರೆ. ಇಬ್ರಾಹಿಂ ಸಾಹೇಬರಿಗೆ ಮಾಡುವುದಕ್ಕೆ ಎಷ್ಟು ಶಕ್ತಿ ಇದೆಯೋ ಅಷ್ಟನ್ನು ದಯಮಾಡಿ ಮಾಡಲಿ. ಜನಗಳಿಗೆ ಸೇವೆ ಮಾಡಲಿ. ಮುಷ್ಕರಗಳು ಇತ್ಯಾದಿಗಳು ನಡೆದಾಗ ಅದನ್ನು ನಿವಾರಣೆ ಮಾಡಿ. ಸಂಯುಕ್ತ ಕರ್ನಾಟಕದ ಬಗ್ಗೆ ಸರಿ ಮಾಡಿಬಿಡುತ್ತೇನೆ ಎಂದು ನೀವು (ಸಿ.ಎಂ. ಇಬ್ರಾಹಿಂ) ಎದೆ ತಟ್ಟಿಕೊಂಡಿರಿ. ಆದರೆ ಇವತ್ತಿನವರೆಗೆ ಮಾಡಿಲ್ಲ. ಯಾರೋ ಒಬ್ಬರು ಕನ್ನಂಬಾಡಿ ಕಟ್ಟೆಗೆ ಬಿದ್ದು ಸತ್ತಿದ್ದಾರೆ ಎಂದು ಮಾನ್ಯ ಗಂಗಾಧರನ್ ಅವರು ಹೇಳಿದರು ಸರಕಾರದವರು ಅವನು ಸಾಯುವುದನ್ನು ತಪ್ಪಿಸಿದ್ದಾರೆಯೋ ? ನೌಕರರು ಉಪವಾಸ ಇರುವುದನ್ನು ನಿಲ್ಲಿಸಿದ್ದಾರೆಯೋ ? ಕಾಗದದ ಮೇಲೆ ಭರವಸೆಗಳನ್ನು ಕೊಟ್ಟಿದ್ದೀರಿ ಅಷ್ಟೆ.

ಶ್ರೀ ಆರ್. ಗುಂಡೂರಾವ್.—ನೀವು ನಿಲ್ಲಿಸಿದಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಿ. ಸನ್ಮಾನ ಮಾಡುತ್ತೇವೆ.

SRI C.M. IBRAHIM.– Sir,.........

MR SPEAKER.—The Chief M nister is here, he has moved the Bill for consideration. He will ready. Why-are you interfering. You please avoid interference Let us go further.

ಅಧ್ಯಕ್ಷರು.—ಕಕ್ಕಿಲಾಯ ಅವರ ಭಾಷಣ ಮುಗಿಯಿತು ಎಂದು ಕಾಣುತ್ತದೆ.

ಶ್ರೀ ಬಿ.ವಿ. ಕಕ್ಕಿಲಾಯ.—ಶಾಸನದ ಒಂದೊಂದು ಅಂಶಗಳನ್ನೂ ತೆಗೆದು ನಮ್ಮ ಅನುಭವದಿಂದ ಸದನಕ್ಕೆ ತಿಳಿಸಬೇಕಾಗುತ್ತದೆ. ನಾನು ನನ್ನ ಭಾಷಣವನ್ನು ಮುಗಿಸಬೇಕಾದರೆ ಇನ್ನೂ ಅರ್ಧ ಗಂಟೆಯಾದರೂ ಬೇಕು. ಏತಕ್ಕೆಂದರೆ ಇದು ಬಹಳ ಮುಖ್ಯವಾದ ಮಸೂದೆ, ಆಡಳಿತ ಪಕ್ಷಕ್ಕೆ ಬಹುಮತ ಇದೆ, ಪಾಸ್ ಮಾಡಿಕೊಳ್ಳಬಹುದು, ಅದು ಬೇರೆ ವಿಚಾರ. ಆದರೂ ನಾವು ಇದರಲ್ಲಿರತಕ್ಕ ಲೋಪದೋಷಗಳನ್ನು, ನ್ಯೂನತೆಗಳನ್ನು ಹೇಳಬೇಕಾಗಿದೆ. ಇದು ಬರೀ ತಿದ್ದುಪಡಿ ಮಸೂದೆ ಅಲ್ಲ. ಇದು ಒಂದು ಒರಿಜಿನಲ್ ಬಿಲ್.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ಒಂದು ಗಂಟೆ ಬೇಕು ಎಂದು ಹೇಳುತ್ತಾರೆ, ನೀವು ಅರ್ಧ ಗಂಟೆ ಬೇಕು ಎಂದು ಹೇಳುತ್ತೀರಿ. ಮತ್ತೆ ಇನ್ನೂ ಮಾತನಾಡಬೇಕಾದ ಸದಸ್ಯರು ಬಹಳ ಜನರಿದ್ದಾರೆ.

ಶ್ರೀ ಬಿ.ವಿ. ಕಕ್ಕಿಲಾಯ.—ಇಲ್ಲಿರುವ ಪ್ರಶ್ನೆಯೇನೆಂದರೆ ಇದು ಒಂದು ತಿದ್ದುಪಡಿ ಮಸೂದೆ ಅಲ್ಲ. ಒರಿಜನಲ್ ಮಸೂದೆ. ಇದು ಇಂಡಸ್ಟ್ರಿಯಲ್ ಆಕ್ಟ್‌ಗೆ ಮತ್ತು ಅವರ ಪ್ರತಿಯೊಂದು ಕಲಮಿಗೂ ವಿರೋಧವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದು ನನ್ನ ಕರ್ತವ್ಯ. ಕಾರ್ಮಿಕರ ಸಮಸ್ಯೆಗಳು ಹಲವಾರಿರುತ್ತವೆ. ಉದಾಹರಣೆಗೆ ಆಟೋರಿಕ್ಷಾ ವಿಚಾರ ತೆಗೆದುಕೊಂಡರೆ ಇದು ಖಾಸಗೀ ಮಾಲೀಕರ ಕೈಯ್ಯಲ್ಲಿದೆ. ಖಾಸಗೀ ಮಾಲೀಕರನ್ನು ಯಾವ ರೀತಿ ಹತೋಟಿಗೆ ತರುತ್ತೀರಿ ಎಂಬುದು ಇದರಲ್ಲಿಲ್ಲ. ಕಾರ್ಮಿಕರು ಮುಷ್ಕರ ಮಾಡಬಾರದು ಎಂದು ಈ ಮಸೂದೆಯನ್ನು ತರುತ್ತಿದ್ದೀರಿ. ಆದರೆ ಮಾಲೀಕರನ್ನು ಹತೋಟಿಯಲ್ಲಿ ಯಾವ ರೀತಿ ಇಟ್ಟುಕೊಳ್ಳುತ್ತೀರಿ ಎಂಬುದು ಇಲ್ಲ. ಇಂಥ ಹಲವಾರು ಗಂಭೀರವಾದ ಪ್ರಶ್ನೆ ಇದರಲ್ಲಿದೆ. ನಾನು ಸರ್ಕಾರವನ್ನು ಟೀಕೆ ಮಾಡುವ ಉದ್ದೇಶದಿಂದ ಇದನ್ನೆಲ್ಲಾ ಹೇಳುತ್ತಿಲ್ಲ. ನೀವು (ಕಾಂಗ್ರೆಸ್ ಸರಕಾರ) ಅಧಿಕಾರಕ್ಕೆ ಬಂದಿದ್ದೀರಿ. ನಿಮ್ಮ ಕಾಳಜಿ ಏನು ಎಂಬುದು ನನಗೆ ಅರ್ಥವಾಗುತ್ತದೆ ಆದರೆ ಇದೊಂದು ಮುಖ್ಯವಾದ ಮಸೂದೆಯಾದ್ದರಿಂದ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ನನಗೆ ಅರ್ಧ ಗಂಟೆಯಾದರೂ ಅವಕಾಶ ಬೇಕಾಗುತ್ತದೆ. ಇವತ್ತು ಬೆಳಗ್ಗೆ ೯ ಗಂಟೆಯಿಂದ ಕುಳಿತಿದ್ದೇವೆ. ಆಯಾಸ ಆಗಿದೆ. ಸ್ವರ ಬರುವುದಿಲ್ಲ. ಆದ್ದರಿಂದ ದಯಮಾಡಿ ನಾಳೆ ಸಮಯ ಕೊಟ್ಟರೆ ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಮುಗಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ನಾಳೆ ಇದನ್ನು ಪಾಸ್ ಮಾಡೇ ಮಾಡುತ್ತೇವೆ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾಳೆ ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಹೊತ್ತು ಸೇರೋಣ.

ಶ್ರೀ ಆರ್. ಗುಂಡೂರಾವ್.—ಆಗಲಿ, ನನ್ನ ಅಭ್ಯಂತರವೇನಿಲ್ಲ.

MR. SPEAKER.—It was agreed in the Business Advisory Committee that this Bill be passed in this session only even if it is taken up for consideration on the 6th.

ಶ್ರೀ ಹೆಚ್. ಡಿ. ದೇವೇಗೌಡ.—ಈ ಮಸೂದೆಯನ್ನು ಚರ್ಚೆ ಮಾಡುವುದಕ್ಕೆ ಒಪ್ಪಿದ್ದೇವೆ. ಎರಡು ದಿನ ಸಭೆ ಯಾವ ಕಲಾಪವನ್ನೂ ಮಾಡದೇ ಮುಂದುವರಿಯಬೇಕಾದ ಪರಿಸ್ಥಿತಿ ಒದಗಿಬಂತು. ಆದ್ದರಿಂದ ಪರಿಸ್ಥಿತಿ ಹೀಗಾಗಿದೆ. ಈ ಮಸೂದೆ ಬಗ್ಗೆ ಚರ್ಚೆ ಮಾಡಿ ಅದನ್ನು ಪಾಸ್ ಮಾಡಿಕೊಡತಕ್ಕ ಬಗ್ಗೆ ಯಾವ ತಕರಾರಿಲ್ಲ. ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವಂಥ ಅನೇಕ ವಿಷಯಗಳನ್ನು ಇವತ್ತು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಅದನ್ನು ನಾಳೆ ದಿವಸ ತೆಗೆದುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಈ ಮಸೂದೆಯನ್ನೂ ಪಾಸ್ ಮಾಡಿಕೊಡಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನಾವೂ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈ ಮಸೂದೆಯು ಕೊನೆಯಲ್ಲಿ ಶ್ರೀ ದೇವರಾಜ ಅರಸ್ ಎಂದು ಅಚ್ಚಾಗಿದೆ. ನಾಳೆ ಬೆಳಕು ಹರಿಯುವುದರೊಳಗಾಗಿ ಪರಿಸ್ಥಿತಿ ಏನಾದರೂ ಬದಲಾವಣೆ ಆಗುತ್ತದೋ ಏನೋ ಗೊತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಏನು ಬದಲಾವಣೆಯಾದರೂ ನೀವಂತೂ ಮಂತ್ರಿಯಾಗುವುದಿಲ್ಲ. ಆ ಉದ್ದೇಶದಿಂದಲೇ ಆಗ ಈ ಕಡೆ ಬಂದಿದ್ದಿರಿ, ಆದರೆ ಏನೂ ಪ್ರಯೋಜನವಾಗಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಏನು ಮಾಡುವುದು ನಾನು ಯಾರಿಗೂ ಗುಲಾಮನಲ್ಲವಲ್ಲ. ಗುಲಾಮನಾಗಿದ್ದರೆ ಮಂತ್ರಿಯಾಗುತ್ತಿದ್ದೆ.

ಶ್ರೀ ಆರ್. ಗುಂಡೂರಾವ್. - ಗುಲಾಮರಾಗೇ ಬಂದಿದ್ದಿರಿ. ಸುಮ್ಮನೆ ಇಲ್ಲ ಎಂದು ಏತಕ್ಕೆ ಹೇಳುತ್ತೀರಿ ? ನಮಗೆ ಹೇಳಬೇಡಿ ಅದನ್ನೆಲ್ಲಾ. ನಾನು ಹೇಳುತ್ತಿರುವುದೇನೆಂದರೆ ಇಲ್ಲಿ ಪಾಸಾಗುವ ಈ ಮಸೂದೆ ವಿಧಾನ ಪರಿಷತ್ತಿನಲ್ಲೂ ಪಾಸ್ ಆಗಬೇಕಾಗಿದೆ. ಆದ್ದರಿಂದ ತುರ್ತಾಗಿ ಈ ಮಸೂದೆ ಪಾಸಾಗಬೇಕಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮ ಅಭ್ಯಂತರವೇನೂ ಇಲ್ಲ. ನಾವು ಚರ್ಚೆ ಆಗಬೇಕು ಎಂದು ಹೇಳುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರು ಕಾಲ ನಿಗದಿ ಮಾಡುವುದಕ್ಕೋಸ್ಕರ ಯಾರು ಯಾರು ಮಾತನಾಡುತ್ತೀರಿ ಎಂದು ಕೇಳಿದ್ದಾರೆ. ಮುಂದೆ ತೊಂದರೆಯಾಗದಿರಲಿ ಎಂಬ ಉದ್ದೇಶದಿಂದ ಯಾರು ಯಾರು ಮಾತನಾಡುತ್ತೀರಿ, ಎಷ್ಟೆಷ್ಟು ಕಾಲ ಬೇಕು ಎಂದು ಕೇಳಿದ್ದಾರೆ. ಚರ್ಚೆ ಪ್ರಾರಂಭವಾದ ಮೇಲೆ ಹಲವಾರು ಜನ ಮಾತನಾಡಬೇಕು ಎಂದು ಮುಂದೆ ಬರುತ್ತಾರೆ.

ಇಂದಿನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯಗಳಿವೆ. ಆದರೆ, ಅವುಗಳನ್ನು ಇಂದು ಚರ್ಚೆಗೆ ತೆಗೆದುಕೊಳ್ಳಲು ಆಗಿಲ್ಲ. ಆದುದರಿಂದ, ನಾಳೆ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡೂ ಹೊತ್ತು ಸಭೆ ಸೇರಿ ಈಗ ನಮ್ಮ ಮುಂದಿರುವ ಮಸೂದೆ ಮತ್ತು ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಚಾರಗಳನ್ನು ಚರ್ಚೆ ಮಾಡಬೇಕು. ನಾಳೆಯೂ ಸಾಧ್ಯವಾಗದಿದ್ದರೂ ನಾಡಿದ್ದಾದರೂ ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಚಾರಗಳನ್ನು ಚರ್ಚೆಗೆ ತೆಗೆದು ಕೊಳ್ಳಲೇಬೇಕು. ಅವುಗಳನ್ನು ಮೊಟಕುಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಾಳೆಯ ಕಾರ್ಯಕ್ರಮದ ಪಟ್ಟಿ ಈಗಾಗಲೇ ಒಪ್ಪಿಗೆಯಾಗಿ ಮುದ್ರಣಕ್ಕೆ ಹೋಗಿದೆ

ಶ್ರೀ ಡಿ. ದೇವರಾಜ ಅರಸ್.—ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಬಹಳ ಮುಖ್ಯವಾದ ವಿಚಾರಗಳಿವೆ ಅವುಗಳ ಬಗ್ಗೆ ಇಂದು ಚರ್ಚೆ ಮಾಡಲು ಆಗಲಿಲ್ಲ ಎಂದು ಮಾನ್ಯ ದೇವೇಗೌಡರು ಹೇಳಿದರು. ಆದುದರಿಂದ, ಅವುಗಳನ್ನು ಬೇಕಾದರೆ ನಾಳೆ ಚರ್ಚೆಗೆ ತೆಗೆದುಕೊಂಡು ಮುಗಿಸಿ, ನಂತರ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಆರ್. ಗುಂಡೂರಾವ್.—ಅದಕ್ಕೆ ನನ್ನ ವಿರೋಧವಿಲ್ಲ. ನಾಡಿದ್ದಾದರೂ ಕುಳಿತು ನಾವು ಈ ಮಸೂದೆಯನ್ನು ಅಂಗೀಕರಿಸಲೇಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ —ನಾವು ನಾಡಿದ್ದು ಕುಳಿತುಕೊಳ್ಳುವುದಿಲ್ಲವೆಂದು ಹೇಳಿದ್ದೇವೆಯೆ ? ನೀವೇ ಆತುರ ಮಾಡುತ್ತಿದ್ದೀರಿ.

ಶ್ರೀ ಆರ್. ಗುಂಡೂರಾವ್. ಈ ಮಸೂದೆ ವಿಧಾನ ಪರಿಷತ್ತಿನಲ್ಲೂ ಅಂಗೀಕಾರ ವಾಗಬೇಕಾಗಿರುವುದರಿಂದ ನಾನು ಈ ರೀತಿ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ನಾಳೆ ಈ ಮಸೂದೆಯನ್ನು ತೆಗೆದುಕೊಂಡು ಚರ್ಚೆ ಮಾಡಿ ಬೇಕಾದರೆ ಮುಗಿಸೋಣ. ಇಲ್ಲ. ನಮಗೆ ಈಗಲೇ ಅಂಗೀಕಾರವಾಗಬೇಕೆಂದು ತಾವು ಬಯಸುವುದಾದರೆ, ಈಗಲೇ ಅಂಗೀಕಾರ ಮಾಡಿಸಿಕೊಳ್ಳಿ.

ಶ್ರೀ ಆರ್. ಗುಂಡೂರಾವ್.— ಇವತ್ತೇ ಅಂಗೀಕಾರ ಮಾಡಬೇಕೆಂದಿನಿಲ್ಲ.

ಶ್ರೀ ಡಿ.ದೇವರಾಜ ಅರಸ್.—ಹಾಗೆಂದ ಮೇಲೆ, ಮಾನ್ಯ ದೇವೇಗೌಡರು ಹೇಳಿದ ಹಾಗೆ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಉಳಿದಿರುವ ಪ್ರಾಮುಖ್ಯವಾದ ವಿಚಾರಗಳನ್ನು ಮುಗಿಸಿಬಿಡಿ ಆಮೇಲೆ, ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡರೆ ಸಮಯದ ಪ್ರಶ್ನೆಯನ್ನು ಹೆಚ್ಚು ಕಡಮೆ ಹೊಂದಿಸಿಕೊಳ್ಳಬಹುದು. ಇದು ಬಹಳ ಪ್ರಾಮುಖ್ಯವಾದ ಮಸೂದೆ. ಈ ಮಸೂದೆಯನ್ನು ಇಂಟ್ರಡ್ಯೂಸ್ ಮಾಡಿದ್ದು ನಾನೇ ; ಅದು ನಿಜ. ಆದರೆ, ಇದನ್ನು ನಾನೇತಕ್ಕೆ ಮುಂದುವರಿಸಲಿಲ್ಲವೆನ್ನುವುದನ್ನು ನಾನು ಮಾತನಾಡುವಾಗ ಹೇಳುತ್ತೇನೆ. ಈ ಮಸೂದೆ ನನ್ನ ಹೆಸರಿನಲ್ಲೇ ಬಂದಿದೆ ಎಂದು ಯಾರೋ ಹೇಳಿದರು. ಬಹುಶಃ ಅದು ಕೈತಪ್ಪಿ ಬಂದಿರಬಹುದು. ಅಲ್ಲದೆ, ನನ್ನ ಹೆಸರಿನಲ್ಲಿ ಮಸೂದೆ ಬಂದರೆ ಅದು ಸುಲಭವಾಗಿ ಅಂಗೀಕಾರವಾಗಬಹುದೆಂದು ಅವರು ಭಾವಿಸಿರುವರೇನೋ ನನಗೆ ಗೊತ್ತಿಲ್ಲ. ಬಹಳ ಪ್ರಾಮುಖ್ಯವಾದ ಮಸೂದೆಯನ್ನು ಸುಲಭವಾಗಿ ಅಂಗೀಕಾರ ಮಾಡುವುದಕ್ಕಾಗುವುದಿಲ್ಲ. ಇದರ ಮೇಲಿನ ಚರ್ಚೆಗೆ ಸಾಕಷ್ಟು ಸಮಯ ಬೇಕಾಗುತ್ತದೆ. ಬರೀ ವಿತ್ತಂಡವಾದ ಹೂಡಿ ಸಮಯ ಕಳೆಯುವ ಅಗತ್ಯ ಯಾರಿಗೂ ಇಲ್ಲ. ಇದು ಬಹಳ ಪ್ರಾಮುಖ್ಯವಾದ ಮಸೂದೆ ಯಾದ್ದರಿಂದ, ನಾವು ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ ; ಆ ಅಧಿಕಾರವೂ ನಮಗಿದೆ,

ಶ್ರೀ ಹೆಚ್. ಡಿ. ದೇವೇಗೌಡ.—ಈ ಮಸೂದೆಯನ್ನು ಚರ್ಚೆಗೆ ನಾಳೆ ತೆಗೆದುಕೊಳ್ಳುವುದಾದರೆ, ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಷಯಗಳನ್ನು ನಾಡಿದ್ದು ತೆಗೆದುಕೊಳ್ಳಬೇಕಾಗುತ್ತದೆ ಅಥವಾ ಮಸೂದೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡು, ಮುಗಿಸಿ, ಮಧ್ಯಾಹ್ನ ಉಳಿದ ವಿಷಯಗಳನ್ನು ತೆಗೆದು ಕೊಳ್ಳಬಹುದು.

ಶ್ರೀ ಆರ್. ಗುಂಡೂರಾವ್.—ನಾನೂ ಸಹ ಅದನ್ನೇ ಹೇಳುತ್ತಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದು ಬಹಳ ಪ್ರಾಮುಖ್ಯವಾದ ಮಸೂದೆ ಎಂದು ಹೇಳುತ್ತಿದ್ದಾರೆ. ಸರ್ಕಾರಕೂ ಸಹ ಇದು ಬಹಳ ಪ್ರಾಮುಖ್ಯವಾದ ಮಸೂದೆಯೇ. ಕೋಟ್ಯಾಂತರ ಜನರಿಗೆ ಇದು ಅನ್ವಯಿಸುತ್ತದೆ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಎಷ್ಟು ಗಂಟೆಗಳನ್ನು ಬೇಕಾದರೂ ತೆಗೆದುಕೊಳ್ಳಿ. ನಾಳೆ ಮಧ್ಯಾಹ್ನ ಬೇಕಾದರೂ ತೆಗೆದುಕೊಳ್ಳಿ. ಆಮೇಲೆ ಇನ್ನಿತರ ವಿಷಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಕ್ಕಿಲಾಯ ಅವರು ಈಗಾಗಲೇ ಮಸೂದೆ ಮೇಲೆ ಮಾತನಾಡಿದ್ದಾರೆ. ಅಲ್ಲದೆ ಈಗ ಸಮಯವಾಗಿರುವುದರಿಂದ ನಾಳೆ ಬೆಳಿಗ್ಗೆಯಿಂದ ಇದನ್ನು ಮುಂದುವರಿಸೋಣವೆಂದು ಕೆಲವು ಸದಸ್ಯರು ಅಭಿಪ್ರಾಯ ಪಟ್ಟಿದ್ದಾರೆ. ಕೋಟ್ಯಾಂತರ ಜನ ಈ ಮಸೂದೆ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಇದರ ಬಗ್ಗೆ ವಿಭಿನ್ನ ಪ್ರತಿಕ್ರಿಯೆಯನ್ನು ದೇಶದ ಜನ ತೋರಿಸಬಹುದು. ಆದುದರಿಂದ, ಇದನ್ನು ನಾಳೆ ಬೆಳಿಗ್ಗೆ ಚರ್ಚೆಗೆ ತೆಗೆದುಕೊಂಡು ಎಷ್ಟು ಹೊತ್ತಾದರೂ ಸರಿ, ಮುಗಿಸಿ, ನಂತರ ಉಳಿದ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಉಳಿದಿರುವ ವಿಷಯಗಳನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಕಕ್ಕಿಲಾಯ ಅವರು ಈಗಾಗಲೇ ಮಸೂದೆ ಮೇಲೆ ಮಾತನಾಡಿದ್ದಾರೆ. ಆದುದರಿಂದ, ಮಸೂದೆ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರಿಸಿದರಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಳೆ ಬೆಳಿಗ್ಗೆ ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಿ ಅದನ್ನು ಮಧ್ಯಾಹ್ನಕ್ಕೆ ಇಟ್ಟುಕೊಳ್ಳೋಣ. ಬೆಳಿಗ್ಗೆ ಮಸೂದೆ ಮೇಲೆ ಚರ್ಚೆ ಮಾಡಿ ಅದನ್ನು ಅಂಗೀಕರಿಸೋಣ.

ಶ್ರೀ ಆರ್. ಗುಂಡೂರಾವ್.—ಈ ಮಸೂದೆ ವಿಧಾನ ಪರಿಷತ್ತಿನಲ್ಲೂ ಅಂಗೀಕಾರವಾಗ ಬೇಕಾಗಿರುವುದರಿಂದ, ಇಲ್ಲಿ ನಾಳೆ ಬೆಳಿಗ್ಗೆ ಚರ್ಚೆ ಪ್ರಾರಂಭಿಸಿ, ಅಂಗೀಕಾರ ಮಾಡೋಣ.

6. 30 P. M.

Sir, the discussion will start tomorrow in the morning. Sri Kakkilaya will continue his speech. The questions, Calling Attention notices, Privilege issue and other things will be taken up straight away in the afternoon.

SRI C. M. ARUMUGHAM.—Sir, now you have heard both the sides, therefore, please take a decision and announce it.

MR. SPEAKER.—After hearing both sides of the House, I have decided that the House may meet at 9.00 A. M. tomorrow. First of all, we will take up the Karnataka Essential Services maintenance Bill and then the other busiuesses will be taken up in the afternoon. If necessary the House will sit on 7th May 1980 also.

Now, the House stands adjourned to meet at 9.00 A. M. on 6th May 1980.

The House adjourned at Thirty minutes past six of the Clock t. meet again 9 A.M. on 6th May, 1980.

ANNEXURE

THE KARNATAKA SHEEP AND SHEEP PRODUCTS DEVELOPMENT (AMENDMENT) BILL, 1980.

(L.A. Bill No. 20 of 1980)

A Bill further to amend the Karnataka Sheep and Sneep Products Development Act, 1973.

Whereas it is expedient further to amend the Karnataka Sheep and Sheep products Development (Amendment) Act, 1973 (Karnataka Act 12 of 1974) for the purposes hereinafter appearing;

Be it enacted by the Karnataka State Legislature in the Thirty-first year of the Republic of India as follows:—

1. **Short title and commencement**.—(1) This Act may be called the Karnataka Sheep and Sheep Products Development (Amendment) Act, 1980.

(2) They shall come into force at once.

2. **Amendment of Section 4.**—In section 4 of the Karnataka Sheep and Sheep Products Development Act, 1973 (Karnataka Act 12 of 1974) in sub-section (1) for the words "The terms of office of the Chairman" the words "Subject to the pleasure of the State Government, the term of office of the Chairman" shall be and shall be deemed always to have been substituted.

Statement of Objects and Reasons

It is the policy of the Government that the Chairman and other members of statutory and non-statutory bodies owned or controlled by the Government should hold office at the pleasure of Government.

This provision has been made in several enactments.

It has been decided to amend the Karnataka Sheep and Sheep Product Development Act, 1973 (Karnataka Act 12 of 1974), also to make a similar provision to bring it in line with the said policy of Government.

Hence this Bill.

Y. RAMAKRISHNA

T. VENKATASWAMY,
Secretary

ANNEXURE

Extract from the Karnataka sheep and sheep products Development Act 1973.

4. Constitution of the Board.—(1) The Board shall consist of such number of members not exceeding twenty three as the State Government may appoint. One of the members shall be appointed by the State Government as the Chairman.

(2) The Chairman, or any other member of the Board may at any time resign his office by a letter resignation addressed to the State Government:

Provided that the resignation shall not take effect until it is accepted.

(3) The Chairman, and other Members shall be entitled to such allowances and such conditions of service in respect of leave and other matters as may be prescribed and the allowances shall be paid from the funds of the Board.

(4) The term of office of the Chairman and the other members of the Board shall be three years from the date of publication of their names in the official Gazette:

Provided that the term of office of the outgoing members shall be deemed to extend to and expire with the date on which the names of their successors are published in the official Gazette.

(5) The Chairman and the other members shall be eligible for re-appointment.

(6) Any casual vacancy shall be filled by Government by nomination and the person so nominated shall hold office so long only as the member in whose place he is nominated would have held it, if the vacancy has not occured.

WD 2181

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Tuesday, the 6th May 1980, / Vaishaka 16, 1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

ಶ್ರೀ ಹಾರ್ನಳ್ಳಿ ರಾಮಸ್ವಾಮಿ.— ಮಾನ್ಯ ಅಧ್ಯಕ್ಷರೆ. ಈ ದಿನ ಪ್ರಶ್ನೋತ್ತರ ವೇಳೆ ಇಲ್ಲವೆಂದು ಕಾಣುತ್ತದೆ. ಏಕೆಂದರೆ ಸಭೆ ಕುರಿತ ತಕ್ಷಣ ಬಿಲ್ ತೆಗೆದುಕೊಳ್ಳುವಹಾಗೆ ಕಾಣುತ್ತಿದೆ. ನಾನು ನಿನ್ನೆ ಒಂದು ಸೂಚನೆಯನ್ನು ಕೊಟ್ಟಿದ್ದೆ. ಸಭೆಯ ಹಕ್ಕು ಭಾದ್ಯತೆಗಳಿಗೆ ಸಂಬಂಧಪಟ್ಟ...

ಅಧ್ಯಕ್ಷರು.— ಈ ದಿನ ಈ ಬಿಲ್ ಮುಗಿದ ಮೇಲೆ ಮಧ್ಯಾಹ್ನ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. ಆದ ರಿಂದ ಈ ಬಿಲ್ ಮೇಲಿನ ಚರ್ಚೆಯನ್ನು ಈಗ ಮುಂದುವರಿಸಬಹುದು.

LEGISLATIVE BUSINESS

KARNATAKA ESSENTIAL SERVICES MAINTENANCE BILL, 1979.

(Discussion continued)

† ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ್).— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಈ ಮಸೂದೆಯನ್ನು ತರುವುದಕ್ಕೆ ಯಾವುದೇ ತರಹದ ಕಾರಣವೂ ಇಲ್ಲ ಎನ್ನುವುದನ್ನು ನಾನು ನಿನ್ನೆ ಪ್ರಸ್ತಾಪ ಮಾಡಿದ್ದೇನೆ. ಇದನ್ನು ತರಬೇಕೆನ್ನುವ ವಿಶೇಷ ಕಾರಣ ಅವರಿಗೆ ಕಂಡು ಬಂದಿರುವಾಗ. ಆಡಳಿತವನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಆಗುವುದಿಲ್ಲವೆಂದು ಅವರೇ ಒಪ್ಪಿಕೊಂಡ ಹಾಗೆ ಆಗುತ್ತದೆ. ನಮ್ಮ ರಾಜ್ಯದಲ್ಲಿ ಇಂತಹ ಕಾನೂನುಗಳು ಸರ್ಕಾರದಲ್ಲಿ ಇಲ್ಲದೇ ಹೋದರೆ ಸಾರ್ವಜನಿಕ ಜೀವನ ಸುಸೂತ್ರವಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲವೆಂದರೆ, ಎಷ್ಟರಮಟ್ಟಿಗೆ ಈ ರಾಜ್ಯದ ಒಂದು ಆಡಳಿತ ಕೆಟ್ಟು ಹೋಗಿದೆ ಎಂದು ಅವರೇ ಒಪ್ಪಿಕೊಂಡಹಾಗಾಗುತ್ತದೆ. ಇದನ್ನು ಸರ್ಕಾರ ಒಪ್ಪುತ್ತದೆಂದು ನನ್ನ ಭಾವನೆ. ಕೆಲವು ಮುಷ್ಕರಗಳು ನಡೆಯುತ್ತವೆ ನಿಜ. ಆ ಮುಷ್ಕರಕ್ಕೆ ಕಾರಣಗಳನ್ನು ಅಧಿಕಾರಿಗಳೂ ಹಾಗೂ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡಿದರೆ ಸಕಾಲದಲ್ಲಿ ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ. ಹಲವು ವಿವಾದಗಳು ತೀರ್ಮಾನವಾಗಿದೆಯೆಂದು ಮಾನ್ಯ ಕಾರ್ಮಿಕ ಸಚಿವರು ಹೇಳಿದರು. ಕೆಲವು ತೀರ್ಮಾನವಾಗಿವೆ, ತೀರ್ಮಾನ ಆಗದೇ ಉಳಿದಿರುವುವೂ ಬಹಳ ಇವೆ. ಕಾರ್ಮಿಕರೂ ಕೂಡ ತಮ್ಮ ವಿವಾದಗಳು ಏನಿವೆ ಅವುಗಳನ್ನು ಕಾನೂನಿನ ಮೂಲಕ ಸರ್ಕಾರಕ್ಕೆ ತಿಳಿಸಿ, ಸರ್ಕಾರ ಮಾಲೀಕರ ಜೊತೆ ಮಾತುಕತೆ ನಡೆಸಿ, ಪರಿಹಾರ ಮಾಡುವುದಕ್ಕೆ ಮಾರ್ಗವನ್ನು ಕಂಡುಹಿಡಿಯಬೇಕಾಗುತ್ತದೆ. ಮುಷ್ಕರ ಹೂಡಿದ ಮೇಲೆ ಅವರು ಶಾಂತಿಯುತವಾಗಿರುತ್ತಾರೆ. ಸಂಯುಕ್ತ ಕರ್ನಾಟಕದವರೇ ಇದಕ್ಕೆ ಉದಾಹರಣೆ. ಎಷ್ಟು ದಿವಸಗಳಾದರೂ ಅವರು ಸಹಾನುಭೂತಿಯಿಂದ ಕುಳಿತುಕೊಂಡಿದ್ದಾರೆಯೋ ಹೊರತು ಅವರು ಯಾವ ಕೃತ್ಯವನ್ನೂ ಸಹನೆ ಕಳೆದುಕೊಂಡು ಮಾಡಿಲ್ಲ. ಸರ್ಕಾರವನ್ನು ಅವರು ಕೇಳುತ್ತಿದ್ದಾರೆ ಆದರೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇಂತಹ ಒಂದು ಮಸೂದೆಯನ್ನು ತರುವುದಕ್ಕೆ ನಮ್ಮ ರಾಜ್ಯದಲ್ಲಿ ಯಾವುದೇ ಒಂದು ಕಾರಣವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ.

ಇನ್ನು ಈ ಮಸೂದೆಯಲ್ಲಿ ಇರುವಂತಹ ಕೆಲವು ಅಂಶಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ದೇಶದಲ್ಲಿ ಕಾನೂನನ್ನು ತರುವುದರ ಬಗ್ಗೆ ಮೂರು ವಿಧಗಳನ್ನು ಅನುಸರಿಸಲಾಗಿದೆ. ಮೊದಲನೆಯದು ಕೇಂದ್ರ ಸರ್ಕಾರದವರು ತರತಕ್ಕಂತಹ ಕಾನೂನುಗಳು, ಎರಡನೆಯದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿ ಮಾಡಿದ ಕಾನೂನುಗಳು, ಕನ್‌ಕರೆಂಟ್ ಲಿಸ್ಟೆಂದು ಇದಕ್ಕೆ ಹೇಳುತ್ತೇವೆ. ಮೂರನೆಯದು ರಾಜ್ಯ ಸರ್ಕಾರಗಳು ಮಾಡತಕ್ಕಂತಹ ಕಾನೂನು. ಈಗ ಇದು ಪೂರ್ತಿಯಾಗಿ ರಾಜ್ಯ ಸರ್ಕಾರಕ್ಕೆ ಒಳಪಟ್ಟ ವಿಚಾರ. ಕನ್‌ಕರೆಂಟ್ ಲಿಸ್ಟ್‌ಗೆ ಒಳಪಟ್ಟ ವಿಚಾರಗಳಲ್ಲಿ ಯಾವುದೇ ಒಂದು ಉದ್ಯಮದ ಬಗ್ಗೆ ಶಾಸನ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ. ವಿಚಾರಗಳನ್ನು ನೋಟಿಫಿಕೇಶನ್ ಮೂಲಕ ಮಸೂದೆಯ ಒಳಕ್ಕೆ ತರಬಹುದು. ಅಂತಹ ಅಧಿಕಾರವನ್ನು ತೆಗೆದುಕೊಳ್ಳಲಾಗಿದೆ. ಇಲ್ಲಿ ಮಾಲೀಕರ ಮತ್ತು ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರಗಳು ಬರುತ್ತವೆ. ಇಲ್ಲಿ ಕಾರ್ಮಿಕರ ವಿಚಾರವಷ್ಟೇ ಅಲ್ಲ, ಟ್ರೇಡ್ ಯೂನಿಯನ್‌ಗೆ ಸಂಬಂಧಪಟ್ಟ ವಿಚಾರಗಳಷ್ಟೇ ಅಲ್ಲ, ಉದಾಹರಣೆಗೆ ಹೇಳುವುದಾದರೆ ಈಗ ಅರಣ್ಯ ಇಲಾಖೆ ಇದೆ. ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಮಾಡಬೇಕು. ಈ ವಿಧೇಯಕಕ್ಕೆ ಸಂಬಂಧಪಟ್ಟ ಶಾಸನ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರುತ್ತದೆ. ಇನ್ನು ಜೂಜುಗಾರಿಕೆ ಸಹಾ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರುತ್ತದೆ. ಇಂತಹ ಹಲವಾರು ವಿಚಾರಗಳು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರುತ್ತವೆ. ಇನ್ನು shop and establishments ಈ ಲಿಸ್ಟ್‌ನಲ್ಲೇ ಬರುತ್ತದೆ. ವಾಣಿಜ್ಯವನ್ನು ನಿಯಂತ್ರಿಸುವ ಮಸೂದೆಯನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ. ಈ ಕಾನೂನಿನ ಮೂಲಕ ತಾವು ಅಧಿಕಾರವನ್ನು ತೆಗೆದುಕೊಂಡು ಎಲ್ಲಾ ಅಂಗಡಿಗಳನ್ನೂ ಕೂಡ, ಅಲ್ಲಿರತಕ್ಕ ನೌಕರರೆಲ್ಲರನ್ನೂ ಕೂಡ ಶಾಸನದಲ್ಲಿ ತೆಗೆದುಕೊಂಡು ಬಂದರೆ ಏನು ಆಗುತ್ತದೆಂದು ಯೋಚನೆ ಮಾಡಬೇಕು. ಜೂಜುಗಾರಿಕೆಯನ್ನು ಶಾಸನದಲ್ಲಿ ತೆಗೆದುಕೊಂಡು ಬಂದರೆ ಏನು ಪರಿಸ್ಥಿತಿಯಾಗುತ್ತದೆಂಬ ತಿಳಿದುಕೊಳ್ಳಿ. ಹಾಗೆ ನೋಡಿದರೆ ಅಗತ್ಯ ಸೌಕರ್ಯಗಳೆಲ್ಲಾ ಈ ಕಾನೂನಿನ ಪರಿಮಿತಿಗೆ ಬರುತ್ತದೆ. ಇದನ್ನು ವ್ಯಾಪಕವಾಗಿ ತೆಗೆದುಕೊಂಡಿದ್ದೇ ಆದರೆ ಪ್ರಪಂಚದಲ್ಲಿನ ಪ್ರತಿಯೊಂದು ವಿಚಾರವನ್ನೂ ಈ ಶಾಸನದ ಒಳಕ್ಕೆ ತರಬಹುದು. ಯಾವುದೇ ಒಂದು ಉದ್ಯಮವನ್ನು ಎಸೆನ್‌ಶಿಯಲ್ ಸರ್ವೀಸ್ ಎಂದು ಮಾಡಬಹುದು. ಇದನ್ನು ವ್ಯಾಪಕವಾಗಿ ತಂದಿದ್ದೀರಿ. ಇದು ಸೂಕ್ತವಾದುದಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಕೆ.ಎಸ್.ಆರ್.ಟಿ.ಸಿ. ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಹಾಲಿನ ಡೈರಿ ವಿಷಯದಲ್ಲಿ ಅವರಿಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಮಗೂ ಇದೆ. ಸಾರ್ವಜನಿಕರಿಗೆ ಹಾಲಿನ ಸರಬರಾಜು ಸುಲಲಿತವಾಗಿ ನಡೆಯಬೇಕೆನ್ನುವುದರಲ್ಲಿ ನಮ್ಮದೇನೂ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಬಿಲ್‌ನಲ್ಲಿ ಟ್ರಾನ್ಸ್‌ಪೋರ್ಟ್ ಎಂದು ಸೇರಿಸಿದ್ದೀರಿ. ಇದು ಕೇವಲ ಕೆ.ಎಸ್.ಆರ್.ಟಿ.ಸಿ.ಗೇ ಸೀಮಿತವಾಗಿಲ್ಲ. ಈ ಟ್ರಾನ್ಸ್‌ಪೋರ್ಟ್‌ನಲ್ಲಿ ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳನ್ನೂ ಸಹಾ ಸೇರಿಸಿದ್ದೀರಿ. ಆಟೋರಿಕ್ಷಾಗಳಿಗೂ ಈ ಟ್ರಾನ್ಸ್‌ಪೋರ್ಟೇಷನ್‌ಗೂ ಏನು ಸಂಬಂಧ ? ಸರ್ಕಾರದ ಅಧೀನದಲ್ಲಿ ಆಟೋಗಳು ಇವೆಯೋ ? ಮಾಲೀಕರು ಡ್ರೈವರ್‌ಸ್‌ಗೆ ವಹಿಸಿಕೊಟ್ಟ ಆಟೋರಿಕ್ಷಾಗಳು ಇವೆ. ಇವುಗಳು ಪಬ್ಲಿಕ್ ಯೂಸ್‌ಗೆ ಇರತಕ್ಕವು. ಲೈಸೆನ್ಸ್ ಪಡೆದು ಓಡಾಡತಕ್ಕ ಈ ವಾಹನಗಳು ನೇರವಾಗಿ ಸರ್ಕಾರದ ಅಧೀನದಲ್ಲಿ ಇಲ್ಲ. ಆಟೋರಿಕ್ಷಾ ಮಾಲೀಕರ ಮತ್ತು ಡ್ರೈವರ್‌ಸ್‌ಗಳ ಸಂಬಂಧದಲ್ಲಿ ಸರ್ಕಾರ ಕೈ ಹಾಕುವುದಕ್ಕೆ ಬರುವುದಿಲ್ಲ. ಸರ್ಕಾರಕ್ಕೆ ನೇರವಾದ ಜವಾಬ್ದಾರಿ ಇಲ್ಲ. ಆಟೋರಿಕ್ಷಾ ಡ್ರೈವರ್‌ಸ್ ಹಾಗೂ ಮಾಲೀಕರ ಮಧ್ಯೆ ಏನೋ ವಿವಾದಗಳು ಬರುತ್ತವೆ. ಪೋಲೀಸಿನವರೇನಾದರೂ ಆಟೋರಿಕ್ಷಾ ಡ್ರೈವರ್‌ಸ್ ಮೇಲೆ ಕೈ ಮಾಡಿದರೆ ಆಟೋದವರು ಹಠಾತ್ತಾಗಿ ಮುಷ್ಕರವನ್ನು ಹೂಡುತ್ತಾರೆ. ಅದನ್ನು ಬಗೆಹರಿಸಬಹುದು. ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ೧೦,೦೦೦ ಆಟೋರಿಕ್ಷಾಗಳಿರಬಹುದು, ನಮ್ಮ ರಾಜ್ಯವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಲಕ್ಷಾಂತರ ಆಟೋರಿಕ್ಷಾಗಳು ಇವೆ. ಇವುಗಳ ಮಾಲೀಕರು ಹಾಗೂ ಚಾಲಕರು ಯಾರು ? ಇವರನ್ನೆಲ್ಲಾ ಈ ಕಾನೂನಿನ ಪರಿಮಿತಿಗೆ ತಂದರೆ ಲಕ್ಷಾಂತರ ಜನರು ಈ ಶಾಸನದಲ್ಲಿ ಒಳಪಡುತ್ತಾರೆ. ಈ ಶಾಸನದ ಮುಖಾಂತರ ಇವರನ್ನೆಲ್ಲಾ ತಮ್ಮ ಅಧೀನಕ್ಕೆ ತಂದುಕೊಂಡು ಅವರಿಗೆ ಬೇಕಾಗತಕ್ಕ ಸವಲತ್ತುಗಳನ್ನೆಲ್ಲಾ ನೀವು ಕೊಡುವುದಕ್ಕೆ ಸಾಧ್ಯವೇ ? ಯಾರು ಇದಕ್ಕೆಲ್ಲಾ ಜವಾಬ್ದಾರರಾಗುತ್ತಾರೆ ! ತಮ್ಮ ಜವಾಬ್ದಾರಿಯನ್ನು ಅರಿತು ಆಟೋ ಚಾಲಕರು ತಮ್ಮ ವಾಹನವನ್ನು ಓಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಅವರು ಆಟೋವನ್ನು ಓಡಿಸುವುದಿಲ್ಲವೆಂದರೆ ಆತನಿಗೆ ಶಿಕ್ಷೆಯನ್ನು ಕೊಡತಕ್ಕಂತಹ ಕಾನೂನನ್ನು ತಾವು ಇದರಲ್ಲಿ ತೆಗೆದುಕೊಂಡು ಬಂದಿದ್ದೀರಿ. ಯಾರು ಅನ್ಯಾಯ ಮಾಡಿರುತ್ತಾರೆ ಅವರಿಗೆ ಕಡ್ಡಾಯವಾಗಿ ಶಿಕ್ಷೆಯನ್ನು ಕೊಡಿ. ಇದು ಒಂದು ನಾಗರಿಕ ಪ್ರಶ್ನೆ. ಇದು ಕಾರ್ಮಿಕರಿಗೇನೇ ಪ್ರತ್ಯೇಕವಾಗಿಲ್ಲ. ಹಾಲು ಇಲ್ಲದಿದ್ದರೆ ಅವನ ಮಕ್ಕಳಿಗೂ ಇರುವುದಿಲ್ಲ. ಎಲ್ಲ

ವನ್ನು ನಡೆಸುವವರು ಕಾರ್ಮಿಕರೇ ಇರುತ್ತಾರೆ, ರೈತರ ಮಕ್ಕಳೇ ಇರುತ್ತಾರೆ. ಸಾರ್ವಜನಿಕರಿಗೆ ತೊಂದರೆ ಉಂಟಾದರೆ ಅವನಿಗೂ ತೊಂದರೆಯುಂಟಾಗುತ್ತದೆ. ಮೂರು ಕೋಟಿ ಕನ್ನಡಿಗರು ಏನು ಇರುತ್ತಾರೆ ಅವರೆಲ್ಲರೂ ಬಹಳ ಜವಾಬ್ದಾರಿಯಿಂದ ವರ್ತಿಸುತ್ತಾರೆ. ಯಾವುದೋ ಕಾರಣಕ್ಕಾಗಿ ಈ ಎಲ್ಲ ಕಾರ್ಮಿಕ ವರ್ಗದವರನ್ನು ಒಂದು ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕು ಎನ್ನುವ ವಿಚಾರಕ್ಕೋಸ್ಕರವಾಗಿ ಒಂದು ಶಾಸನವನ್ನು ಮಾಡಬೇಕು ಎನ್ನುವ ವಾದ ಒಂದು ವಿಚಿತ್ರವಾದ ವಾದವೆಂದು ನಾನು ಹೇಳುತ್ತೇನೆ. ಕಾನೂನು ಮಾಡಿ ಇದನ್ನು ಜಾರಿಗೆ ತಂದರೂ ಕೂಡ ಬಹಳ ಕಷ್ಟವಾಗುತ್ತದೆ. ನಾನು ಒಬ್ಬ ಆಟೋರಿಕ್ಷಾ ಡ್ರೈವರ್‌ನ್ನು ಕೆಲವೊಂದು ಪ್ರಶ್ನೆಗಳನ್ನು ಕೇಳಿದೆ. ಮಂಗಳೂರಿನಲ್ಲಿ ಗ್ರಾಜ್ಯುಯೇಟ್‌ಗಳು ಆಟೋರಿಕ್ಷಾಗಳನ್ನು ಓಡಿಸುತ್ತಿರುತ್ತಾರೆ. ಅವರು ಬಹಳ ನಂಬಿಕೆಯಿಂದ ಕೆಲಸವನ್ನು ಮಾಡುತ್ತಿರುತ್ತಾರೆ. ಹೆಣ್ಣು ಮಕ್ಕಳು ಒಬ್ಬೊಬ್ಬರೇ ನಿರ್ಭಯವಾಗಿ ಓಡಾಡುತ್ತಾರೆ. ದೊಡ್ಡ ದೊಡ್ಡ ಸಿಟಿಗಳಲ್ಲಿ ಎಲ್ಲೋ ಅಲ್ಲಲ್ಲಿ ಬ್ಲಾಕ್‌ಶಿಪ್ ಇರುತ್ತಾರೆ ಹೆಣ್ಣು ಮಕ್ಕಳ ಮೇಲೆ ಕೈ ಮಾಡಿದರು ಎನ್ನುವ ಸುದ್ದಿ ಬಂದಿರುತ್ತದೆ, ಇದು ಸರಿಯೋ ಎಂದು ಡ್ರೈವರನ್ನು ಕೇಳಿದೆ. ಅದಕ್ಕೆ ಅವನು ಉತ್ತರವನ್ನು ಕೊಡುತ್ತಾ ಒಂದು ಭಾಗ ಇದು ನಿಜ, ಕೆಲವರು ಅಂಥಾವರೂ ಇದ್ದಾರೆ ಎಂದು ಹೇಳಿದ. ನಾವು ಏನು ಮಾಡುವುದು ಕೆಲವರು ರಾತ್ರಿ ಸಿನಿಮಾ ಬಿಟ್ಟಮೇಲೆ ಬರುತ್ತಾರೆ ಇಂಥ ಕಡೆ ಗಾಡಿ ನಡೆಸು ಎಂದು ಕೇಳುತ್ತಾರೆ. ಅದರಂತೆ ನಾವು ಕರೆದುಕೊಂಡು ಹೋದಮೇಲೆ ನಮಗೆ ಮೀಟರ್ ಚಾರ್ಜನ್ನೂ ಕೊಡದೆ ನಮ್ಮನ್ನೇ ಹೊಡೆಯುವುದಕ್ಕೂ ಬರುತ್ತಾರೆ ಅಂಥ ಸಂದರ್ಭದಲ್ಲಿ ನಾವು ಏನು ಮಾಡಬೇಕು. ಪೋಲೀಸ್‌ನವರ ಸಹಾಯವನ್ನು ಕೋರಬೇಕು ಪೋಲೀಸ್‌ನವರ ಸಹಾಯವನ್ನು ಬೇಡಿದರೆ ಅವರಿಗೆ ಮಾಮೂಲಿಯನ್ನು ಕೊಡಬೇಕು. ಈ ಮಾಮೂಲಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೋ ನಾವು ಅರ್ಧಗಂಟೆ ಒಂದು ಗಂಟೆ ಪ್ರತಿಭಟನೆಯನ್ನು ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆಯೋ ಹೊರತು ಸಾರ್ವಜನಿಕರಿಗೆ ತೊಂದರೆಯನ್ನು ಕೊಡಬೇಕು ಎನ್ನುವ ಉದ್ದೇಶವಿರುವುದಿಲ್ಲ. ಇದನ್ನು ಇಲ್ಲೀಗಲ್ ಎಂದು ತಿಳಿದುಕೊಂಡು ಪರಿಹಾರ ಮಾಡುವುದಕ್ಕೋಸ್ಕರವಾಗಿ ಒಬ್ಬೊಬ್ಬ ಡ್ರೈವರ್ ಹಿಂದೆ ಒಬ್ಬೊಬ್ಬ ಪೋಲೀಸನ್ನು ಇಡಲಿಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವಜನಿಕವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವಾಗ ಮೇಲಿನ ಅಧಿಕಾರಿಗಳ ಗಮನಕ್ಕೆ ಈ ಪ್ರಶ್ನೆಯನ್ನು ತರಬೇಕಾಗಿತ್ತು. ಅದನ್ನು ಮಾಡದೆ ಶಾಸನವನ್ನೇ ಸಂಪೂರ್ಣವಾಗಿ ಮೊಟಕು ಮಾಡುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾಧುವಾದ ದಲ್ಲವೆಂದು ನಾನು ಹೇಳುತ್ತೇನೆ. ಈ ಶಾಸನದಲ್ಲಿ ಎಷ್ಟು ಅಧಿಕಾರವನ್ನು ತಾವು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಪಬ್ಲಿಕ್ ಯುಟಿಲಿಟಿ ಸರ್ವೀಸ್ ಬಗ್ಗೆ ಡಿಫೈನ್ ಮಾಡಿರುತ್ತಾರೆ, ಪಬ್ಲಿಕ್ ಯುಟಿಲಿಟಿ ಸರ್ವೀಸ್ ಎಂದರೆ ಸ್ಟ್ರೈಕ್ ಮಾಡಬಾರದು ಎಂದು ಇರುತ್ತದೆ. ಹಾಗೇನಾದರೂ ಸ್ಟ್ರೈಕ್ ಮಾಡಿದರೆ ಅದನ್ನು ಪರಿಹಾರ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿರುತ್ತದೆ. ಪಬ್ಲಿಕ್ ಯುಟಿಲಿಟಿ ಸರ್ವೀಸ್ ನಿಷೇಧ ಮಾಡಿದರೆ ಅವಕ್ಕೆ ೫೦ ರೂಪಾಯಿ ದಂಡ ವಿಧಿಸುವುದರ ಜೊತೆಗೆ ಒಂದು ತಿಂಗಳು ಜೈಲಿಗೂ ಕಳುಹಿಸಬಹುದು. ಅಷ್ಟೇ ಅಲ್ಲದೆ ಯಾವುದೇ ಕಾರಣಕ್ಕಾಗಿ ಇಲ್ಲೀಗಲ್ ಸ್ಟ್ರೈಕ್ ಮಾಡಲು ಪ್ರಚೋದನೆ ಮಾಡಿದರೂ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆಂದು ಕಾನೂನು ಇರುತ್ತದೆ. ಅದೇ ಪ್ರಕಾರವಾಗಿ ಮತ್ತೊಂದು ಕಡೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನ ಪಬ್ಲಿಕ್ ಯುಟಿಲಿಟಿ ಸರ್ವೀಸ್‌ನಲ್ಲಿ ಮಾಲೀಕನಿಗೂ ಕಾರ್ಮಿಕನಿಗೂ ವಿವಾದ ಉಂಟಾದಾಗ ಕಂಪಲ್‌ಸರಿಯಾಗಿ ಕನ್‌ಸಲಿಯೇಷನ್‌ಗೆ ಕರೆಸಬೇಕು, ಅನಂತರ ಕೋರ್ಟಿಗೆ ಈ ವಾದವನ್ನು ಕಳುಹಿಸಬೇಕು. ಇಲ್ಲೀಗಲ್ ಆಗಿ ಸ್ಟ್ರೈಕ್ ಮಾಡಿದ್ದರೆ ಅವರನ್ನು ಜೈಲಿಗೆ ಕಳುಹಿಸಲು ಸಾಧ್ಯವಿರುತ್ತದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಒಂದು ತಿಂಗಳ ಕಾಲ ಕಳುಹಿಸಬಹುದು. ಜೊತೆಗೆ ೫೦ ರೂಪಾಯಿಗಳ ದಂಡವನ್ನೂ ವಿಧಿಸಬಹುದು ಅಂದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಒಂದು ತುರ್ತು ಆಪಾದನೆ ಮಾಡಿದ್ದರೆ ಎರಡೂ ಶಿಕ್ಷೆಯನ್ನು ಕೊಡುವ ಕ್ರಮ ಇರುತ್ತದೆ. ಆದರೆ ಕೇಂದ್ರ ಸರ್ಕಾರದ ಆಕ್ಟ್‌ನಲ್ಲಿರತಕ್ಕಂಥ ಶಿಕ್ಷೆಗೂ ತೀವ್ರತರವಾದ ಶಿಕ್ಷೆಯನ್ನು ಸ್ಟೇಟ್ ಆಕ್ಟ್‌ನಲ್ಲಿ ತಂದಾಗ ಕೋರ್ಟ್ ಏನು ಮಾಡುತ್ತದೆಂದರೆ ಕೇಂದ್ರ ಸರ್ಕಾರವನ್ನು ಉಳಿಸುತ್ತದೆಯೆ ಹೊರತು ತಮ್ಮದನ್ನು ಉಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. There is already a weapon to de l this matter. Why do you want to take more powers? ಕೋರ್ಟಿನಲ್ಲಿ ಚಾಲೆಂಜ್ ಮಾಡಿದರೂ ಕೋರ್ಟು ಮಾನವೀಯತೆಯ ದೃಷ್ಟಿಯಿಂದ ಜವಾಬ್ದಾರಿಯುತವಾದ ಅಧಿಕಾರಿಗಳು ಕಾನೂನನ್ನು ಎತ್ತಿ ಹಿಡಿಯುತ್ತಾರೆ. ಸರ್ಕಾರ ತೀವ್ರವಾಗಿ ಶಿಕ್ಷೆಯನ್ನು ಕೊಡುವುದಕ್ಕೆ ಕಾನೂನುಬದ್ಧವಾದ ಅವಕಾಶವಿರುವುದಿಲ್ಲ. ಕೋರ್ಟಿನಲ್ಲಿಯೂ ಕೂಡ ಆ ರೀತಿಯಾದ ಒಂದು

ತೀರ್ಪನ್ನು ಕೊಡಬಹುದು. ಕೊಡುತ್ತಾರೆಂದು ನಂಬಿಕೆಯೂ ಇರುತ್ತದೆ. ಕಾರ್ಮಿಕರು ಮುಷ್ಕರ ಹೂಡಿದ್ದ ಸಮಯದಲ್ಲಿ ಅದನ್ನು ಪರಿಹಾರ ಮಾಡಲಿಕ್ಕೆ ಕ್ರಮವಿದ್ದರೂ ಅದನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲ. ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳದೇ ಹೋದರೆ ಮತ್ತೆ ಅವರು ಯಾರ ಹತ್ತಿರ ಹೋಗಿ ಮೊರೆಯನ್ನು ಇಡಬೇಕು ಎನ್ನುವುದು ಪ್ರಶ್ನೆ ಬರುತ್ತದೆ. ಮೂರು ಕೋಟಿ ಜನರು ಏನು ಇದ್ದಾರೆ ಅವರಲ್ಲಿ ಕಾರ್ಮಿಕರು ಇರಬಹುದು ಅವರು ಜೀವನಾಡಿಯನ್ನು ಹಿಡಿದಿರತಕ್ಕಂಥ ಎಲೆಕ್ಟ್ರಿಸಿಟಿ ಬೋರ್ಡ್‌ನವರು, ಡೈರಿ ನೌಕರರು, ವಾಟರ್ ಸೀವರೇಜ್ ಬೋರ್ಡ್‌ನವರು, ಸಾರಿಗೆ ನೌಕರರು ಅವರ ವಿಶ್ವಾಸವನ್ನು ತಾವು ಪಡೆದು ಅವರ ಸಮಸ್ಯೆಗಳನ್ನು ಪರಿಹರಿಸಿ ಸಾರ್ವಜನಿಕ ಸೇವೆಯಲ್ಲಿ ಜವಾಬ್ದಾರಿಯನ್ನು ಕಲ್ಪಿಸಬೇಕಾಗಿದೆಯೇ ಹೊರತು ಅವರನ್ನು ಹೊಡೆದು ಬಡಿದು ಆಡಳಿತವನ್ನು ನಡೆಸುತ್ತೇವೆಂದು ಹೇಳಿದರೆ ಅದು ನಿಜವಾಗಿಯೂ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಅಸ್ಸಾಂ ಚಳುವಳಿಯನ್ನು ತೆಗೆದುಕೊಂಡರೆ ನೂರಕ್ಕೆ ನೂರರಷ್ಟು ಜನ ಸೆಟೆದು ನಿಂತ ಕಾರಣ ಸರ್ಕಾರ ಯಾವ ಕಾನೂನನ್ನು ಪ್ರಯೋಗ ಮಾಡಲಿಕ್ಕೂ ಸಾಧ್ಯವಾಗಲಿಲ್ಲ. ಆದ್ದರಿಂದ ಕರ್ನಾಟಕದಲ್ಲೂ ಆ ಒಂದು ಪರಿಸ್ಥಿತಿ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಸ್ಟ್ರೈಕ್ ಡಿಫೈನ್ ಮಾಡಿದ್ದೀರಿ. ಒಬ್ಬ ಕೆಲಸಗಾರ ಸ್ಟ್ರೈಕ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ಟ್ರೈಕ್ ಎಂದರೆ

> " (a cessation of work by a body of persons employed in any industry acting in combination, or a concerted refusal, or a refusal under a common understanding, of any number of persons who are or have been so employed to continue to work or to accept employ-ment ;

ಯೂನಿಯನ್ ತೀರ್ಮಾನ ಮಾಡುತ್ತದೆ. ಸ್ಟ್ರೈಕ್ ಮಾಡಬೇಕಾದರೆ ಮೊದಲು ನೋಟೀಸ್ ಕೊಟ್ಟು ಸ್ಟ್ರೈಕ್ ಮಾಡುತ್ತಾರೆ. ನೋಟೀಸ್ ಕೊಡದೆ ಸ್ಟ್ರೈಕ್ ಮಾಡಿದರೆ ಅದು ಇಲ್ಲೀಗಲ್ ಸ್ಟ್ರೈಕ್ ಆಗುತ್ತದೆಂದು ಹೇಳುತ್ತಾರೆ. ಆದ್ದರಿಂದ ಕೈಗಾರಿಕೆಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಇರುವಂಥ ನೌಕರರು ತೀರ್ಮಾನ ಮಾಡಿಕೊಂಡು ಏನು ಸ್ಟ್ರೈಕ್ ಮಾಡುತ್ತಾರೆ ಅದನ್ನು ಇಲ್ಲೀಗಲ್ ಎಂದು ಕಾನೂನಿನ ದಂಡ ಪ್ರಯೋಗ ಮಾಡಿದರೆ ಸಮಸ್ಯೆ ಬಗೆಹರಿಸಿದಂತಾಗುವುದಿಲ್ಲ. ಸಮಸ್ಯೆಯನ್ನು ಪರಿಹರಿಸುವ ಮಾರ್ಗದಲ್ಲಿ ಕಾರ್ಯನಿರ್ವಹಿಸಿದ್ದರೆ ಈರೀತಿಯಾದ ಮುಷ್ಕರದ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ.

"ರೆಫ್ಯೂಸಲ್ ಟು ವರ್ಕ್" ಅಂದರೆ ಏನು ಅದಕ್ಕೆ ಡೆಫನಿಷನ್‌ಲ್ಲಿ It is stated like this

> "Refusal to work" in relation to any person or persons means his or their failure to attend at, or absence from the place of work on any working day or during any working hour, without obtaining permission therefor of the autho rity competent to grant such permission under the relevant terms and conditions of service or his or their refusal to work or to accept work during any working day or working hour or any other conduct on his or their part which results in, or is likely to result in cessationor substantial retardation of work, in any essential service and the words "refuse to work," with all their grammaticle variations and cognate expressions shall be construed accordingly."

ಸ್ವಾಮಿ ರೆಫ್ಯೂಸಲ್ ಟು ವರ್ಕ್ ಎಂದು ಹೇಳಿದ್ದೀರಿ. ಈಗ ಯಾವನೇ ಒಬ್ಬ ನೌಕರ ತಾನು ಕಾಯಿಲೆ ಇದ್ದೇನೆ ಎಂದು ಲೀವ್ ನೋಟೀಸ್ ಕಳುಹಿಸಿಕೊಡಲಿಕ್ಕೆ ಆಗಲಿಲ್ಲ ಎಂದು ಇಟ್ಟುಕೊಳ್ಳೋಣ. ಅವನ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೀರಾ? ಇದು ಖಾಸಗಿ ಮಾಲೀಕರಲ್ಲಿ ಬಹಳ ಪರಿಣಾಮ ಬೀರುತ್ತದೆ, ಉದಾಹರಣೆಗೆ ನಮ್ಮಲ್ಲಿ ಕೃಷ್ಣ ಟ್ರಾನ್ಸ್‌ಪೋರ್ಟ್ ಇದೆ ಆದರಲ್ಲಿ

ಯಾವ ತರಹ ಮಾಡಿದ್ದಾರೆ ಎಂದು ನನಗೆ ಗೊತ್ತಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರ ಹೆಸರು ರಿಜಿಸ್ಟರ್‌ನಲ್ಲಿ ದಾಖಲೆ ಇಲ್ಲ. ಅವನು ಬಸ್ ತೆಗೆದುಕೊಂಡು ಕಾಂಟ್ರಾಕ್ಟ್ ತೆಗೆದುಕೊಂಡು ಓಡಿಸುತ್ತಿದ್ದನು. ಅದನ್ನು ಸಾರಿಗೆ ಸಂಸ್ಥೆಯವರು ತೆಗೆದುಕೊಂಡಾಗ ಅಲ್ಲಿ ಕೆಲಸಮಾಡುತ್ತಿದ್ದ ಕಂಡಕ್ಟರ್ ಮತ್ತು ಡ್ರೈವರ್‌ಗಳನ್ನು ಸಾರಿಗೆ ಸಂಸ್ಥೆಗೆ ಸೇರಿಸಬೇಕಾದರೆ ಮೂರು ವರ್ಷ ಒದ್ದಾಡಿದ್ದಾರೆ. ಯಾರು ಈ ಪ್ರೈವೇಟ್ ಕಂಪನಿಯಲ್ಲಿ ಕೆಲಸಮಾಡುತ್ತಿದ್ದರು ಅವರ ಹೆಸರುಗಳು ಅವರ ರಿಜಿಸ್ಟರ್‌ನಲ್ಲಿ ಇಲ್ಲ. ಅಂದರೆ ಯಾವ ರೀತಿ ಖಾಸಗಿ ಮಾಲೀಕರು ಮತ್ತು ಸಂಸ್ಥೆಗಳವರು ನಡೆಸುತ್ತಾರೆ ಎಂಬುದನ್ನು ನೋಡಿದರೆ ತಾವು ಏನು ಮಾಡುವಂತಾದ್ದು ರೆಫ್ಯೂಸಲ್ ಟು ವರ್ಕ್ ಮಾಡಿದರೆ ಆ ನೌಕರನ ಗತಿ ಏನಾದೀತು ಯೋಚನೆ ಮಾಡಿದ್ದೀರಾ? ಅವನು ಗುಲಾಮನ ರೀತಿ ಕೆಲಸ ಮಾಡುತ್ತಾನೆ. ಆದುದರಿಂದ ಈಬಿಲ್ಲನ್ನು ನೋಡಿದರೆ ಯಾವರೀತಿ ಇದನ್ನು ಡ್ರಾಫ್ಟ್ ತಯಾರು ಮಾಡಿದ್ದಾರೆ. ಇದರ ಉದ್ದಿಶ್ಯವೇನು? ಕೇವಲ ಸರ್ಕಾರದ ಹಿತವನ್ನು ರಕ್ಷಣೆ ಮಾಡಲಿಕ್ಕಾಗಿ ಈ ಬಿಲ್ಲನ್ನು ತಯಾರು ಮಾಡಿದ್ದಾರೆ. ಇದನ್ನು ನೋಡಿದರೆ ಇವರುಗಳು ಒಬ್ಬ ಜೀತದಾಳು ಎಂದು ತಿಳಿದುಕೊಂಡಿರುವ ಹಾಗಿದೆ. ಅವನಿಗೆ ಒಂದು ವರ್ಷ ಸಜ ಮತ್ತು ಒಂದು ಸಾವಿರ ರೂಪಾಯಿ ದಂಡ ಹಾಕುವುದು. ಸ್ಟ್ರೈಕ್‌ಗೂ ಆಬ್ಸೆನ್ಸ್‌ಗೂ ವ್ಯತ್ಯಾಸವಿಲ್ಲವೇ ಏನು ಇದು ಇದನ್ನು ಯಾರು ತೀರ್ಮಾನ ಮಾಡಬೇಕು?

SRI Y. RAMAKRISHNA.—He has got cause of action against his Master.

ಶ್ರೀ ಬಿ. ವಿ. ಕಕ್ಕಿಲಾಯ.—Why not you put it here? ಆದುದರಿಂದ ಆಬ್ಸೆನ್ಸ್ ಮತ್ತು ರೆಫ್ಯೂಸಲ್ ಟು ವರ್ಕ್, ಇವೆರಡಕ್ಕೂ ಬಹಳ ವ್ಯತ್ಯಾಸವಿದೆ. ಕೆಲಸಗಾರನಿಗೆ ಇದು ಮೂಲಭೂತವಾದ ಹಕ್ಕು. ಆತ ಕೆಲಸ ಮಾಡುವುದಿಲ್ಲವೆಂದು ಹೇಳಿದರೆ, ಆಗ ನೀವು ಅವನನ್ನು ಕೆಲಸದಿಂದ ತೆಗೆದುಹಾಕುತ್ತೀರಿ? ಅವನು ಪರ್ಮಿಷನ್ ತೆಗೆದುಕೊಂಡಿಲ್ಲ, ಅವನು ಕೊಟ್ಟ ಕಾರಣ, ಅದೆಲ್ಲಾ ಆಮೇಲೆ ಕಾಸ್ ಆಫ್ ಆಕ್ಷನ್‌ನಲ್ಲಿ ಬರುತ್ತದೆ. ಮತ್ತೆ ಅವನು ಕೋರ್ಟಿಗೆ ಹೋಗುತ್ತಾನೆ ಅವುಗಳೆಲ್ಲಾ ಬೇರೆ ವಿಷಯ. ನೀವು ಅವನಿಗೆ ಒಂದು ವರ್ಷ ಸಜ ಮತ್ತು ಒಂದು ಸಾವಿರ ರೂಪಾಯಿ ದಂಡ ವಿಧಿಸುತ್ತೀರಿ ಎಂದು ಇಟ್ಟುಕೊಳ್ಳೋಣ, ಅದನ್ನು ಆತ ಜೈಲಿನಲ್ಲಿ ಕೂತುಕೊಂಡು ಹೋರಾಟ ಮಾಡಬೇಕೆ? ಈ ರೀತಿ ಮಾಡಿದರೆ ರಿಟಾರ್ಡೇಷನ್ ಆಫ್ ವರ್ಕ್ ಆಗುವುದಿಲ್ಲವೇ? ನಮ್ಮಲ್ಲಿ ಒಂದು ಹೆಂಚಿನ ಕಾರ್ಖಾನೆ ಇದೆ ಅಲ್ಲಿ ಒಬನ ಹಿಂದೆ ಒಬ್ಬ ಹೋಗಬೇಕು ಆದರೆ ಇದೆಲ್ಲಾ ಆದಮೇಲೆ ಅದು ರೆಗ್ಯುಲೇಟ್ ಮಾಡಿಕೊಳ್ಳುತ್ತಾನೆ. ಹಾಗಾದರೆ ತಾವು ಏನಾದರೂ ಕೆಲಸ ಮಾಡಬೇಕಾದರೆ ಇಷ್ಟೇ ಕೆಲಸ ಮಾಡಬೇಕು ಎಂದು ಏನಾದರೂ ಒಂದು ನಾರ್ಮ್ಸ್ ನೀವು ಫಿಕ್ಸ್ ಮಾಡಬೇಕಾಗುತ್ತದೆ. ಇನ್ನು ಉದಾಹರಣೆಗೆ ಇಲ್ಲಿಂದ ಒಂದು ಬಸ್ ಮಂಗಳೂರಿಗೆ ೬ ಗಂಟೆಗೆ ಮುಟ್ಟಬೇಕು ಆದರೆ ದಾರಿ ಮಧ್ಯದಲ್ಲಿ ಏನಾದರೂ ತೊಂದರೆ ಆದರೆ ಅವನು ೬ ಗಂಟೆಗೆ ಮುಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ, ಆಗ ಅದು ರಿಟಾರ್ಡೇಷನ್ ಆಫ್ ವರ್ಕ್ ಎಂದು ಹೇಳುತ್ತೀರಾ? ಇದರಲ್ಲಿ ಯಾರದೂ ತಪ್ಪು ಇಲ್ಲ. ಇದನ್ನೆಲ್ಲಾ ರಿಟಾರ್ಡೇಷನ್ ಆಫ್ ವರ್ಕ್ ಎಂದು ಇದನ್ನು ತೆಗೆದುಕೊಂಡು ಕ್ರಮ ತೆಗೆದುಕೊಂಡರೆ ಆಗ ಆ ನೌಕರರು ನಿಮ್ಮ ಮೇಲೆ ಬೀಳುತ್ತಾರೆ, ಖಾಸಗಿ ಮಾಲೀಕರಿಗೋಸ್ಕರ ಇವರನ್ನು ನಿಮ್ಮ ತಲೆ ಮೇಲೆ ಹಾಕಿಕೊಳ್ಳಬೇಡಿ.

ಅಧ್ಯಕ್ಷರು.—ದಯಮಾಡಿ ಕಂಕ್ಲೂಡ್ ಮಾಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ಕಂಕ್ಲೂಡ್ ಮಾಡುತ್ತೇನೆ ಆದರೆ ಹೇಳಬೇಕಾದ್ದನ್ನು ಹೇಳಬೇಕಲ್ಲ? ಇದು ನನ್ನ ಒಬ್ಬನ ಪ್ರಶ್ನೆಯಲ್ಲ ಅದಕ್ಕೋಸ್ಕರ ವಿಚಾರ ಏನು ಇದೆ ಅವನ್ನು ತಿಳಿಸಲೇ ಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಚಾರ ಇದೆ ಆದ್ದರಿಂದ ಇದರ ಬಗ್ಗೆ ಸಂಪೂರ್ಣ ಚರ್ಚೆಗೆ ಅವಕಾಶ ಕೊಡಬೇಕು ಮತ್ತು ಸಂಪೂರ್ಣ ಸಮಯ ಕೊಡಬೇಕು, ಇದರ ಪರಿಣಾಮ ಬಹಳ ಆಗುತ್ತದೆ. ಅಸೆಂಬ್ಲಿಯನ್ನು ಇವತ್ತು ಮುಗಿಸಬೇಕೆನ್ನುವ ದೃಷ್ಟಿಯಿಂದ ಈ ಕೆಲಸ ಮಾಡುತ್ತೇನೆಂದು ಹದಿನೈದು ನಿಮಿಷ ಅಥವಾ ಅರ್ಧ ಗಂಟೆಯಲ್ಲಿ ಮುಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದು ಕರ್ನಾಟಕದ ಸಮಗ್ರ ಕಾರ್ಮಿಕರ ಪ್ರಶ್ನೆಯಿರುವುದರಿಂದ ಇದನ್ನು ಸಾವಧಾನವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕಾಗುತ್ತದೆ. ಮತ್ತೆ ಯಾವ ಮಸೂದೆ ಎಷ್ಟು ಮಹತ್ವದ್ದು ಎಂದು ನೋಡಿ ನಾವು ನಿರ್ಣಯ ಮಾಡಬೇಕಾಗುತ್ತದೆ.

ಅಧ್ಯಕ್ಷರು.--ನಾನು ಕೂಡಲೇ ಮುಗಿಸಬೇಕೆಂದು ಹೇಳಲಿಲ್ಲ. ಅವರು ನೆನ್ನೆ ದಿವಸ ಎಷ್ಟು ಸಮಯ ಮಾತನಾಡಿದ್ದಾರೆ ಇವತ್ತು ಎಷ್ಟು ನಿಮಿಷ ಮಾತನಾಡಬೇಕು ಇವನ್ನೆಲ್ಲಾ ನೋಡಿ ಹೇಳಿದೆ ಅಷ್ಟೆ.

ಶ್ರೀ ಬಿ. ವಿ. ಕಕ್ಕಿಲಾಯ.--ರೆಫ್ಯೂಸಲ್ ಟು ವರ್ಕ್ ಎಂದರೆ ಇವಕ್ಕೆ ಸರ್ಟನ್ ಎಸೆನ್ಶಿಯಲ್ ಸರ್ವೀಸ್ ಎಂದು ಇವೆ, ಇದು ಇಡೀ ಪ್ರಪಂಚಕ್ಕೆಲ್ಲಾ ಬರುತ್ತದೆ. ನಿಮಗೆ ಹೇಳುವಾಗ ಒಂದು ಹೇಳು ತ್ತೇನೆ ಈಗ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್, ರಸ್ತೆ ಸಾರಿಗೆ ಇನ್ನು ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರು ಇದ್ದಾರೆ ಬೆಂಗಳೂರಿನಲ್ಲಿ, ಇವರು ಒಂದೇ ಒಂದು ದಿವಸ ಸ್ಟ್ರೈಕ್ ಮಾಡಿದ್ದಾರಾ, ಮಾಡಿಲ್ಲ ಅವರಿಗೆ ಜವಾಬ್ದಾರಿ ಇದೆ, ಇನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಕೂಡ ಮಾಡಿಲ್ಲ. ಇದು ತಾವು ಮಾಡುವಂತಾದ್ದು ಯಾರಿಗೆ ಬೇಕಾಗುತ್ತದೆ ಎಂದರೆ ಪ್ರೈವೇಟ್ ಮ್ಯಾನ್ ಅಂಡ್ ಮೆನ್ ಬಗ್ಗೆ ಬೇಕಾಗುತ್ತದೆ. ಆದರೆ ಮೇಲೆ ಹೇಳಿದವರು ಸಂಘಟಿತರಾಗಿದ್ದಾರೆ ಮತ್ತು ಜವಾಬ್ದಾರಿಯುತರಾಗಿ ದ್ದಾರೆ ಅವರು ನೋಡಿಕೊಳ್ಳುತ್ತಾರೆ. ಆ ವಿಶ್ವಾಸ ನಮಗೆ ಇದೆ. ಇದು ಯಾರಿಗೆ ಅಪಾಯ ಬರುತ್ತದೆ ಎಂದರೆ ಸಣ್ಣಪುಟ್ಟ ಪ್ರೈವೇಟ್ ಟ್ರಾನ್ಸ್‌ಪೋರ್ಟ್, ಆಟೋರಿಕ್ಷಾ ಮತ್ತು ಸಣ್ಣಸಣ್ಣ ಪ್ರೆಸ್‌ಗಳು ಇಂತಾ ದ್ದಕ್ಕೆ ಬರುತ್ತದೆ. ನಿನ್ನೆ ದಿವಸ ತಿದ್ದುಪಡಿಯೂ ಕೂಡ ಇದೇ ರೀತಿ ಅನ್ವಯವಾಗುವ ಜನರಿಗೆ ತಿದ್ದು ಪಡಿ ತಂದಿದ್ದೀರಿ? ಯಾರ ಮೇಲೆ ಇದನ್ನು ಅನ್ವಯಿಸುತ್ತೀರಿ ಯಾರು ರೆಫ್ಯೂಸ್ ಮಾಡಬಾರದು ಮಾಡಿದರೆ ೬ ತಿಂಗಳು ಅವರ ಮೇಲೆ ಶಿಕ್ಷೆ ವಿಧಿಸುವ ಅಧಿಕಾರ ತೆಗೆದುಕೊಂಡಿದ್ದೀರಿ, ಆ ಅಧಿಕಾರ ತೆಗೆದು ಕೊಂಡಮೇಲೆ (ಇಲ್ಲೀಗಲ್ ಆಗಿ ರೆಫ್ಯೂಸಲ್ ಆಫ್ ವರ್ಕ್)ಎಂದು ಹೇಳುತ್ತೀರಾ?...............

ಇನ್ನೊಂದು ವಿಚಿತ್ರ ಏನೆಂದರೆ ಇಲ್ಲೀಗಲ್ ಸ್ಟ್ರೈಕ್‌ಗಳನ್ನು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಇರತಕ್ಕ ವಿವಾದಗಳನ್ನು ತೀರ್ಮಾನ ಮಾಡುವುದಕ್ಕೆ ಇದರಲ್ಲಿ ಅವಕಾಶ ಕೊಟ್ಟಿದ್ದಾರೆ ಮತ್ತು ಇಲ್ಲೀಗಲ್ ಸ್ಟ್ರೈಕಿಗೆ ಶಿಕ್ಷೆ ವಿಧಿಸುವುದಕ್ಕೆ ಇದರಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ವಿವಾದ ವನ್ನು ಪರಿಹಾರ ಮಾಡತಕ್ಕ ಮಾರ್ಗವನ್ನು ಯಾವುದನ್ನೂ ಹೇಳಿಲ್ಲ. ಇದರಲ್ಲಿ ಶಿಕ್ಷೆಯನ್ನು ಜಾಸ್ತಿ ಮಾಡಿದ್ದಾರೆ. ಈ ವಿಧೇಯಕದ ಕ್ಲಾಜ್ ೪ರಲ್ಲಿ ಪೆನಾಲ್ಟಿ ಫಾರ್ ಇಲ್ಲೀಗಲ್ ರೆಫ್ಯೂಜಲ್ ಟು ವರ್ಕ್ ಎನ್ನುವುದರಲ್ಲಿ ಈ ರೀತಿ ಹೇಳಿದ್ದಾರೆ "Any person who, without reasonable excuse refuses or continues to refuse to work in any essential services, such refusal being illegal under this Act shall, on conviction, be punished with imprisonment for a term which may extend to one year, or with fine which may extend to two thousand rupees, or with both" ಎಂದು ಹೇಳಿದ್ದಾರೆ. ಇದನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಸರಿಯಾಗಿ ಓದಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ನನಗೆ ಅನುಮಾನ ಇದೆ. ಅವನು ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದರೆ ಅವನ್ಕೆ ಅವ ನಿಗೆ ಶಿಕ್ಷೆ ಒಂದು ವರ್ಷ ಇಂಪ್ರಿಜನ್‌ಮೆಂಟ್ ಮತ್ತು ದಂಡವನ್ನು ಎರಡು ಸಾವಿರ ರೂಪಾಯಿಗಳನ್ನು ಹಾಕಬಹುದು ಎಂದು ಸೇರಿಸಿದ್ದಾರೆ. ಇದರ ಜೊತೆಗೆ ಪೆನಾಲ್ಟಿ ಫಾರ್ ಇನ್‌ಸ್ಟಿಗೇಷನ್ ಬೇರೆ ಇದೆ. ಇದರಲ್ಲಿ ಇನ್‌ಸ್ಟಿಗೇಟ್ ಮಾಡುವುದು ರುಜುವಾತು ಆಗಬೇಕು ಏನೇನೂ ಇಲ್ಲ. ಮತ್ತು ಯಾರಾ ದರು ಪ್ರಚೋದನೆ ಮಾಡಿದ್ದರೆ ಅದು ಕೋರ್ಟಿನಲ್ಲಿ ಅರ್ಥವಾಗಬೇಕು ಎನ್ನುವ ಪ್ರಶ್ನೆಯೂ ಕೂಡ ಇಲ್ಲ. ಇನ್‌ಸ್ಟಿಗೇಷನ್ ಮಾಡಿದ್ದಾನೆ ಎಂದು ಗೊತ್ತಾದರೆ ಅವನಿಗೂ ಸಹ ಒಂದು ವರ್ಷ ಸಜಾ ಮತ್ತು ಎರಡು ಸಾವಿರ ರೂಪಾಯಿಗಳ ದಂಡವನ್ನು ಹಾಕಬೇಕು ಎಂದು ಇದರಲ್ಲಿ ನಮೂದು ಮಾಡಿ ದ್ದಾರೆ.

ಆಮೇಲೆ ಕ್ಲಾಜ್ ೬ರಲ್ಲಿ ಪೆನಾಲ್ಟಿ ಫಾರ್ ಗಿವಿಂಗ್ ಫೈನಾನ್ಷಿಯಲ್ ಏಯ್ಡ್ ಟು ಇಲ್ಲೀಗಲ್ ರೆಫ್ಯೂಜಲ್ ಟು ವರ್ಕ್. ಇದರಲ್ಲಿ ಒಂದು ವೇಳೆ ಟ್ರೇಡ್ ಯೂನಿಯನ್ ನಾಯಕರು ಯಾರಾದರೂ ಒಬ್ಬರು ಕಾರ್ಮಿಕರು ಆರ್ಥಿಕವಾಗಿ ತೊಂದರೆಗೆ ಒಳಗಾಗಿದ್ದಾಗ ಅವರಿಗೆ ಸಹಾಯ ಮಾಡಿದರೆ ಅಂಥಾ ಸಂದರ್ಭ ದಲ್ಲಿ ಟ್ರೇಡ್ ಯೂನಿಯನ್‌ನ ನಾಯಕರನ್ನು ಕರೆಸಬಹುದು. ಅವನಿಗೆ ಹಣಕ್ಕೆ ಸಂಭಾವನೆ ಕೊಟ್ಟೆ ಎಂದು ಹೇಳಿ ಅವನಿಗೂ ಶಿಕ್ಷೆಯನ್ನು ವಿಧಿಸಬಹುದು. ತಮಗೆ ಜನಗಳಿಗೆ ಸಿಗಿ ಹಣ ಕೊಟ್ಟರೆ ಅದು ಇಲ್ಲೀಗಲ್ ಆಗುವುದಿಲ್ಲ. ಯಾವುದಾದರೂ ಕಾರ್ಖಾನೆಯವರು ಸ್ಟ್ರೈಕ್ ಮಾಡಿದಾಗ ಕಾರ್ಮಿಕನಿಗೆ

ಕೆಲಸ ಇಲ್ಲದೇ ಇರುವಾಗ ಅವನ ಸಹೋದ್ಯೋಗಿ ಏನಾದರೂ ಹಣ ಕೊಟ್ಟರೆ ಅದು ಇಲ್ಲೀಗಲ್ ಆಗುತ್ತದೆ. ಸಂಸ್ಥೆಯ ಕೆಲಸಗಾರರ ವಿವಾದ ತೀರ್ಮಾನವಾಗುವವರೆಗೆ ಅವನು ಬದುಕಬೇಕು. ಅವನು ಹೇಗೆ ಬದುಕಬೇಕು ? ಒಂದು ವೇಳೆ ಸಾರ್ವಜನಿಕರು ಯಾರಾದರೂ ಹಣವನ್ನು ಸಂಗ್ರಹಿಸಿ ಕೊಟ್ಟು ಅವನನ್ನು ಸಾಕಬೇಕು. ಇಂಥಾ ಕೆಲಸ ಮಾಡುವುದಕ್ಕೂ ಅವಕಾಶ ಇಲ್ಲದಿದ್ದರೆ ಹೇಗೆ ? ಅವರ ಸಹೋದ್ಯೋಗಿಗಳು ಯಾರಾದರೂ ಕಾರ್ಮಿಕನಿಗೆ ಫೈನಾನ್ಷಿಯಲ್ ಅಸಿಸ್ಟೆನ್ಸ್ ಕೊಟ್ಟರೆ ಅವನಿಗೆ ಎರಡು ಸಾವಿರ ರೂಪಾಯಿಗಳ ಫೈನ್ ಹಾಕುತ್ತೇವೆ. ಒಂದು ವರ್ಷ ಸಜಾ ವಿಧಿಸುತ್ತೇವೆ ಎಂದರೆ ಹೇಗೆ ? ಒಂದು ವೇಳೆ ಅದು ಇಲ್ಲೀಗಲ್ ಸ್ಟ್ರೈಕ್ ಆಗಿದ್ದರೂ ಕೂಡ ಕಾರ್ಮಿಕರನ್ನು, ನೌಕರರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅವನು ಉಪವಾಸ ಇದ್ದರೆ ಅವನಿಗೆ ೫ ರೂಪಾಯಿ ಕೊಟ್ಟರೆ ಅಂಥವರಿಗೆ ಒಂದು ವರ್ಷ ಸಜಾ ಎರಡು ಸಾವಿರ ರೂಪಾಯಿಗಳ ದಂಡವನ್ನು ವಿಧಿಸುತ್ತೇವೆ ಎಂದರೆ ಇಂಥಾ ಕಾನೂನು ಜಾರಿಗೆ ತಂದು ನೀವು ರಾಜ್ಯಭಾರ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ, ಕಾರ್ಮಿಕರನ್ನು ಕಾರ್ಮಿಕ ಮುಖಂಡರನ್ನು ಜೈಲಿಗೆ ಕಳುಹಿಸುವುದು ತಮ್ಮ ಅಭಿಪ್ರಾಯವೇ ? ಇವರನ್ನು ಜೈಲಿಗೆ ಕಳುಹಿಸಿ ನೀವು ಹೇಗೆ ರಾಜ್ಯಭಾರ ಮಾಡುತ್ತೀರಾ ? ಇದನ್ನು ಹೆಚ್ಚು ದಿವಸ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಒಂದು ಕಾನೂನಿನ ಮುಖಾಂತರ ನೀವು ಅಧಿಕಾರವನ್ನು ತೆಗೆದುಕೊಂಡು ಕಾರ್ಮಿಕರನ್ನು ಅರೆಸ್ಟ್ ಮಾಡುವ ಅಧಿಕಾರವನ್ನು ತೆಗೆದುಕೊಂಡಿದ್ದೀರಿ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಇಂಥಾ ಅಧಿಕಾರಗಳನ್ನು ಕೇಂದ್ರದಲ್ಲಿ ತೆಗೆದುಕೊಂಡ ಲೇಬರರ್ಸ್‌ಗೂ ಮ್ಯಾನೇಜಮೆಂಟಿಗೂ ಸಾಮರಸ್ಯ ಇಲ್ಲದೇ ಹೋಗಿ ಎಲ್ಲಾ ಶಾಸನಗಳನ್ನೂ ಬದಿಗೆ ಒತ್ತಿದ್ದಾರೆ. ಆದ್ದರಿಂದ ಸರಕಾರದವರು ಇಂಥಾ ಒಂದು ಕಾನೂನು ಜಾರಿಗೆ ತರುವುದು ಬೇಡ. ದಯವಿಟ್ಟು ಇದನ್ನು ಕೈಬಿಡಬೇಕು. ಈಗ ಏನು ಗಂಭೀರವಾದ ಪರಿಸ್ಥಿತಿ ಇದೆಯೋ ಇದಕ್ಕಿಂತ ಇನ್ನೂ ಹೆಚ್ಚು ಗಂಭೀರವಾದ ಪರಿಸ್ಥಿತಿ ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಬಂದು ಅನೇಕ ವಿವಾದಗಳು ತೀರ್ಮಾನವಾಗದೆ ಉಳಿಯತಕ್ಕ ಗಂಭೀರವಾದ ಪರಿಸ್ಥಿತಿ ಇತ್ತು. ಆಗ ಶ್ರೀಮಾನ್ ದೇವರಾಜ ಅರಸ್ ಅವರು ಕಾರ್ಮಿಕರ ನಾಯಕರ ಜೊತೆಯಲ್ಲಿ ಸಮಾಲೋಚನೆ ನಡೆಸಿ ಇಂಥಾ ಶಾಸನವನ್ನು ತರುವುದಕ್ಕಿಂತ ಬೇರೆ ಸಮಂಜಸವಾದ ವಿಧಾನಗಳನ್ನು ಕೈಗೊಳ್ಳಬೇಕು ಎಂದು ಅವರು ಏನೊಂದು ಶಾಸನವನ್ನು ತರಬೇಕಾಗಿತ್ತೋ ಅದನ್ನು ಈ ಸದನದಲ್ಲಿ ಮಂಡಿಸಲಿಲ್ಲ. ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಹಾಗೆಯೇ ಎರಡು ವರ್ಷಗಳ ಕಾಲ ತಳ್ಳಿದರು. ಆದರೆ ಈ ಸರಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳಲ್ಲಿ ಈ ಒಂದು ಕಾನೂನು ತರುವ ಅವಶ್ಯಕತೆ ಕಂಡು ಬಂದಿದೆ ಎಂದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇವರು ಅಧಿಕಾರಕ್ಕೆ ಬಂದು ೧೦೦ ದಿವಸಗಳ ನಂತರ ಇದರ ಅವಶ್ಯಕತೆ ಕಂಡುಬಂದಿದೆ ಎಂದರೆ ಈ ಸರಕಾರ ಹೆಚ್ಚು ದಿವಸ ಬಾಳುವುದಿಲ್ಲ. ಜನರ ಮನಸ್ಸನ್ನು ಒಲಿಸಿ ರಾಜ್ಯಭಾರ ಮಾಡುವುದನ್ನು ಕಲಿಯಬೇಕು. ಈ ಒಂದು ಉದ್ದೇಶದಿಂದ ಈ ಶಾಸನವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ವಾಪಸ್ಸು ತೆಗೆದುಕೊಳ್ಳದಿದ್ದರೆ ಈ ಶಾಸನದ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸುವುದಕ್ಕೆ ಕಳುಹಿಸಿ ಅವರ ಅಭಿಪ್ರಾಯವನ್ನು ಕ್ರೋಡೀಕರಿಸಿದ ಮೇಲೆ ಯೋಚನೆ ಮಾಡಿ ಈ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—Now Mr. G.K. Thakked to speak.

SRI C.M. ARUMUGHAM.—I shall be very greatful if you can give me a chance to speak on this Bill because it appears you have got a list before you and I have not given my name so far. After the Leader of the Opposition speaks, I will speak.

MR. SPEAKER.—You will have your opportunity Armugham.

SRI P. RAMDEV.—Please include my name also.

MR. SPEAKER.—No. You have to function through your Whip.

† ಶ್ರೀ ಜಿ. ಕೆ. ತಕ್ಕೋಡ್ (ಪರಸ್‌ಗಡ್).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಮಿತ್ರರಾದಂತಹ ಶ್ರೀಮಾನ್ ಕಕ್ಕಿಲಾಯ ಅವರು ಅವಶ್ಯಕ ಸೇವೆಗಳ ಬಗ್ಗೆ ಸರಕಾರದವರು ಈ ಸಭೆಯಲ್ಲಿ ತಂದಂತಹ ತಿದ್ದುಪಡಿ ಕಾಯಿದೆಗೆ ತಮ್ಮ ಅನೇಕ ತೀವ್ರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಕಮ್ಯೂನಿಸ್ಟ್ ಪಕ್ಷದಿಂದ ಬಂದರೂ ಕೂಡ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಎಷ್ಟೊಂದು ಬಿಗಿಯಾದ ಕಾಯಿದೆಗಳು ಜಾರಿಯಲ್ಲಿವೆ ಎಂಬುದನ್ನು ಹೇಳಬೇಕಾಗಿತ್ತು. ಅವರು ಅದನ್ನು ಹೇಳಲಿಲ್ಲ. ಅಲ್ಲಿ ಮಾತನಾಡುವುದೂ ಅಸಾಧ್ಯ. ಇಲ್ಲಿ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ರೀತಿಯಿಂದ ಕಟಿಬದ್ಧವಾಗಿ ಇವೊತ್ತು ಜನತೆಯ ಜೀವನ ಆಸ್ತಿಯನ್ನೂ ರಕ್ಷಣೆ ಮಾಡುತ್ತಾ ಇದೆ. ಜನತೆಯ ನಿತ್ಯ ಜೀವನಕ್ಕೆ ಬೇಕಾದಂತಹ ಅವಶ್ಯಕ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಹಂಚಿಕೆಯಾಗುವ ರೀತಿ ಕಾನೂನುಗಳನ್ನು ಮಾಡುತ್ತಿದ್ದಾರೆ. ಇವೊತ್ತು ಕಾನೂನು ಬದ್ಧವಾಗಿ ವಿಧಾನಸಭೆ ಮತ್ತು ವಿಧಾನ ಪರಿಷತ್ತು, ರಾಜ್ಯ ಸಭೆ ಮತ್ತು ಲೋಕಸಭೆ ಕಾಯಿದೆಗಳನ್ನು ಮಾಡುವಾಗ ಮಾನ್ಯ ಸದಸ್ಯರು ಇಷ್ಟೊಂದು ತೀವ್ರತೆಯಿಂದ ಏಕೆ ವಿರೋಧ ಮಾಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಇವೊತ್ತು ಒಂದು ಶಬ್ದ ಹೊರಗೆ ಬರುವುದಿಲ್ಲ. ಅಲ್ಲಿ ಜನತೆಗೆ ಯಾವ ರೀತಿಯ ಸ್ವಾತಂತ್ರ್ಯವೂ ಇಲ್ಲ. ಅಲ್ಲಿರುವಂತೆ ಇಲ್ಲಿ ಯಾವ ರೀತಿಯಲ್ಲಿಯೂ ಕಾರ್ಮಿಕರ ಹಕ್ಕನ್ನು ಹತ್ತಿಕ್ಕಿ ಕಾರ್ಮಿಕರ ಸ್ವಾತಂತ್ರ್ಯವನ್ನು ಹರಣ ಮಾಡಿ ಅವರಿಂದ ಕೆಲಸವನ್ನು ತೆಗೆದುಕೊಳ್ಳುವಂತಹ ಪದ್ಧತಿ ಇಲ್ಲ. ಪ್ರಜಾಪ್ರಭುತ್ವ ಇರುವ ರಾಷ್ಟ್ರಗಳಲ್ಲಿ ನಮ್ಮ ದೇಶದಲ್ಲಿ ಜನತೆಗೆ ಸಿಕ್ಕುವಂತೆ ಜೀವನಾವಶ್ಯಕ ವಸ್ತುಗಳು ಇವರಿಗೆ ಸಿಕ್ಕುವಂತೆ ಮಾಡಬೇಕು ಎಂಬ ಅಭಿಪ್ರಾಯ ಇಲ್ಲ.

ಸ್ವಾಮಿ, ರಾಜ್ಯದಲ್ಲಿ ಹಿಂದಿನ ಸರ್ಕಾರ ಇದ್ದಾಗ ಜನಪ್ರಿಯ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ ಅರಸ್ ಅವರು ಈ ತಿದ್ದುಪಡಿಯನ್ನು ತಂದಿದ್ದರು. ಆ ಕಾಲಕ್ಕೆ ರಾಜ್ಯದಲ್ಲಿ ಅವಶ್ಯಕ ವಸ್ತುಗಳನ್ನು ಸಂಪೂರ್ಣ ರೀತಿಯಿಂದ ಉಪಯೋಗಮಾಡಿಕೊಳ್ಳಬೇಕು ಎನ್ನುವ ಸದುದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದರು. ನಮಗೆ ವಿದ್ಯುಚ್ಛಕ್ತಿ ಅವಶ್ಯಕವಾದದ್ದು, ವಿದ್ಯುಚ್ಛಕ್ತಿ ಇಲ್ಲದಿದ್ದರೆ ನಮ್ಮ ಔದ್ಯೋಗಿಕ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಅಲ್ಲದೆ ನೀರಾವರಿ ಕೆಲಸಗಳಿಗೆ ತೊಂದರೆಯಾಗುವುದನ್ನು ನಾವು ಮನಗಾಣುತ್ತಿದ್ದೇವೆ. ವಿದ್ಯುಚ್ಛಕ್ತಿ ನಮ್ಮ ಜೀವನದಲ್ಲಿ ಬಹು ಪ್ರಾಮುಖ್ಯವಾದುದಾಗಿದೆ. ಆದ್ದರಿಂದ ಈ ಪ್ರಾಮುಖ್ಯತೆಯನ್ನು ಸರ್ಕಾರದವರು ಅರಿತು ವಿದ್ಯುಚ್ಛಕ್ತಿಯ ಇಲಾಖೆಯನ್ನು ಅವಶ್ಯಕ ಸೇವೆಗಳಲ್ಲಿ ಸೇರಿಸಿದ್ದಾರೆ. ಇದು ದೋಷವೇ ಎಂದು ನಾನು ನಮ್ಮ ಮಿತ್ರರಾದ ಕಕ್ಕಿಲಾಯ ಅವರನ್ನು ಕೇಳಬೇಕಾಗಿದೆ. ಹಠಾತ್ತಾಗಿ ಯಾವ ಪೂರ್ವ ಯೋಜನೆಯೂ ಇಲ್ಲದೆ, ನೋಟೀಸ್ ಕೊಡದೆ, ಯಾರಿಗೂ ಗೊತ್ತಾಗದ ಹಾಗೆ ಕಾರ್ಮಿಕರುಗಳು ಕೆಲಸಕ್ಕೆ ಹೋಗದಿದ್ದರೆ ಜನಸಾಮಾನ್ಯರಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ನಾವು ಯೋಚಿಸಬೇಕಾಗಿದೆ. ಹಳ್ಳಿಗಳಲ್ಲಿ ನೀರಾವರಿ ಯೋಜನೆಗಳಿಗೆ ತೊಂದರೆಯಾಗುತ್ತದೆ, ಪಟ್ಟಣಗಳಲ್ಲಿ ಕೈಗಾರಿಕಾ ಕೆಲಸಗಳಿಗೆ ತೊಂದರೆಯಾಗುತ್ತದೆ. ಇದನ್ನು ಸಮಗ್ರ ಯೋಚಿಸಿ, ನಮ್ಮ ಸರ್ಕಾರದವರು ವಿದ್ಯುಚ್ಛಕ್ತಿ ಇಲಾಖೆಯನ್ನು ಅವಶ್ಯಕ ಸೇವೆಗಳಲ್ಲಿ ಸೇರಿಸಿರುವುದು ಯೋಗ್ಯ ಮತ್ತು ಅವಶ್ಯಕವಾಗಿಯೇ ಇದೆಯೆಂದು ನಾನು ಹೇಳುತ್ತೇನೆ.

ಬೆಂಗಳೂರು ನಗರದಲ್ಲಿ ನಾವು ಡೈರಿಯ ಸೇವೆಯ ಬಗ್ಗೆ ನೋಡುತ್ತಿದ್ದೇವೆ. ಕಳೆದ ಒಂದು ವಾರದಿಂದ ನಗರದಲ್ಲಿ ಹಾಲಿನ ಹಂಚಿಕೆಯಾಗುವುದು ಅತ್ಯಂತ ಕಷ್ಟವಾಗಿದೆ. ಕೆಲವು ಕಡೆಗಳಲ್ಲಿ ಒಂದು ಲೀಟರ್ ಹಾಲಿಗೆ ೫ ರೂಪಾಯಿಗಳ ಬೆಲೆ ಕೊಟ್ಟು ಕೊಳ್ಳಬೇಕಾಗಿದೆ. ಹಾಲನ್ನು ನಗರಕ್ಕೆ ಸರಬರಾಜು ಮಾಡಬೇಕಾದರೆ ನಮ್ಮ ರೈತರು ಎಷ್ಟು ಕಷ್ಟಪಡಬೇಕಾಗಿದೆ ಎನ್ನುವುದು ನಮ್ಮ ಸದಸ್ಯರಿಗೆ ಗೊತ್ತಿದೆ. ಆದರೆ, ಕಾರ್ಮಿಕರ ಪರಾತ್ತನೆಯ ಮುಷ್ಕರದಿಂದಾಗಿ, ನಮ್ಮ ರೈತರು ತಂದುಕೊಟ್ಟಂಥ ಹಾಲು ಗಟಾರದಲ್ಲಿ ಹರಿಯುವುದನ್ನು ನಾವು ನೋಡಬೇಕಾಗಿದೆ. ಹಾಲನ್ನು ಸಪ್ಲೈ ಮಾಡತಕ್ಕ ಮೋಟಾರ್‌ಗಳನ್ನು ಬೆಂಕಿ ಹಚ್ಚುವ ಪ್ರಯತ್ನ ನಡೆದಿದೆ ಎಂದು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಇಂಥ ದಿನನಿತ್ಯದ ಅವಶ್ಯಕ ವಸ್ತುಗಳನ್ನು ವಿತರಣೆ ಮಾಡುವಾಗ ಯಾವುದೋ ಒಂದು ಕಾರಣದಿಂದ ಜನರಿಗೆ ತೊಂದರೆ ಮಾಡುವುದು ಸರಿಯಲ್ಲ ಎಂದು ನಾನು ಒತ್ತಿ ಹೇಳಬೇಕಾಗಿದೆ. ಅದು ಮಹಾಪರಾಧವೆಂದು ನಾವು ಹೇಳಬೇಕಾಗಿದೆ. ಇಂಥಾದ್ದನ್ನು ನಾವು ತಡೆಗಟ್ಟಬೇಕು.

---

† Indicates that remarks or speeches have not been revisedby the member concerned.

Public does want that all these essential services should not go on strike so frequently. It is the desire of the public that they should not be affected by illegal strikes and lockouts. I am not a party to subscribe that the public should be inconvenienced and the labourers should be allowed to go as they like. I know my responsibilities. At the same time I say Government has also got the responsibility to see that such things are prevented and checked. There is a method to do it. Simply because I don't like I cannot say that I can arrest anybody on the ground of refusal to work or on such other grounds. This is not a democratic way of functioning. This can happen in a fascist country but not in a democratic country. There is one enactment which was recently passed, called prevention of Blackmarketing Maintenance and Supply of Essential Commodities Act, 1980. This was brought during the interim period of 4 months when Sri Charan Singh was the Prime Minister. It could not become an enactment. By then the elections came and I want to disclose one point here. When this Bill was brought before the House by the present Government various parties opposed this Bill. So my party people also said we should also oppose this Bill. Then I told them you have no right to oppose this Bill because you were a party along with the then Prime Minister Sri Charan Singh who brought this Bill. If you had known that this Bill was not a proper one you could have opposed it at that time. Now simple because you are in the opposition

you cannot oppose it since you are also a party whent was brought before by the then Prime Minister Sri Charan Singh. I told them in case if you want you oppose this Bill now, you will get exposed and I cannot be a party to that So I can say without being contradicted that my party was a party to that enactment because I new such a measure was necessary to prevent soaring prices and blackmarketing. Therefore, it did require this kind of enactment or law which I found necessary to strengthen the hads of the Government to prevent black marketing, hoarding and other things. Now, I would not hesitate to support this bill had it not been for the fact that this bill is fundamentally against all norms, against all rights that the workers are enjoying all these years. So, just because they are on strike and just to prevent that we cannot pass this legislation. Therefore I here and now clearly tell the Government to reconsider whether this Bill should be pursued or it should be withdrawn. If you proceed and say that it should be passed inspite of our opposing it you can pass it. I cannot help saying and warning that this is not going to stop unrest in the State. Instead, there will be so much more unrest. I am afraid you will have to one day feel for what you have done.

Sir, lastly, I have to state what is meant by 'Sycophancy' from Oxford English Dictionary.

'Sycophancy' means practice or quality of a sycophant. The trade or occupation of an informer calumnious accusation, tale-bearing, Now only in Gr. Hist, 2. Mean or servile flattery; the character of a mean or servile flatterer.

The people, like the despot, is pursued with odulation and s. Mill.

Sycophant means–A mean servile, cringing, or abject flatterei a parasite.

This is the meaning Let the people know to whom the cap fits in.

† ಶ್ರೀ ವಿ. ವಿ. ಪತ್ತಾರ್.—(ಜಮಖಂಡಿ) ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಕಾರ್ಮಿಕರ ನಾಯಕರುಗಳು ಬಹಳವಾಗಿ ವಿರೋಧಿಸಿದ್ದಾರೆ. ಗೆಳೆಯ ಶ್ರೀ ತಕ್ಕೇಡ್ ರವರು ಅಷ್ಟೇ ತೀವ್ರ ತರವಾಗಿ ಇದನ್ನು ಬೆಂಬಲಿಸಿದ್ದಾರೆ. ನಮ್ಮ ಇಂದಿನ ದೇಶದ ಪರಿಸ್ಥಿತಿಯನ್ನು ನೋಡಿದಾಗ ಒಂದು ರಿಪೋರ್ಟಿನ ಪ್ರಕಾರ ನಮ್ಮ ದೇಶದಲ್ಲಿ ಕಳೆದ ವರ್ಷದಲ್ಲಿ ಸುಮಾರು ೨೨,೦೩೩ ಸಂಪುಗಳು ಆಗಿದೆ. ೧೭೦ ರಷ್ಟು ಫ್ಯಾಕ್ಟರಿಗಳಿಗೆ ಬೀಗಗಳನ್ನು ಹಾಕಿದ್ದಾರೆ, ನಮ್ಮ ದೇಶದ ಉತ್ಪಾದನೆ -.೨ ರಷ್ಟಕ್ಕೆ ಹೋಗಿದೆ, ಪ್ರೊಡಕ್ಷನ್ ಹೆಚ್ಚಾಗಿದೆ ಅದು ಕಡಿಮೆಯಾಗಿದೆ. ದೇಶದಲ್ಲಿ ಉತ್ಪಾದನೆ ಕಡಿಮೆಯಾಗಿರುವುದಷ್ಟೇ ಅಲ್ಲಾ ಇಂದಿನ ಪರಿಸ್ಥಿತಿಯನ್ನು ನಾವು ನೋಡಿದಾಗ ಹಲವಾರು ಅತ್ಯಾವಶ್ಯಕ ವಸ್ತುಗಳು ಈ ಸಂಪುಗಳಿಂದಾಗಲೀ, ಲಾಕೌಟಿನಿಂದಾಗಲೀ ಜನತೆಗೆ ಲಭ್ಯವಾಗುತ್ತಿಲ್ಲ, ಇಂಥಾ ಸಂದರ್ಭದಲ್ಲಿ ಬಹುಶಃ ಈ ಒಂದು ಮಸೂದೆಯನ್ನು ತರುವುದು ಸರ್ಕಾರದವರ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸಿಯೇ ಈ ಒಂದು ಮಸೂದೆಯನ್ನು ತಂದಿದ್ದಾರೆ. ಇದರಲ್ಲಿ ಸರ್ಕಾರದವರ ದುರದ್ದೇಶವೇನೂ ಇಲ್ಲ. ಆದರೆ ಇದೇ

ವೇಳೆಗೆ ನಾವು ಇದರ ಪರಿಣಾಮವೇನು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಇದರ ಪರಿಣಾಮ ವೇನೆಂಬುದನ್ನು ನಾವು ಅನುಚಾನವಾಗಿ ಪರಿಶೀಲಿಸಿದರೆ, ಅನಿವಾರ್ಯವಾಗಿ ಕೆಲವು ಮಾತುಗಳನ್ನು ನಾವು ಒಪ್ಪಬೇಕಾಗುತ್ತದೆ. ಒಂದು ವೇಳೆ ನಾವು ಇಂದು ಇರುವಂಥಾ ಲೇಬರ್ ಕಾನೂನುಗಳ ಬಗ್ಗೆ ವಿಚಾರಣೆ ಮಾಡಿದರೆ ಬಹುಶ: ಎಲ್ಲಾ ಕೃಷಿ ಕೆಲಸಗಾರರ ಮತ್ತು ಕಾರ್ಮಿಕರಿಗೆ ಸಹಾಯ ಮಾಡುವಂಥಾ ಅಥವಾ ಅವರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ನಿರ್ಣಾಯಕವಾದ ಕಾನೂನುಗಳು ಯಾವುದೂ ಇಲ್ಲ. ನಾವು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟ್ ಅಂತ ನೋಡಿದ್ದೇವೆ. ಮತ್ತು ಕನ್‌ಸಿಲಿಯೇಷನ್ ಪ್ರೊಸೀ ಡಿಂಗ್ಸ್ ನೋಡಿದಾಗ, ಕನ್‌ಸಿಲಿಯೇಷನ್ ಪ್ರೊಸೀಡಿಂಗ್ಸ್‌ನಲ್ಲಿ ಯಾವುದಾದರೂ ಒಂದು ಪಕ್ಷ ಅದನ್ನು ನಾವು ಒಪ್ಪುವುದಿಲ್ಲವೆಂದರೆ ರೆಫರೆನ್ಸ್ ಮಾಡಬೇಕೇ ಹೊರತು ಅಲ್ಲಿಯವರೆಗೆ ಕಾರ್ಮಿಕರ ಸಮಸ್ಯೆಗಳು ಬಗೆಹರಿಯುತ್ತಿಲ್ಲ.

೧೧. ೩೦ ಎ.ಎಂ

ಅಧ್ಯಕ್ಷರೆ, ಬಹಳಷ್ಟು ಕೇಸುಗಳಲ್ಲಿ ಕಾರ್ಮಿಕರು ವಿನಾ ಕಾರಣ ಸಂಪುಗಳನ್ನು ಮಾಡುತ್ತಾರೆ. ಎಲ್ಲದರಲ್ಲಿಯೂ ಎಂದು ನಾನು ಹೇಳುವುದಿಲ್ಲ. ಇವೊತ್ತು ಅವರಿಗೂ ಕೂಡ ಒಂದು ತರಹ ಸಮಸ್ಯೆ ಗಳು ಇರುತ್ತವೆ. ಇಂತಹ ಒಂದು ನಿಷ್ಠುರವಾದ ಕಾಯಿದೆಯನ್ನು ತರುವಾಗ ಕೆಲಸಗಾರರ ಸಮಸ್ಯೆ ಗಳನ್ನು ಹೇಗೆ ಬಗೆಹರಿಸಬೇಕು ಎಂಬುದರ ಬಗ್ಗೆ ಸೈಡ್ ಬೈ ಸೈಡ್ ವಿಚಾರ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳಬೇಕು ಅಂದರೆ ನಮ್ಮದೇ ಒಂದು ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಒಂದು ಸಂಪು ನಡೆಯಿತು. ಅಲ್ಲಿದ್ದಂತಹ ಕಾರ್ಮಿಕರು ಕೇವಲ ೧೦೦ ರೂಪಾಯಿ ಪಗಾರ ಪಡೆಯು ತ್ತಿದ್ದರು. ಸುಮಾರು ೧೦ ವರ್ಷಗಳವರೆಗೂ ಕೆಲಸ ಮಾಡಿದರೂ ಅವರನ್ನು ಕನ್‌ಫರ್ಮ್ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಅವರು ಸ್ಟ್ರೈಕ್ ಮಾಡಲಿಕ್ಕೆ ಹೋದರು. ಬಹುಶಃ ಈ ಕಾಯಿದೆ ಪ್ರಕಾರ ಎಸೆನ್‌ಷಿಯಲ್ ಸರ್ವೀಸ್ ಎಂದು ಅವರನ್ನು ಪರಿಗಣಿಸಬೇಕಾಗಿದೆ. ಆಗ ಮಾಲೀಕರು ಏನು ಮಾಡಿದರು ಅಂದರೆ ಆ ಫ್ಯಾಕ್ಟರಿಯನ್ನು ಕಂಪ್ಲೀಟ್ ಕ್ಲೋಸ್ ಮಾಡಿದರು. ಅನಂತರ ನಾವು ಆ ಮಾತನ್ನು ನಮ್ಮ ಲೇಬರ್ ಮಿನಿಸ್ಟರ್ ಕಡೆ ತಂದಾಗ ನಾವು ಕಾರ್ಖಾನೆ ಚಾಲೋ ಮಾಡುವುದಿಲ್ಲ ಅಂತ ಕಾರ್ಖಾನೆ ಮಾಲೀಕರು ಹೇಳಿದರು. ಆಗ ಆ ಕಾರ್ಮಿಕರಿಗೆ ಎರಡನೆಯ ಕೆಲಸ ಏನೂ ಇಲ್ಲ, ಆದಕ್ಕೋಸ್ಕರವಾಗಿ ಕಾರ್ಮಿಕರು ಉಪವಾಸ ಇರಬೇಕಾಗುತ್ತದೆ. ಆಗ ಅವರು ತಮ್ಮ ತಮ್ಮ ಮನೆಗಳಿಗೆ ಹೋಗಬೇಕಾಗುತ್ತದೆ. ಇಂತಹ ವಿಷಯದಲ್ಲಿ ಸರ್ಕಾರದವರು ಕಾರ್ಮಿಕರಿಗೆ ಪರಿ ಹಾರವನ್ನು ಕೊಡುವ ಕಾಯಿದೆಯನ್ನು ಮಾಡುವುದು ಅವಶ್ಯಕ. ಈ ತರಹ ಕಾಯಿದೆಯನ್ನು ಮಾಡು ವಾಗ ಕಾರ್ಮಿಕರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವಂತೆ ಸೈಡ್ ಬೈ ಸೈಡ್ ಮಾಡ ಬೇಕಾಗುತ್ತದೆ. ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹೇಳಿದಂತೆ Ours is a State which requires to provide justice to the people Economic, Political and Soci.l. ಆದ್ದರಿಂದ ಈ ಅಶಕ್ತ ಜನಾಂಗ, ಲೇಬರ್ ಕ್ಲಾಸ್, ವರ್ಕಿಂಗ್ ಕ್ಲಾಸ್ ಇವರ ಸಮಸ್ಯೆ ಗಳನ್ನು ತೀವ್ರತರವಾಗಿ ಬಗೆಹರಿಸುವಂಥ ಸಾಧನೆಯನ್ನು ಕಾಯಿದೆಯಲ್ಲಿ ಹಾಕಬೇಕಾಗಂತ್ತದೆ ಕೆಲವೊಂದು ವಿಷಯದಲ್ಲಿ ವಿಚಾರ ಮಾಡಿದರೆ ಇಂತಹ ಕಾಯಿದೆ ಅವಶ್ಯಕ ಎಂದು ಅನಿಸುತ್ತದೆ. ಕೆಲವೊಂದು ವಿಷ ಯದಲ್ಲಿ ಕಾರ್ಮಿಕರು ಗಮನ ಸೆಳೆದಾಗ ಈ ಕಾಯಿದೆಯಿಂದ ಕೆಲವೊಂದು ರೀತಿ ಅನ್ಯಾಯ ಮಾಡಬಹುದು ಅಂಥ ಭಾವನೆ ಬರುತ್ತದೆ. ಈಗ ಇದ್ದ ಕಾಯಿದೆ ಪ್ರಕಾರ ಅನ್ಯಾಯವಾಗಿ ಸಂಪುಗಳನ್ನು ಮಾಡಿದರೆ ಕಾರ್ಮಿಕರನ್ನು ತೆಗೆಯಬಹುದು, ರಿಟ್ರೆಂಚ್ ಮಾಡಬಹುದು. ಈ ರೀತಿ ಹಲವಾರು ಪನಿಷ್‌ಮೆಂಟ್‌ಗಳು ಇವೆ, ಈ ಒಂದು ಕಾಯಿದೆ ೪-೫-೬-೭ನೇ ಕಲಮುಗಳನ್ನು ನೋಡಿದಾಗ ಬಹುಶ: ಒಬ್ಬ ಕಾರ್ಮಿಕ ಕೆಲಸ ಮಾಡಲು ನಿರಾಕರಿಸಿದರೆ ಅವನನ್ನು ಜೈಲಿಗೆ ಹಾಕಬೇಕಾಗುತ್ತದೆ. ಅವನನ್ನು ಜೈಲಿಗೆ ಕಳುಹಿಸಿದರೆ ಅವನ ಮನೆತನದ ಪರಿಪಾಲನೆ ಮಾಡುವವರು ಯಾರೂ ಇರುವುದಿಲ್ಲ. ಇಂತಹ ಕಷ್ಟಕರವಾದ ಕಲಮ್ ಗಳು ಇಲ್ಲಿ ಇರತಕ್ಕದ್ದು ಸರಿಯಲ್ಲ ಇದಕ್ಕೆ ಬೇರೆಯಾಗಿ ಕಾರ್ಮಿಕರಿಗೂ, ಹಾಗೂ ಮಾಲೀಕರಿಗೂ ಪರಿಣಾಮಕಾರಿಯಾಗಿ ಹತೋಟಿಯಲ್ಲಿ ತರುವಂತಾದ್ದು ಇದರಲ್ಲಿ ಹಾಕಬೇಕಾಗುತ್ತದೆ. ಅದನ್ನು ಮಾಡ ಬೇಕೆಂದು ನಾನು ನಮ್ಮ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಬರೀ ಕಾಯಿದೆ ಮಾಡುವುದರಿಂದ ಬಹುಶಃ ಒಂದು ವಿಷಯದಲ್ಲಿ ಇಂಡಸ್ಟ್ರಿಯಲ್ ಪೀಸ್ ಅಂತ ಉಳಿಯಲಿಕ್ಕಿಲ್ಲ. ಆದುದರಿಂದ ಇನ್ನೊಮ್ಮೆ ಸರ್ಕಾರದವರು ಈ ಕಾಯಿದೆಯನ್ನು ಸಮಗ್ರವಾಗಿ ಪರಿಶೀಲನೆ ಮಾಡ ಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ.—(ಹುಬ್ಬಳ್ಳಿ) ಸನ್ಮಾನ್ಯ ಅಧ್ಯಕ್ಷರೆ, ನಾನು ಇಂದಿನ ಮತ್ತು ಹಿಂದಿನ ಮುಖ್ಯ ಮಂತ್ರಿಗಳ ಮಾತನ್ನು ಕೇಳಿದೆ. ನಾನು ಈ ಸಂದರ್ಭದಲ್ಲಿ ಹೆಚ್ಚು ಉದ್ದವಾಗಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಇಂದಿನ ಮುಖ್ಯ ಮಂತ್ರಿಗಳು, ಹಿಂದಿನ ಮುಖ್ಯ ಮಂತ್ರಿಗಳು ಸ್ವಲ್ಪ ಲಕ್ಷ್ಯ ಕೊಡಬೇಕಾಗಿದೆ. ಈಗ ನಾನು ಅಂತರವನ್ನು ಹೇಳಬೇಕಾಗಿದೆ. ಅದು ಅಧಿಕಾರದ ಅಂತರ. ಅಧಿಕಾರ ಇದ್ದಾಗ ಎಷ್ಟೋ ಸಲ ಅನೇಕ ವಿಚಾರಗಳು ಗಮನಕ್ಕೆ ಬರುವುದಿಲ್ಲ. ಕಾರಣ ಕಾರ್ಯದ ಒತ್ತಡ ಇರಬಹುದು, ರಾಜಕೀಯ ಒತ್ತಡ ಇರಬಹುದು ಈ ರೀತಿಯಾಗಿ ನಮ್ಮ ವಿರೋಧ ಪಕ್ಷದ ನಾಯಕರಾದ ದೇವರಾಜ್ ಅರಸ್ ಅವರು ಈ ಮಸೂದೆಯನ್ನು ತಂದಾಗ ಪ್ರಥಮವಾಗಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾನು ಮತ್ತು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಇದರ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿದಾಗ ಇಷ್ಟೊಂದು ಸಂಪುಗಳು ನಡೆಯುತ್ತಿರುವಾಗ ಇವುಗಳನ್ನೆಲ್ಲಾ ಹೇಗೆ ನಿಲ್ಲಿಸಬೇಕು ಅಂತ ಕೇಳಿದರು. ಅನೇಕ ಸಲ ಒಬ್ಬ ಕಂಡಕ್ಟರ್ ಏನೋ ಮಾಡಿದ ತಪ್ಪಿನಿಂದ ಸಾರ್ವ ಜನಿಕರಿಗೆ ಎಷ್ಟು ತೊಂದರೆಯಾಗುತ್ತದೆ ಇದು ನಿಮಗೆ ತಿಳಿಯುವುದಿಲ್ಲವೆ ಬೊಮ್ಮಾಯಿಯವರೆ ಅಂಥ ಕೇಳಿದರು. ಅದು ನಿಜ. ಕೊನೆಗೆ ಮತ್ತೊಂದು ಸಾರಿ ಚರ್ಚೆ ಮಾಡಿದಾಗ ನಾನು ಹೇಳಿದ್ದರ ಬಗ್ಗೆ ಒಪ್ಪಿಕೊಂಡರು. ಅವರು ಹೇಳಿದ ಪ್ರಥಮವಾದ ಪ್ರತಿಕ್ರಿಯೆ ಇದನ್ನು ಪಾಸ್ ಮಾಡಲೇ ಬೇಕು ಅಂತ ಇತ್ತು. ಒಂದು ತಿಂಗಳು ಎರಡು ತಿಂಗಳು ಆದಮೇಲೆ ನಾನು ಹೇಳಿದ ಮೇಲೆ ಇದರಲ್ಲಿ ತೊಂದರೆ ಇದೆ, ಮುಂದೆ ಹಾಕುವುದು ಒಳ್ಳೆಯದು ಅಂತ ಒಪ್ಪಿದರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಅವರೂ ಕೂಡ ಇದನ್ನು ಇಂಟ್ರಡ್ಯೂಸ್ ಮಾಡುವಾಗ ಸರಿಯಾದ ರೀತಿಯಲ್ಲಿ ಓದಿಕೊಂಡು, ತಿಳಿದುಕೊಂಡು, ಇಂಟ್ರಡ್ಯೂಸ್ ಮಾಡಿರಲಿಲ್ಲ ಅಂತ ಕಾಣುತ್ತದೆ, ತಾವು ಅದೇ ರೀತಿ ಇದನ್ನು ಸರಿಯಾದ ರೀತಿಯಲ್ಲಿ ಓದಿಕೊಂಡು, ತಿಳಿದುಕೊಂಡು ಅರ್ಥ ಮಾಡಿಕೊಂಡು ಇದರ ಪರಿಣಾಮಕಾರಿ ಏನಾಗುತ್ತದೆ ಎಂದು ಆಳ ವಾಗಿ ಆಲೋಚನೆ ಮಾಡಿದ್ದೀರೋ ಇಲ್ಲವೋ ಎನ್ನುವ ಸಂಶಯ ಬರುತ್ತಿದೆ. ಇದರಲ್ಲಿ ನಾವು ಯಾರೂ ಪಕ್ಷ ದೃಷ್ಟಿಯಿಂದ ನೋಡುವುದಿಲ್ಲ. ಇವೊತ್ತು ಯಾವುದೇ ಮಸೂದೆ ಬಂದರೂ ಅದು ಎಲ್ಲರಿಗೂ ಅನ್ವಯಿಸುತ್ತದೆ ಈ ದೃಷ್ಟಿಯಿಂದ ನೋಡಿದಾಗ ಸರ್ಕಾರ ಒಂದು ಸಾರಿ ಮಸೂದೆಯನ್ನು ಈ ಮನೆಯಲ್ಲಿ ಇಂಟ್ರಡ್ಯೂಸ್ ಮಾಡಿದ ಮೇಲೆ ಅದನ್ನು ಹಿಂತೆಗೆದುಕೊಳ ಬೇಕೆಂದು ಹೇಳುವುದಿಲ್ಲ. ಈ ಕಾನೂನು ಬಹಳ ಜಟಿಲವಾಗಿದೆ, ಕಾನೂನು ಮಾಡತಕ್ಕದ್ದು ಕಷ್ಟವಾಗಿದೆ. ಒಂದು ಕಡೆ ನೋಡಿದಾಗ ರಾಷ್ಟ್ರದಲ್ಲಿ ವಿನಾಕಾರಣವಾಗಿ ನಡೆಯತಕ್ಕ ಅನೇಕ ಸಂಪುಗಳ ಬಗ್ಗೆ ಜಿಗುಪ್ಸೆ ಬಂದಿದೆ. ನಾನೇ ಕೆಲವು ಸಾರಿ ನೋಡಿ ದ್ದೇನೆ. ಒಬ್ಬ ಕಂಡಕ್ಟರ್ ಸಾರ್ವಜನಿಕರ ಜೊತೆ ಸರಿಯಾಗಿ ನಡೆದುಕೊಳ್ಳದಿದ್ದಾಗ ಪ್ರತಿಭಟನೆ ಮಾಡಿ ದರೆ ಬಸ್ಸು ನಿಲ್ಲಿಸಿಬಿಡುತ್ತಾನೆ. ಏನೋ ಒಂದು ಅಚಾತುರ್ಯ ನಡೆದರೆ ಆ ಡಿವಿಜನ್ನಿನ ಎಲ್ಲಾ ಬಸ್ಸು ಗಳನ್ನು ನಿಲ್ಲಿಸಿಬಿಡುತ್ತಾರೆ. ಈ ರೀತಿ ಆದರೆ ಸರ್ಕಾರ ಹೇಗೆ ನಡೆಸಬೇಕು. ಇವೊತ್ತು ಸಾರ್ವಜನಿಕರಿಗೆ ಆಗತಕ್ಕ ತೊಂದರೆಗಳನ್ನು ತಪ್ಪಿಸಬೇಕು. ಇದರ ಜೊತೆಗೆ ಕಾರ್ಮಿಕರ ಮೂಲಭೂತ ಹಕ್ಕುಗಳಿಗೆ ಬಾಧೆ ಬರದಂತೆ ಕಾನೂನು ಮಾಡಬೇಕಾಗುತ್ತದೆ. ನಮ್ಮ ರಾಷ್ಟ್ರವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿ ದರೆ ಆಗುವುದಿಲ್ಲ. ಜಪಾನ್, ಜರ್ಮನ್, ಇಂಗ್ಲೆಂಡ್‌ಗಳಿಗೆ ಹೋಲಿಸಲಿಕ್ಕೆ ಆಗುವುದಿಲ್ಲ. ಇವೊತ್ತು ಒಬ್ಬ ಎಂಟರ್‌ಪ್ರಿನರ್ ಎಲ್ಲೋ ಸಾಲ ಮಾಡಿ ೧ ಲಕ್ಷ ರೂಪಾಯಿ ತೆಗೆದುಕೊಂಡು ಸರ್ಕಾರದಿಂದ ೪-೫ ಲಕ್ಷ ರೂಪಾಯಿ ತೆಗೆದುಕೊಂಡು ಉದ್ದಿಮೆ ಪ್ರಾರಂಭ ಮಾಡಿ ೫೦ ಜನ ಕಾರ್ಮಿಕರನ್ನು ಇಟ್ಟು ಕೊಂಡು ಸಂಪಾದನೆ ಮಾಡುತ್ತಾನೆ. ಅವನು ಏನು ಮಾಡಬೇಕು. ಈ ಸಮಸ್ಯೆಗಳೆಲ್ಲಾ ಇವೆ. ಇದರ ಜೊತೆಗೆ ಅಧಿಕಾರಿಗಳು, ಈ ಉದ್ದಿಮೆ ಯೋಜನೆಯಿಂದ ಕಾರ್ಮಿಕರ ಹಕ್ಕುಗಳನ್ನು ಹತ್ತಿಕ್ಕುತ್ತಿದ್ದಾರೆ. ನಾನು ಗುಲ್ಬರ್ಗ ವಿಭಾಗಕ್ಕೆ ಚುನಾವಣೆ ಸಂದರ್ಭದಲ್ಲಿ ಹೋಗಿದ್ದಾಗ ಆ ಭಾಗದ ಡ್ರೈವರ್ಸ್ ಮತ್ತು ಕಂಡಕ್ಟರುಗಳು ಒಳ್ಳೆಯ ಬಸ್ಸು ಕೊಡಿ: ಟೈರುಗಳು ಚೆನ್ನಾಗಿರತಕ್ಕ ಬಸ್ಸುಗಳು ಕೊಡಿ: ಇಂಜಿನ್ ಸರಿಯಾಗಿರತಕ್ಕ ಬಸ್ಸುಗಳನ್ನು ಕೊಡಿ, ನಾವುಗಳು ಪ್ರಯಾಣಿಕರನ್ನು ಸುರಕ್ಷಿತವಾಗಿ ಒಯ್ಯಬೇಕಾದರೆ ಬಸ್ಸುಗಳು ಸರಿಯಾಗಿರಬೇಡವೆ ಎಂದು ಕೇಳುತ್ತಿದ್ದರು. ಸೀಟುಗಳು ಕಿತ್ತು ಹೋಗಿವೆ: ಗ್ಲಾಸುಗಳು ಒಡೆದು ಹೋಗಿವೆ. ಇಂಥ ಬಸ್ಸುಗಳನ್ನು ತೆಗೆದುಕೊಂಡು ನಾವು ಕೆಲಸ ಮಾಡುವುದು ಹೇಗೆ? ಎಂದು ಕೇಳುತ್ತಿದ್ದರು. ಸರ್ಕಾರ ಒಳ್ಳೆಯ ಬಸ್ಸುಗಳನ್ನು ಕೊಡದೆ, ಸುಸಜ್ಜಿತವಾದ ಬಸ್ಸುಗಳನ್ನು ಕೊಡದೇ ನೌಕರವರ್ಗವನ್ನು ಯಾವ ರೀತಿಯಲ್ಲಿ ತಪ್ಪಿತಸ್ಥನನ್ನಾಗಿ ಮಾಡುತ್ತದೆ? ಬಸ್ಸುಗಳು ನಿಲ್ದಾಣದಿಂದ ಹೊರಟು ೨೦-೩೦ ಮೈಲಿ ಹೋದಮೇಲೆ ನಿಂತು ಹೋಗುತ್ತವೆ: ಇಂಜಿನ್ ರಿಪೇರಿ ಮಾಡುವವರು ಇರುವುದಿಲ್ಲ. ಇಂಥ ಸಮಸ್ಯೆಗಳು ಬರುವುದಕ್ಕೆ ಸರ್ಕಾರ, ಸಾರ್ವಜನಿಕರು ಹಾಗೂ ನೌಕರವರ್ಗ ಎಲ್ಲರೂ ಕಾರಣರಾಗಿರುತ್ತಾರೆ. ಇಂಥಾ ಸಮಸ್ಯೆಗಳು ಬಂದಾಗ ಮಾನ್ಯ ವಿರೋಧ ಪಕ್ಷದ ನಾಯಕರು

ಹೇಳಿದಂತೆ ಮಾನವೀಯತೆಯಿಂದ ನೋಡಬೇಕಾಗುತ್ತದೆ; ಅದು ಬಿಟ್ಟು ಬರೀ ಕಾನೂನು ದೃಷ್ಟಿಯಿಂದ ನೋಡಬಾರದು. ಆದುದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪ್ರತಿಷ್ಠೆಯ ವಿಷಯವನ್ನಾಗಿ ಪರಿಗಣಿಸಬಾರದು. ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟನ್ನು ತಂದರು. ಅದರಲ್ಲಿ ಅನೇಕ ಉತ್ತಮ ವಿಚಾರಗಳಿದ್ದವು ಅದರಲ್ಲಿ ಮುಷ್ಕರಗಳ ಮತ್ತು ಯೂನಿಯನ್‌ಗಳ ಕುರಿತು ವಿಚಾರಗಳಿದ್ದವು. ಒಂದು ಸಂಸ್ಥೆಯಲ್ಲಿ ಎರಡು ಯೂನಿಯನ್‌ಗಳು ಇರಬಾರದೆನ್ನುವ ವಿಚಾರವೂ ಅದರಲ್ಲಿದ್ದವು. ಯೂನಿಯನ್‌ನ ಪದಾಧಿಕಾರಿಗಳು ಕಾರ್ಮಿಕರೇ ಆಗಿರಬೇಕು; ಹೊರಗಿನವರು ಇರ ಕೂಡದೆಂದಿದೆ. ರಾಜಕೀಯ ಪಕ್ಷದ ನಾಯಕರುಗಳು ಕಾರ್ಮಿಕರ ಯೂನಿಯನ್‌ಗಳಲ್ಲಿ ಇರಲೇಬಾರದು. ಒಂದು ವೇಳೆ ಇದ್ದರೆ, ಅದರಿಂದ ಅನೇಕ ತೊಂದರೆಗಳು ಉದ್ಭವವಾಗುತ್ತವೆ. ಅವೆಲ್ಲ ನಮಗೆ ಗೊತ್ತಿದೆ. ಕಾರ್ಮಿಕ ಸಂಘಗಳನ್ನು ತಮ್ಮ ರಾಜಕೀಯಕ್ಕಾಗಿ ಉಪಯೋಗ ಮಾಡಿಕೊಂಡ ಉದಾಹರಣೆಗಳು ನಮ್ಮಲ್ಲಿ ಇವೆ. ವಿರೋಧ ಪಕ್ಷದವರು ಕಾರ್ಮಿಕ ಸಂಘದ ಪದಾಧಿಕಾರಿಯಾಗಿದ್ದರೆ, ಆ ಕಾರ್ಮಿಕ ಸಂಘವನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟಿ ಚಳುವಳಿ, ಮುಷ್ಕರ ಮುಂತಾದವನ್ನು ನಡೆಸಿದ ಉದಾಹರಣೆಗಳಿವೆ. ಇದನ್ನೆಲ್ಲ ಗ್ರಹಿಸಿ, ಅನೇಕ ಉಪಯುಕ್ತವಾದ ವಿಚಾರಗಳನ್ನೊಳಗೊಂಡ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟನ್ನು ಶ್ರೀ ಮುರಾರ್ಜಿ ದೇಸಾಯಿ ಅವರ ಸರ್ಕಾರ ತಂದು, ಅದನ್ನು ಲೋಕಸಭೆಯಲ್ಲಿ ಮಂಡಿಸಿದ ಮೇಲೆ, ಸಾರ್ವಜನಿಕರ ಅಭಿಪ್ರಾಯ ಅದಕ್ಕೆ ವಿರುದ್ಧವಾಗಿ ಬಂದಾಗ ಅದನ್ನು ಅಂಗೀಕಾರ ಮಾಡತಕ್ಕ ಪ್ರಯತ್ನವನ್ನು ಜನತಾ ಸರ್ಕಾರ ಮಾಡಲಿಲ್ಲ. ಅದನ್ನು ಅಂಗೀಕಾರ ಮಾಡಬಹುದಾಗಿತ್ತು; ಆಗ ಜನತಾ ಪಕ್ಷಕ್ಕೆ ಬಹುಮತವಿದ್ದರೂ ಅಂಗೀಕಾರ ಮಾಡಲಿಲ್ಲ. ಇಂತಹ ಮಸೂದೆಗಳನ್ನು ಸರ್ವಾನುಮತದಿಂದ ಮತ್ತು ಒಮ್ಮತಾಭಿಪ್ರಾಯದಿಂದ ಅಂಗೀಕಾರ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ನಮ್ಮ ಮುಂದಿರುವ ಮಸೂದೆಯಲ್ಲಿನ ಕೆಲವು ಕಲಂಗಳು ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿವೆ. ಈ ಮಸೂದೆಯ ವ್ಯಾಖ್ಯೆಯಲ್ಲಿ "In this Act, unless the context otherwise requires.

(a) "essential service" means.

(i) any service connected with the supply of water and electricity :

(ii) any transport service for the carriage of passengers of goods by motor vehicles.

ಎಂದು ಹೇಳಲಾಗಿದೆ. ಅಲ್ಲದೆ, ಮಸೂದೆಯ ಉದ್ದೇಶ ಮತ್ತು ಕಾರಣದಲ್ಲಿ:

> "To prevent the workers of the Karnataka Electricity Board, the Bangalore Water Supply and Sewerage Board, The Karnataka State Road Transport Corporation and Drivers of transport services, including taxis and autorickshaws and other similar services to be notified by the Government from going on snap stikes frequently for flimsy reasons...........

ಎಂದು ಹೇಳಲಾಗಿದೆ. ಇದರಿಂದ sweeping, far-readhing powers and unlimited powers. ಕೊಟ್ಟ ಹಾಗೆ ಆಗುತ್ತದೆ. ಹಾಗೆ ನೋಡಿದರೆ ಕೃಷಿ ಉತ್ಪನ್ನ ವಸ್ತುಗಳೂ ಸಹ ಅಗತ್ಯ ವಸ್ತುಗಳು ಮತ್ತು ಅಗತ್ಯ ಸೇವೆಯನ್ನವಲಂಬಿಸಿರುವವು. ನಮ್ಮ ಕಡೆ ಹತ್ತಿ ಬಿಡಿಸಲಿಕ್ಕೆ, ಹೆಚ್ಚು ಕೂಲಿ ಕೊಡಬೇಕೆಂದು ಹೇಳಿ ಕಾರ್ಮಿಕರು ಕೆಲಸಕ್ಕೆ ಬರದಿದ್ದರೆ ಒತ್ತಾಯದಿಂದ ಕೆಲಸ ಮಾಡಬೇಕೆಂದು ಅವರಿಗೆ ಹೇಳಬಹುದು. ಇಂತಹ ಅಧಿಕಾರವನ್ನು ನಾವು ಸರ್ಕಾರಕ್ಕೆ ಕೊಡುವುದಕ್ಕೆ ಒಪ್ಪುವುದಿಲ್ಲ. ಅಗತ್ಯ ಸೇವೆಯ ವ್ಯಾಪ್ತಿ ಸಾರಿಗೆ, ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜುಗಳಿಗೆ ಸಂಬಂಧಿಸಿದಂತೆ ಸೀಮಿತವಾಗಿದ್ದರೆ ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ, ಇದು ಇನ್ನೂ ಮುಂದಕ್ಕೆ ಹೋಗುತ್ತದೆ. ಇತರ ಅಗತ್ಯ ಸೇವೆಗಳನ್ನು ಈ ಮಸೂದೆಯ ವ್ಯಾಪ್ತಿಗೆ ಒಂದು ನೋಟಿಫಿಕೇಷನ್ ಮುಖಾಂತರ ತರಬೇಕೆನ್ನುವ ಅಧಿಕಾರವನ್ನೂ ಇವರು ಕೇಳುತ್ತಿದ್ದಾರೆ. ಇದನು ನಾನು ಒಪ್ಪುವುದಿಲ್ಲ. ನಾನಲ್ಲದೆ,

ಆಡಳಿತ ಪಕ್ಷದ ಸದಸ್ಯರೂ ಸಹ ಇದನ್ನು ಒಪ್ಪುವುದಿಲ್ಲವೆಂದು ನನಗನ್ನಿಸುತ್ತಿದೆ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟನ್ನು ತಂದಾಗ ಜನತಾ ಪಕ್ಷದ ಸದಸ್ಯರಲ್ಲೇ ಕೆಲವರು ಅದನ್ನು ವಿರೋಧ ಮಾಡಿದರು. ಏತಕ್ಕೆ ಮಾಡಿದರು? ಅದರಿಂದ ಕಾರ್ಮಿಕ ವರ್ಗಕ್ಕೆ ಅನ್ಯಾಯವಾಗುತ್ತದೆ, ಅವರ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬರುತ್ತದೆಂದು ವಿರೋಧ ಮಾಡಿದರು. ಆದರ ಬಗ್ಗೆ ಲೋಕಸಭೆಯಲ್ಲೂ ಚರ್ಚೆಯಾಯಿತು. ವೃತ್ತಪತ್ರಿಕೆಗಳು ಸ್ಟೇಟ್ ಸಬ್ಜೆಕ್ಟ್‌ಗೆ ಸಂಬಂಧಿಸಿದವು. ಅವುಗಳಿಗೆ ಸಂಬಂಧಿಸಿದಂತೆ ಇಂತಹ ಕಾನೂನನ್ನು ಸರ್ಕಾರ ಮಾಡಬಹುದು; ಏಕೆಂದರೆ ಇಲ್ಲಿ ಅಗತ್ಯ ಸೇವೆ ಇರುತ್ತದೆ; ಪತ್ರಿಕೆಗಳು ಮುದ್ರಣವಾಗಿ ಬರದಿದ್ದರೆ ಅನೇಕ ಜನರಿಗೆ ತೊಂದರೆಯಾಗುತ್ತದೆಂದು ಹೇಳಿ ಯಾರಾದರೊಬ್ಬರು ಪತ್ರಿಕಾ ವರದಿಗಾರರು ಯಾವುದೋ ಕಾರಣಕ್ಕಾಗಿ ವರದಿ ಮಾಡುವುದಿಲ್ಲವೆಂದು ಹೇಳಿಬಿಟ್ಟರೆ ಅವರನ್ನೂ ಕೂಡ ಬಂಧಿಸಬಹುದು. ಹಾಗೆ ಮಾಡಿ ನೀವು ಪತ್ರಿಕಾ ಸ್ವಾತಂತ್ರವನ್ನು ಕಸಿಯುತ್ತಿದ್ದೀರಿ; ಸಂವಿಧಾನದ ೧೯ನೇ ವಿಧಿಯಲ್ಲಿ ನೀಡಿರುವ ಹಕ್ಕನ್ನು ಕಸಿಯುತ್ತಿದ್ದೀರಿ. ಇದನ್ನು ತಾವು ಆಳವಾಗಿ ಆಲೋಚನೆ ಮಾಡಬೇಕು. ಇಂದು ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಾರೆ; ನಾಳೆ ಇನ್ನೊಬ್ಬರಾಗಬಹುದು. ಆದುದರಿಂದ, ಒಂದು ಕಾನೂನನ್ನು ಮಾಡುವಾಗ ಅದು ಸಮಾಜದ ಮೇಲೆ ಎಂತಹ ಪರಿಣಾಮ ಬೀರುತ್ತದೆ ಮತ್ತು ಅದರಿಂದ ನಾಗರೀಕರ ಮೇಲೆ ಎಂತಹ ಪರಿಣಾಮವಾಗುತ್ತದೆನ್ನುವುದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾದ್ದು ನಿಮ್ಮ ಕರ್ತವ್ಯ. ಆದುದರಿಂದಲೇ, ಇದನ್ನು ಇನ್ನೊಮ್ಮೆ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಈ ಕಾನೂನಿನ ಕಲಂಗಳಿಂದ ಪಡೆದಂಥ ಅಧಿಕಾರ ಅನೇಕ ಸಾರಿ ದುರುಪಯೋಗವಾಗುವ ಸಂಭವಗಳ ಜೊತೆಗೆ, ಈ ಕಾನೂನು ಚಲಾವಣೆಗೆ ಬಂದರೆ ಕಾರ್ಮಿಕರ ಮೂಲಭೂತ ಹಕ್ಕುಗಳು ಪೂರ್ಣವಾಗಿ ಮುಳುಗಿ ಹೋಗಿ ಅವರಿಗೆ ಬಹಳ ಅನ್ಯಾಯಗಳಾಗುವ ಅವಕಾಶವಿದೆ.

ಈ ಮಸೂದೆಯ ಕಲಂ ೩ ರಲ್ಲಿ ಕೆಲಸ ಮಾಡಲು ನಿರಾಕರಿಸಿದ್ದನ್ನು ಪ್ರತಿಬಂಧಿಸಲು ಅಧಿಕಾರ ನೀಡಲಾಗಿದೆ. ಹಾಗಾದರೆ, ನಿರಾಕರಣೆಯನ್ನು ನೀವು ಯಾವ ಅರ್ಥದಲ್ಲಿ ಪರಿಗಣಿಸುತ್ತೀರಿ? ನಿರಾಕರಣೆಯನ್ನು ನೀವು ಯಾವ ರೀತಿ ನಿರ್ಧಾರ ಮಾಡುತ್ತೀರಿ? ಅದರ ಬಗ್ಗೆ ಈ ಮಸೂದೆಯಲ್ಲಿ ವಿವರಗಳಿಲ್ಲ. ಆದುದರಿಂದ, ನಾನು ಇದರ ಮೇಲೆ ಹೆಚ್ಚು ವಾದ ವಿವಾದ ಮಾಡುವುದಕ್ಕೆ ಹೋಗುವುದಿಲ್ಲ. ಅನೇಕ ವಿಚಾರಗಳನ್ನು ಉದಾಹರಣೆ ಸಹಿತ ಹೇಳುತ್ತಿದ್ದೇನೆ, ಅಷ್ಟೆ. ನಾನೊಂದು ಚಿಕ್ಕ ಸಲಹೆಯನ್ನು ಕೊಡಬಯಸುತ್ತೇನೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳೂ ಸಹ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ವಿನಾಕಾರಣ ಮುಷ್ಕರಗಳನ್ನು ಹೂಡುವುದರಿಂದ ಸಾರ್ವಜನಿಕರಿಗೆ ಆಗುವ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಉಪಾಯ ಕಂಡುಹಿಡಿಯುವುದರಲ್ಲಿ ನಾವೂ ನಿಮ್ಮ ಜೊತೆಯಲ್ಲಿದ್ದೇವೆ. ಮುಷ್ಕರಗಳು ನಿಲ್ಲಬೇಕು. ಆದರೆ ಇದನ್ನು ಮಾಡುವಾಗ ಇಂಥ ಒಂದು ಸರ್ವಾಧಿಕಾರಿ ಮನೋವೃತ್ತಿಯ ಕಾನೂನನ್ನು ಜಾರಿಗೆ ತಂದರೆ ಯಾರನ್ನು ಬೇಕಾದರೂ ಬೇಕಾದಾಗ ಅರೆಸ್ಟ್ ಮಾಡಬಹುದು. ಯಾವ ಕಾರಣ ಇದ್ದರೂ ಇರಬಹುದು. ಯಾರಾದರೂ ಕೆಲಸ ಮಾಡುವುದಕ್ಕೆ ಪ್ರತಿಭಟನೆ ಮಾಡಿದರೆ ಅವನನ್ನು ಅರೆಸ್ಟ್ ಮಾಡಿ ಅವನಿಗೆ ಸಜಾ ಕೊಡುವಂತಹ ಇಂಥ ಒಂದು ಕಾನೂನನ್ನು ನಾನು ಎಲ್ಲೂ ಸಹಾ ನೋಡಿಲ್ಲ. ತುರ್ತು ಪರಿಸ್ಥಿತಿಯ ಕಾಲದಲ್ಲಿಯೂ ಕೂಡ ಇಷ್ಟು ವೈಡ್ ಪವರ್ಸನ್ನು ಕೊಟ್ಟಿಲ್ಲ. ಇದು ಒಂದು ರೀತಿಯಿಂದ ಮಿನಿ ತುರ್ತುಪರಿಸ್ಥಿತಿಯನ್ನು ತರತಕ್ಕಂತಹ ಪ್ರಯತ್ನವೆಂದು ಅನಿಸುತ್ತದೆ. ಇದನ್ನು ಶ್ರೀ ದೇವರಾಜ ಅರಸ್ ಅವರು ಅಧಿಕಾರದಲ್ಲಿದ್ದಾಗ ಚರ್ಚೆಗೆ ತರಲಾಯಿತು. ಅನ್ ಡಿಕ್ಲೇರ್ಡ್ ತುರ್ತು ಪರಿಸ್ಥಿತಿಯಲ್ಲಿ ಆದಷ್ಟು ಪರಿಣಾಮ ಇದನ್ನು ಜಾರಿಗೆ ಕೊಟ್ಟರೆ ಆಗುತ್ತದೆ. ಆಗ ಅವರು ಅಧಿಕಾರದಲ್ಲಿ ಇದ್ದರು. ಅದರ ವಾದ ವಿವಾದಕ್ಕೆ ನಾನು ಹೋಗುವುದಿಲ್ಲ. ಅದು ಶ್ರೀಮಾನ್ಯ ಗುಂಡೂರಾವ್ ಹಾಗೂ ಶ್ರೀಮಾನ್ ದೇವರಾಜ ಅರಸ್ ಅವರಿಗೂ ಬಿಟ್ಟ ವಾದವಿವಾದ. ಆಗಲೂ ಕೂಡ ಈ ಬಗ್ಗೆ ನಾನು ವಿರೋಧ ಮಾಡಿದ್ದೇನೆ. ಇದರ ಬಗ್ಗೆ ನಾವು ಈಗ ಸ್ವಲ್ಪ ಆಲೋಚನೆ ಮಾಡೋಣ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಮುಂದಿನ ಅಧಿವೇಶನವನ್ನು ಕರೆಯುವುದರೊಳಗೆ ಆ ಕಮಿಟಿಯವರು ಲೇಬರ್ ಯೂನಿಯನ್‌ನ ಮುಖ್ಯಸ್ಥರನ್ನು, ಮೇನೇಜ್‌ಮೆಂಟ್‌ನವರನ್ನು, ಹಾಗೂ ಸಾರ್ವಜನಿಕ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ನಡೆಸಿ ವರದಿಯನ್ನು ಕೊಡುತ್ತಾರೆ. ಈ ಬಿಲ್ಲನ್ನು ಈಗಲೇ ಪಾಸ್ ಮಾಡುವುದರಿಂದ ಯಾರಾದರೂ ನಾಳೆ ಕೋರ್ಟಿಗೆ ಹೋಗುತ್ತಾರೆ; ಸ್ಟೇ ತರುತ್ತಾರೆ. ಇದು ಕೋರ್ಟಿಗೆ ಹೋದರೆ ಇದರಲ್ಲಿನ ಕೆಲವು ಕಲಮ್‌ಗಳು ನಿಲ್ಲುವುದಿಲ್ಲವೆಂದು ನನಗನ್ನಿಸುತ್ತದೆ. ಜೂನ್ ೯ ರೊಳಗೆ ಸಮಿತಿ ತನ್ನ ವರದಿಯನ್ನು ಕೊಡಬಹುದು. ನಾವು ಸರ್ಕಾರದ ಉದ್ದೇಶವನ್ನು ಅರ್ಥಮಾಡಿಕೊಂಡಿದ್ದೇವೆ. ಈ ಕಾನೂನಿನ ಪರಿಣಾಮವನ್ನು ವಿಚಾರ ಮಾಡಿ ಮುಂದಾಲೋಚನೆಯಿಂದ ಕಾನೂ

ನನ್ನು ಮಾಡಬೇಕಾಗುತ್ತದೆ. ಹೀಗೇ ಕಾನೂನನ್ನು ಮಾಡುವುದಾದರೆ ಸಮಸ್ಯೆ ಬಗೆಹರಿಯುವುದಿಲ್ಲ. ಇದು ಬಹಳ ಜಟಿಲವಾಗುತ್ತದೆ. ಅಶಾಂತಿ ತಲೆದೋರುತ್ತದೆ. ಸಮಿತಿಯವರು ಮ್ಯಾನೇಜ್‌ಮೆಂಟ್ ನವರನ್ನು ಲೇಬರ್ ಯೂನಿಯನ್ ಮುಖ್ಯಸ್ಥರನ್ನು ಹಾಗೂ ಸಾರ್ವಜನಿಕ ಪ್ರತಿನಿಧಿಗಳನ್ನು ಸೇರಿಸಿ ತಿಳಿದುಕೊಂಡು ಆ ಬಗ್ಗೆ ಒಂದು ವರದಿಯನ್ನು ಮುಂದಿನ ಅಧಿವೇಶನದ ಒಳಗೆ ಕೊಡಬೇಕೆಂದು ಕರಾರಿಗೆ ಒಳಪಟ್ಟು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕು. ಇದನ್ನು ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಒಪ್ಪಿಕೊಳ್ಳಬಹುದೆಂದು ಆಶಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI C. M. ARUMUGHAM.—Sir, I thank you indeed for having given me an opportunity to speak on this Bill. Prior to me, hon. Members Sri Kakkilaya, Sri Bommai and the Leader of the Opposition have thrown some light on this Bill as to how it will affect the working class. I am confident that our Hon. Chief Minister is not against the working class. When he brought this Bill before this House, I am sure, he might have thought of regulating and having control over the Water Supply Board and the K.E.B. and that they must become essential services and they must continue in service without any strike or absenting from work. But at the same time I do not think he would have thought about any other thing. Secondly, as he has said correctly, this Bill was drafted by the former Chief Minister Sri Devaraj Urs. Mr. Devaraj Urs now said before this House that though he had introduced this Bill he was not for it and in fact he has at no time pressed for taking into consideration that Bill. Further, he said that though he had introduced it, it was wrong and asked to set it right now. Therefore, I submit to the Chief Minister kindly to have a dialogue with the Leader of the Opposition and then re-draft the Bill. Whether it is drafted by Mr. Devaraj Urs or somebody else, there is some defect in this Bill.

SRI H. D. DEVE GOWDA.—It was drafted at the instance of Sri Gundu Rao.

SRI C. M. ARUMUGHAM.—I do not accept that point. We cannot take cognizance of it. This Bill is against the general law. The general law means, in our country, the Industrial Disputes Act. If this Bill is passed, it will be against the Industrial Disputes Act. The State Legislatures have no competence to enact a Law against a Central Law. The Central Law today is the Industrial Disputes Act. Our constitution lays down that if there are two laws the central law should prevail and it is the duty of the State Government to see that the central law is implemented. Therefore, our Government cannot enact a law against the central law. This is my first submission. We are not competent to enact such a law. I would like to quote a

certain provision of our Constitution. Kindly see Page No. 123. Article 254 (I) which is as follows:—

> "If any provision of a law made by the Legislature of a State is repugnant to any provision of a law made by Parliament which parliament is competent to enact, or to any provision of an existing law with respect to one of the matters enumerated in the Concurrent List, then, subject to the provisions of clause (2), the law made by Parliament, whether passed before or after the law made by the Legislature of such State, or, as the case may be, the existing law, shall prevail and the law made by the Legislature of the State shall, to the extent of repugnancy be void."

Therefore, you cannot make a law against it. The Industrial Disputes Act provides all the provisions for the matters connected with the control of workers, the right to strike etc. According to the Industrial Disputes Act, strick is legal. I would submit one thing more. This Bill does not mention anything about the Industrial Disputes Act. It only says: 'If a man is absent, he should be punished *i.e.*, one year imprisonment and a fine of Rs. 1,000. I would submit to the Chief Minister that nowhere in our country there is a law prescribing the punishment of one year imprisonment and a fine of Rs. 1,000 if a worker remains absent. Supposing, a person who is a fitter is asked to do the job of a Carpenter and he refuses to do it, can you send him to Jail because simply he refused to work? Refusal for what? That is not defined. Therefore, if this Bill becomes a Law, it will be against the law of the land *i.e.*, the Industrial Disputes Act.

Now, there are lot of strikes, there is a loss of working days and all that. But to prevent such things, this is not a proper law. It may be in one instance of the Bangalore Dairy. That may be of paramount importance and that may be in the mind of the Chief Minister but the draftsman includes all the industries as the essential services.

12-00 NOON

Sir, Explanation (iii) of the Bill says;

> "Any other service or employment or class thereof connected with any matter with respect to which the State Legislature has power to make laws under List II in the Seventh Schedule to the Constitution—"

Entry No. 24 of the Second List says:

> "Industries subject to the provisions of (entries 7 and 52) of List I."

Then, List I–Union List–Entry No. 7 reads thus :

> "Industries declared by Parliament by law to be necessary for the purpose of defence or for the prosecution of war."

Therefore, I would submit, sir, that there are so many things to be rectified. The Bill might have been drafted in a hurry in order to curtail the rights of the working class in the State. There was a MICO employees' strike for a period of 90 days. What was the industrial machinery doing ? Were they not able to avert the strike ? There is no power or authority which can call the management and consider the demands of the workers. Therefore, there is a defect in the labour enforcement machinery also. If the workers go on strike, there is a provision to punish them. Is there any provision here to punish the management, if they are driving the workers for a snap strike ? The management is always strong, and therefore, the Government must protect the workers. The Government must always stand by the side of workers and protect their interests. According to the Industrial Disputes Act, 1947, 'Industry' means,

> "any business, trade, undertaking, manufacture or calling of employers and includes any calling, service, employment, handicraft, or industrial occupation or avocation of workmen ;"

Therefore, I feel that there should not be any scope to curtail the rights enjoyed by workmen under the Industrial Disputes Act. The National Commission on Labour suggested that the State Legislatures should not enact any law on matters connected with labour as it will creat an imbalance. They also suggested that the labour laws must be enacted by the parliament only. Therefore, I request the Hon. Chief Minister to leave it to the Centre. There must be mutual co-operation and understandig between the management and the working class. Both the workers and the management are responsible for the strike. The Supreme Court says that if a worker is absent or refuses to work, you cannot send him to Jail, even if it is an illegal strike. It further says that merely on the ground that he has participated in an illegal strike, he cannot be dismissed. In the case of the Indian General Navigation & Railway Company-vs-it workmen, the Supreme Court observed :

> "It is not in the interest of the industry that there should be a wholesome dismissal of all the workmen, who merely participated in a strike. Mainly because the workmen go on strike, it does not justify the management in terminating their services. In any case, if allegations of mis-conduct

have been made against them, those allegations have been enquired into by charging them with specific acts of mis-conduct and giving them an opportunity to defend themselves at the enquiry,"

Sir, even where a strike is illegal, it does not justify the management in terminating the services of the workers merely on the ground that they have participated in a strike. Sir, this is the first Bill to become a law where a provision is made to send a worker to Jail, if he is absent.

Who is the enforcing authority of this law ? Is it the management or the Government it is not mentioned here. Whether it is the Deputy Commissioner or the Assistant Commissioner or the Secretary to Government ? Who is the enforcing authority of this law ? The Bill is silent about this aspect. Nothing is mentioned in the Bill. I am quite sure that the Hon. Chief Minister is not going to dismiss any worker. His attitude may be allright but, what about the management ? Here, please see the penalty caluse. Whether it is necessary to keep it there ? It may be in Madhya Pradesh where they have encacted a law prescribing punishment of one month imprisonment and Rs. 50 fine. But they have not implemedte it. Now, you are bringing it after a laps of 30 years of our independence. Workers also must be trusted. They must have their rights and also general public. Workers include all Government servents like Officers, Clerks, Secretariat staff etc., The Hon. Chief Minister has given power to form union by Police people. But, there is one good thing in Karnataka they have never gone on strike. In Panjab Rajastan or in other States. the police might have gone on strike because their salaries are less than that of our police. Never the less, there is union in our State for the police force. Naturally, they will have to nego iate with the management. When the manage ment is not going to come to terms, they will have to go in for strike. Therefore, in order to prevent such strikes in some very important and essential services like Dairy Electricity, you do not make it a general issue. Even that also, I would submit, there would be some machinery which should take cognisance of this and solve the problem immediately, instead of allowing them to resort to strike. Kindly see that this is taken away or removed. As Sri A. Lakshmi Sagar quoted, there is one thing in the Constitution *viz.*, for an of ence, there cannot be two punishments. (Article 21) But in this Bill, if an offence is committed by a worker, you are sending him to jail for one year and imposing a fine of rupees one thousand. Apart from that he will also be subjected to departmental disciplinary action. I submit that a worker should not be punished

twice. The Leader of the Opposition accepts his mistake, If it is done in a hurry, I only appeal to drop the Bill. If it is done, it would be nice : otherwise, it goes against entire working class. Let us not make a law which is against the interest of the workers. There are several stalwarts, labour leaders like Sri V. V. Giri, our former President of India, who says that strike is a sacred weapon which is inevitable. In 1942 , he was the President of the INTUC. Under what provision of the Constitution the State Legislatures can prevent strikes ? It says,

> "any person who, without reasonable excuse refuses to work in any essential services, such refusal being illegal under the Act'"

Now, Industrial Disputes Act provides for strike Can you call it as illegal under this Act ? That is the point. I want to make. This conflicts with the Industrial Disputes Act which amounts to denial of the fundamental rights to the workmen as the Industrial Disputes Act prescribes certain service conditions and other facilities to workmen. Further, Industrial Disputes Act prescribes what is illegal strike and what is legal strike. Instead of improving it, you are harming the workmen ; which is wrong. I would suggest that the Hon. Chief Minister should refer the Bill, if necessary, to a Joint Select Committe, or if he thinks fit he can withdraw it and draft it again consulting the Leader of the Opposition or refer it for public opinion. Afterall, taking one instance or one case like Bangalore Dairy into consideration, one cannot bring a law which affects the entire class of workmen. Workmen are not our enemies. Today's workers may become the management tomorrow. It is not the way of conducting Ourselves. What is the reason for strike ? They go on strike because their demands are not being met by the management. Why it has not been met ? The Government should ask for reasons for such unrest in factories. What are the reasons ? What is the behaviour of the management or the Managing Director ? You take the Shops and Establishments Act-how are they implmeuted and how disgraceful it is. They must have a refresher course. Labour Department Officers must be trained properly, and they must have trained personnel who would help the poor workers. Unfortunately, today anybody can become the Labour Commissioner- whether he has got the requisite qualification or not about labour and other allied probiems. It is not so in the case of Government which has got its own Department. But, here anybody can become a Labour Commissioner and then he is asked to perform the conciliation, though sometimes he is not able to understand the labour laws. He must have human approach to the problems of the workers

When workers ask for promotion and increments through union, it has not been considered but if there is any demonstration, immediately he considers the issue. Why have they not considered their demands when the workmen asked through the union ? Therefore, when you blame the workmen when they go on strike, why cannot you blame the Officers also ? And also when you send the workmen to jail when they go on rtrike, is there any provision to punish the officers also ? No you also fix some punishment of imprisonment and five thousand rupees penalty for the officers who harm the workmen and who take the workmen to such a situation as launching a strike. Such provision is not there. It goes against the workmen. It does not in any way control the management, whereas the Industrial Disputes Act says that the illegal lock-out by the management should be prosecuted. This Bill, if it is passed, it will go against the interest of the working class. It will become a black law and it will be considered as an anti-labour measure.

This Bill will only help the management. It will only help the Officers deputed as Chairman in public undertakings. It will only help the hands of the management and the Officers who are managing Public and Private Undertakings. Here I would like to ask the Government why are they in such haste to bring this black Bill to be passed by this House ? What is the attitude of the Government in this behalf ? As explained by our friends, by passing this Bill a lot of confusion and unrest is going to be created in this State. Therefore, let us not give room for such things and strengthen the hands of the management. So, my only submission to the Honorable Chief Minister is to drop the Bill or refer it to a Joint Select Committee or refer the same for public opinion and then bring it before this House for consideration.

In conclusion while opposing this Bill I once again request the Hon. Chief Minister to reconsider this Bill and refer the same to the Joint Select Committee for consideration.

† ಶ್ರೀ ಎಸ್. ಭೀಮಣ್ಣ ಖಂಡ್ರೆ (ಭಾಲ್ಕಿ) — ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಯಾವುದೇ ಬಿಲ್ ಅಥವಾ ಆಕ್ಟ್ ತಂದರೂ ಕೂಡ ಅದರಲ್ಲಿ ಅಡ್ವಾಂಟೇಜಸ್ ಮತ್ತು ಡಿಸ್-ಅಡ್ವಾಂಟೇಜಸ್ ಎರಡೂ ಇರುತ್ತವೆ. ಈಗ ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಮಸೂದೆಯ ಬಗ್ಗೆ ಇದುವರೆಗೂ ನಮ್ಮ ಸ್ನೇಹಿತರು ಅನೇಕರು ಮಾತನಾಡಿದ್ದಾರೆ. ಇದರಿಂದ ನನಗೆ ಒಂದು ವಿಚಾರ ತಿಳಿಯುತ್ತದೆ. ಅದೇನೆಂದರೆ ನಮ್ಮ ದೇಶದಲ್ಲಿ ೩೨ ವರ್ಷಗಳಿಂದ ಸ್ವಾತಂತ್ರ್ಯ ಬಂದಾಗಿನಿಂದಲೂ ನೋಡುತ್ತಿದ್ದೇನೆ. ನಮ್ಮ ದೇಶದಲ್ಲಿ ಮೊರಾಲಿಟಿ ಕಡಿಮೆಯಾಗುತ್ತಾ ಬಂದಿದೆ. ಇದನ್ನು ತಾವೆಲ್ಲರೂ ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಕಾರಣ ಇಷ್ಟೆ. ನಾವು ಯಾವ ಕಾನೂನು ಮಾಡುತ್ತೇವೆಯೋ ಯಾವ ಆಕ್ಟ್ ಮಾಡುತ್ತೇವೆಯೋ ಅದರಂತೆ, ಆ ಕಾನೂನು ಪ್ರಕಾರ ನಡೆಯುವುದನ್ನು ಕಲಿತು ಕೊಂಡಿಲ್ಲ. ಇದರ ವಿರುದ್ಧ ಪ್ರಚೋದನೆ ಮಾಡುತ್ತಾರೆ. ಪ್ರೋತ್ಸಾಹ ಕೊಡುತ್ತಾರೆ. ಒಂದು ಕಮಿಟಿ ಮಾಡುತ್ತಾರೆ. ಒಂದು ಯೂನಿಯನ್ ಮಾಡುತ್ತಾರೆ. ನಂತರ ಅದನ್ನು ವಿರೋಧ ಮಾಡುವ

ಆಕ್ಟ್ ಬರುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಈ ಸಂದರ್ಭದಲ್ಲಿ ನಾನು ತಮಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಶ್ರೀಮಾನ್ ದೇವರಾಜ ಅರಸ್ ಅವರು ಈಗ ಮಾತ್ರ ನನಗೆ ಬುದ್ಧಿ ಬಂದಿದೆ ಎಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಏತಕ್ಕೆಂದರೆ ಹಿಂದೆ ಭೂ ಸುಧಾರಣೆಯ ಬಿಲ್ಲನ್ನು ವಿರೋಧ ಮಾಡಿದವರು ಶ್ರೀಮಾನ್ ದೇವರಾಜ ಅರಸ್ ಅವರು. ಅವರು ಭೂ ಸುಧಾರಣಾ ಬಿಲ್ಲನ್ನು ವಿರೋಧ ಮಾಡಿ ಮಾತನಾಡಿದ್ದು ಈಗಲೂ ಅಸೆಂಬ್ಲಿ ರೆಕಾರ್ಡ್‌ನಲ್ಲಿ ಇದೆ. ಅವರು ಯಾವಾಗ ಮುಖ್ಯ ಮಂತ್ರಿಗಳಾದರೊ ಆಗ ಅವರಿಗೆ ಬುದ್ಧಿ ಬಂತು. ಲ್ಯಾಂಡ್ ರಿಫಾರಮ್ಸ್ ಕಾನೂನು ಜಾರಿಗೆ ತಂದರು.

ಶ್ರೀ ಕೆ.ಬಿ. ಶಿವಯ್ಯ.—ಆಗ ಅವರು ಏತಕ್ಕೆ ವಿರೋಧ ಮಾಡಿದರು ಎಂದರೆ ಆಗ ಆ ಕಾನೂನು ಭೂ ಮಾಲೀಕರ ಪರವಾಗಿ ಇದ್ದುದರಿಂದ ಅವರು ಆಗ ವಿರೋಧ ಮಾಡಿದರು.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಅಸೆಂಬ್ಲಿ ರೆಕಾರ್ಡಿನಲ್ಲಿದೆ ಬೇಕಾದರೆ ಅದನ್ನು ನಾನು ತಮಗೆ ತೋರಿಸುತ್ತೇನೆ.

(ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಚೇರ್ಮನ್.—ಮಾನ್ಯ ಸದಸ್ಯರು ಮಾತನಾಡುವಾಗ ಏನಾದರೂ ಸ್ಪೆಸಿಫಿಕ್ ಆಗಿ ಇದ್ದರೆ ಹೇಳಬಹುದು.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಸದಸ್ಯರು ಹೇಳಿದರು ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಎಸೆನ್ಷಿಯಲ್ ಸರ್ವೀಸ್ ಬಿಲ್ಲನ್ನು ತಂದರು ಈಗ ಅವರು ಇದನ್ನು ವಿರೋಧ ಮಾಡುತ್ತಿದ್ದಾರೆ ಎಂದು. ಆದರೆ ಶ್ರೀಮಾನ್ ಭೀಮಣ್ಣ ಖಂಡ್ರೆಯವರ ಪಕ್ಷದವರು ಎಂದರೆ ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದವರು ಕೇಂದ್ರದಲ್ಲಿ ಇಂಡಸ್ಟ್ರಿಯಲ್ ರಿಲೇಷನ್ ಬಿಲ್ ಬಂದಾಗ ಏತಕ್ಕೆ ವಿರೋಧ ಮಾಡಿದರು ? ಆದರೆ ಈಗ ಅಧಿಕಾರಕ್ಕೆ ಬಂದಾಗ ಏತಕ್ಕೆ ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ ?

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಈಗ ಆ ಬಗ್ಗೆ ಚರ್ಚೆ ಮಾಡುವುದು ಬೇಡ.

ಚೇರ್ಮನ್.—ಈಗ ಮಾನ್ಯ ಸದಸ್ಯರು ಈ ಮಸೂದೆಯನ್ನು ಸ್ವಾಗತಿಸುತ್ತಾರೆಯೋ ಅಥವಾ ಸಮರ್ಥನೆ ಮಾಡುತ್ತಾರೆಯೋ ?

ಶ್ರೀ ಎಸ್. ಭೀಮಣ್ಣ ಖಂಡ್ರೆ–ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಹಿಂದೆ ಸಂಯುಕ್ತ ಕರ್ನಾಟಕ ಎಂದರೆ ಕರ್ನಾಟಕ ಏಕೀಕರಣ ಮಾಡುವ ಸಂದರ್ಭದಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರು ಬಹಳ ಬಲವಾಗಿ ವಿರೋಧ ಮಾಡಿದರು. ಕರ್ನಾಟಕ ಏಕೀಕರಣವನ್ನು ಮಾಡಿದರೆ ಎರಡು ಕರ್ನಾಟಕ ಆಗುತ್ತದೆ. ೫ ಕರ್ನಾಟಕ ಆಗುತ್ತದೆ ಎಂದು ವಿರೋಧ ಮಾಡಿದರು. ಆ ಮೇಲೆ ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾದ ಮೇಲೆ ಅವರು ಶಹಭಾಷ್ ಗಿರಿಯನ್ನು ತೆಗೆದುಕೊಳ್ಳುವುದಕ್ಕೆ ಕರ್ನಾಟಕ ಎಂದು ಹೆಸರಿಟ್ಟರು. ಈ ಎಸೆನ್ಷಿಯಲ್ ಸರ್ವೀಸ್ ಬಿಲ್ಲನ್ನು ಇವರೇ ಡ್ರಾಫ್ಟ್ ಮಾಡಿ ಇವರೇ ತಂದರು. ಈಗ ಇವರು ಇದನ್ನೇಕೆ ವಿತ್‌ಡ್ರಾ ಮಾಡಲಿಲ್ಲ ? ಈಗ ಇವರಿಗೆ ಬುದ್ಧಿ ಬಂದಿದೆ, ಈಗ ಇವರು ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಹಾಗಾದರೆ ಇವರಿಗೆ ಎಷ್ಟು ಸಾರಿ ಬುದ್ಧಿ ಬರುತ್ತದೆ ಎಷ್ಟು ಸಾರಿ ಬುದ್ಧಿ ಹೋಗುತ್ತದೆಯೋ ಗೊತ್ತಿಲ್ಲ. ಸಮಾಜದ ಹಿತದ ಪ್ರಶ್ನೆ ಇದ್ದರೆ ಪಕ್ಷವನ್ನು ಬಿಟ್ಟು ಪಕ್ಷದ ವಿಚಾರವನ್ನು ಬಿಟ್ಟು ವಾಸ್ತವಿಕವಾದ ಸಮಸ್ಯೆ ಏನಿದೆ ಅದನ್ನು ಮಾತ್ರ ಮಾತನಾಡಬೇಕು. ಶ್ರೀಮಾನ್ ಆರುಮುಗಮ್ ಅವರು ಇದು ಫಂಡಮೆಂಟಲ್ ರೈಟ್ಸ್‌ಗೆ ವಿರೋಧವಾಗುತ್ತದೆ ಎಂದು ಹೇಳಿದರು. ಇದರಲ್ಲಿ ಕಾರ್ಮಿಕರು ಮತ್ತು ಮ್ಯಾನೇಜ್‌ಮೆಂಟ್ ಇಬ್ಬರ ಹಿತವನ್ನೂ ನೋಡಬೇಕಾಗುತ್ತದೆ. ಇದನ್ನೂ ಸಹ ಮರೆಯಬಾರದು. ಇವೊತ್ತು ನಮ್ಮ ದೇಶದಲ್ಲಿ ಕೋಟ್ಯಾಂತರ ರೈತರು ಹೊಲಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕೇಳುವವರೇ ಇಲ್ಲ. ಅವರ ಬಗ್ಗೆ ಯಾವ ಕಾನೂನು ಇಲ್ಲ. ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಕಾರ್ಮಿಕರಿಗೆ ಪ್ರೊಟೆಕ್ಷನ್ ಇದೆ ಅವರಿಗೆ ಸ್ಯಾಲರಿ ಕೊಡುತ್ತಾರೆ. ಇಂಡಸ್ಟ್ರಿಯಲ್ ಕಾರ್ಮಿಕರಿಗೆ ಯೂನಿಯನ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದಕ್ಕೆ ಅವಕಾಶ ಇದೆ. ಆದರೆ ಹಳ್ಳಿಗಳಲ್ಲಿ ಹೊಲಗಳಲ್ಲಿ ಕೆಲಸ ಮಾಡತಕ್ಕವರಿಗೆ ೫ ಪರ್ಸೆಂಟ್ ಕೂಡ ಪ್ರೊಟೆಕ್ಷನ್ ಇಲ್ಲ. ೯೫ ಪರ್ಸೆಂಟ್ ಲೇಬರರ್ ಏನು ಹೊಲಗಳಲ್ಲಿ ಕೆಲಸ ಮಾಡುತ್ತಾರೆ, ಆದರೆ ಅವರಿಗೆ ಯಾವ ಪ್ರೊಟೆಕ್ಷನ್ ಕೂಡ ಇಲ್ಲ. ಫ್ಯಾಕ್ಟರಿಯ

ಕಾರ್ಮಿಕರು ಸ್ಟ್ರೈಕ್ ಮಾಡಿ, ತ್ರೆಟನ್ ಮಾಡಿ ತಮಗೆ ಬರಬೇಕಾದ ಸೌಲಭ್ಯಗಳನ್ನು ತೆಗೆದುಕೊಳ್ಳು ತ್ತಾರೆ. ಇಂಡಸ್ಟ್ರಿಯಲ್ ಲೇಬರರ್ ಆಗಿ ಯಾರು ಕೆಲಸ ಮಾಡುತ್ತಾರೆಯೋ ಅವರಿಗೆ ೧೦ ರೂಪಾಯಿ ಗಳಿಂದ ಹಿಡಿದು ೨೭ ರೂಪಾಯಿಗಳವರೆಗೂ ಸ್ಕ್ಯಾಲರಿ ಕೊಡುತ್ತಾರೆ. ಆದರೆ ಅಗ್ರಿಕಲ್‌ಚರಲ್ ಲೇಬರರ್ಸ್‌ಗೆ ೨ ರೂಪಾಯಿಗಳಿಂದ ೪ ರೂಪಾಯಿ ೪½ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ದಿನಗೂಲಿಯವರಿಗೆ ಒಂದು ದಿವಸಕ್ಕೆ ೩-೫೦ ಪೈಸೆ ಕೊಡುತ್ತಾರೆ. ಯಾರು ಜಾಸ್ತಿ ಗಲಾಟೆ ಮಾಡುತ್ತಾರೆ ಅವರಿಗೆ ಅನುಕೂಲ ಮಾಡುತ್ತಾರೆ. ಯಾರು ಕಷ್ಟಪಟ್ಟು ಹಳ್ಳಿಗಾಡಿನಲ್ಲಿ ಹೊಲಗಳಲ್ಲಿ ಕೆಲಸ ಮಾಡುತ್ತಾರೆ ಅವರಿಗೆ ಯಾವ ಪ್ರೊಟೆಕ್ಷನ್ ಆಗಲೀ ಸೌಲಭ್ಯಗಳಾಗಲಿ ಇಲ್ಲ. ಕೈಗಾರಿಕೆಗಳಲ್ಲಿ ಯಾರು ಕೆಲಸ ಮಾಡುತ್ತಾರೆ ಅವರಿಗೆ ಫಂಡಮೆಂಟಲ್ ರೈಟ್ಸ್ ಇದೆ. ಆದರೆ ಅಗ್ರಿಕಲ್ ಚರಲ್ ಲೇಬರರ್ಸ್‌ಗೆ ಯಾವ ಫಂಡಮೆಂಟಲ್ ರೈಟ್ಸ್ ಕೂಡ ಇಲ್ಲ. ಆದ್ದರಿಂದ ಅವರಿಗೂ ಕೂಡ ಅವಶ್ಯವಾಗಿ ಪ್ರೊಟೆಕ್ಷನ್ ಕೊಡಬೇಕು.

೧೨-೩೦ ಪಿ.ಎಂ.

ಇದರ ಜೊತೆಗೆ ಮ್ಯಾನೇಜ್‌ಮೆಂಟಿನವರು ತಪ್ಪು ಮಾಡಿದರೆ ಅವರಿಗೆ ಪನಿಷ್‌ಮೆಂಟ್ ಕೊಡಬಾರದು ಎಂದು ಯಾರೂ ಹೇಳುವುದಿಲ್ಲ. ಇಲ್ಲಿ ನಾವು ಲೇಬರರ್ಸ್‌ಗೆ ಎಷ್ಟು ಮಟ್ಟಿನ ಪ್ರೊಟೆಕ್ಷನ್ ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರೇ ಹೇಳಬೇಕು. ಇಷ್ಟು ಪ್ರೊಟೆಕ್ಷನ್ ಕೊಟ್ಟರೂ ಸಹ ಸಾರ್ವಜನಿಕ ಜೀವನದಲ್ಲಿ ತೊಂದರೆಯಾಗುವಂತೆ ಮುಷ್ಕರವನ್ನು ಹೂಡಿದರೆ ಅದನ್ನು ಸರ್ಕಾರ ದವರು ತಡೆಗಟ್ಟಬಾರದೇ ? ಉದಾಹರಣೆಗೆ ಯಾರೋ ಒಬ್ಬ ಅಧಿಕಾರಿ ಒಬ್ಬ ನೌಕರನನ್ನು ಅವನ ತಪ್ಪಿ ಗಾಗಿ ಬೂಟು ಕಾಲಿನಿಂದ ಹೊಡೆದರೆ ಎಲ್ಲಾ ನೌಕರರು ಸೇರಿಕೊಂಡು ಅದನ್ನು ಪ್ರತಿಭಟನೆ ಮಾಡುವುದ ಕ್ಕಾಗಿ ಮುಷ್ಕರ ಹೂಡಿದರೆ ಅದನ್ನು ನಾವು ಸರಿಯೆಂದು ಹೇಳುವುದಕ್ಕೆ ಸಾಧ್ಯವೇ ? ಇಂಥ ಕಾರಣ ಗಳಿಗಾಗಿ ಸಂಚಾರದ ವ್ಯವಸ್ಥೆಯನ್ನು ಬಂದ್ ಮಾಡುತ್ತಾರೆ, ಬೆಂಕಿ ಹಚ್ಚುತ್ತಾರೆ, ವೈರನ್ನು ಕಡಿದು ಹಾಕುತ್ತಾರೆ, ಇನ್ನು ಏನೇನೋ ಮಾಡುತ್ತಾರೆ. ಅದಕ್ಕಾಗಿ ಈ ಮಸೂದೆಯ ಅವಶ್ಯಕತೆಯನ್ನು ನಾವು ಒತ್ತಿ ಹೇಳಬೇಕಾಗಿದೆ. ಎರಡು ಪರ್ಸೆಂಟ್ ಜನರಿಗೆ ಅನುಕೂಲ ಮಾಡಬೇಕು ಎಂದು ಹೇಳಿ ಲಕ್ಷಾವಧಿ ಜನರನ್ನು ಹಾಳುಮಾಡುವಂಥದ್ದು ಸರಿಯಲ್ಲ. ಸರ್ಕಾರವನ್ನು ನಡೆಸುವವರು, ಸರಿಯಾಗಿ ನಡೆಸ ಬೇಕಾದರೆ, ಕಾರ್ಖಾನೆಗಳನ್ನು ನಡೆಸುವವರು ಸರಿಯಾಗಿ ನಡೆಸಬೇಕಾದರೆ, ಇಂಥ ಒಂದು ಮಸೂದೆ ಯನ್ನು ನಾವೆಲ್ಲರೂ ಬೆಂಬಲಿಸಬೇಕು. ಈ ಬಿಲ್ಲಿನ ಅವಧಿ ೬ ತಿಂಗಳವರೆಗೆ ಮಾತ್ರ ಎಂದು ಇದೆ. ಇದು ಟೆಂಪರರಿ ಮೆಷರ್: ಯಾವಾಗ ಇಂಥ ಪರಿಸ್ಥಿತಿ ಬರುತ್ತದೆಯೋ ಅಂಥ ಸಮಯದಲ್ಲಿ ನೋಟಿಫಿ ಕೇಷನ್ ಇಷ್ಯೂ ಮಾಡಿಸಿ ಸರಿಯಾದ ರೀತಿಯ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ, ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಬೇಕಾದಾಗ ಇಂಥ ಕಾನೂನನ್ನು ನಾವು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಬಿಲ್ಲನ್ನು ನಾವು ಬೆಂಬಲಿಸಬೇಕಾಗಿದೆ. ಯಾರು ಈ ಮುಷ್ಕರವನ್ನು ಇನ್‌ಸ್ಟಿಗೇಟ್ ಮಾಡುತ್ತಾರೋ ಅವರನ್ನು ಶಿಕ್ಷೆಗೊಳಪಡಿಸುವಂಥ ಒಂದು ಪ್ರಾವಿ ಷನನ್ನು ಇಲ್ಲಿ ಸೇರಿಸಲಾಗಿದೆ. ಇದು ನಮ್ಮ ಸಂವಿಧಾನದಲ್ಲಿಯೂ ಇದೆ. ೧೨೦ (ಬಿ)ನಲ್ಲಿ ಕಾನ್ಸ್‌ಪಿರಸಿ ಮತ್ತು ಅಬೆಟ್‌ಮೆಂಟ್ ಇದೆ, ಇಲ್ಲಿ ಯಾರು ಮುಷ್ಕರ ಹೂಡುತ್ತಾರೆ ಅವರಿಗೂ ಶಿಕ್ಷೆ ಇದೆ, ಮತ್ತು ಯಾರು ಮುಷ್ಕರವನ್ನು ಇನ್‌ಸ್ಟಿಗೇಟ್ ಮಾಡುತ್ತಾರೋ ಅವರಿಗೂ ಶಿಕ್ಷೆ ಇದೆ. ನಾವು ಈಗ ಮಸೂದೆ ಯಲ್ಲಿ ನಮೂದು ಮಾಡಿರುವುದು ಹೊಸದೇನೂ ಅಲ್ಲ. ಇದನ್ನು ನಾವು ಮೊದಲಿನಿಂದಲೂ ಒಪ್ಪಿ ದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಮಸೂದೆಯ ಮೇಲೆ ಮಾತನಾಡುತ್ತಾ, ನಮ್ಮಲ್ಲಿ ಇಂಡಸ್ಟ್ರಿಯಲ್ ಆಕ್ಟ್ ಇರುವಾಗ ಈ ಮಸೂದೆ ಏಕೆ ಬೇಕು, ಇದಕ್ಕೊಂದು ತಿದ್ದುಪಡಿಯನ್ನು ತಂದರೆ ಸಾಕು ಎನ್ನುವ ಅಭಿಪ್ರಾಯವನ್ನು ಹೇಳಿದರು. ಈ ಕಾನೂನು ಸೆಂಟ್ರಲ್ ಗವರ್ನಮೆಂಟಿಗೆ ಸಂಬಂಧ ಪಟ್ಟಿದ್ದರೂ ಅದರ ವಿರುದ್ಧವಾಗಿ ಹೋಗದೆ, ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕಾನೂನನ್ನು ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಅಧಿಕಾರ ಇದೆ. ಅದರ ವಿರುದ್ಧವಾಗಿ ನಾವೇನೂ ಕಾನೂನು ಮಾಡುತ್ತಿಲ್ಲ. ಸಂವಿ ಧಾನದ ವಿರುದ್ಧವಾಗಿ ನಾವು ಕಾನೂನು ಮಾಡುತ್ತಿಲ್ಲ. ಆದರೆ ಒಂದು ವಿಷಯದಲ್ಲಿ ಮಾತ್ರ ಅಂದರೆ, ಶಿಕ್ಷೆಗೆ ಸಂಬಂಧಪಟ್ಟ ಹಾಗೆ, ಮೊದಲು ಇಂಥ ಅಪರಾಧಗಳಿಗೆ ಶಿಕ್ಷೆ ಕಡಿಮೆ ಇತ್ತು. ಅದನ್ನು ಈಗ ನಾವು ಜಾಸ್ತಿ ಮಾಡುತ್ತಿದ್ದೇವೆ. ೧೯೪೭ರಲ್ಲಿ ೫೦ ರೂಪಾಯಿಗಳ ಪನಿಷ್‌ಮೆಂಟ್ ಇತ್ತು, ಇದು ಹಾಗೆಯೇ ಮುಂದುವರಿದುಕೊಂಡು ಬರುತ್ತಿದೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಊರೆಲ್ಲಾ ಸುಟ್ಟು ಹೋದರೂ ಸಹ ರಾಜ ನೋಡಿಕೊಂಡು ಕುಳಿತಿದ್ದ ಎಂದು ಹೇಳುವ ಹಾಗೆ, ಇಲಾಖೆಯವರು

ವಿದ್ಯುಚ್ಛಕ್ತಿಯನ್ನು ಒದಗಿಸದೇ ಇದ್ದರೂ, ಇವರ ಅಚಾತುರ್ಯದಿಂದ ಎಷ್ಟೋ ಮಂದಿ ಸತ್ತರೂ ಪರವಾಗಿಲ್ಲ, ೫೦ ರೂಪಾಯಿಗಳ ಶಿಕ್ಷೆಯನ್ನು ಕೊಟ್ಟರೆ ಆಯಿತು ಎನ್ನುವ ಮನೋಭಾವ ಇದೆ, ಇದನ್ನು ಈಗ ಮಸೂದೆಯ ಮೂಲಕ ೨ ಸಾವಿರ ರೂಪಾಯಿಗಳಿಗೆ ಏರಿಸಿದ್ದಾರೆ. ಇದಕ್ಕೆ ಕಾರಣ, ನಮ್ಮ ಜನರಲ್ಲಿ ಮೊರ್ಯಾಲಿಟಿ ಕಡಿಮೆಯಾಗಿದೆ, ಏನೇ ತಪ್ಪು ಮಾಡಿದರೂ ಸಹ ೫೦ ರೂಪಾಯಿಗಳನ್ನು ಕೊಟ್ಟರೆ ಸರಿ ಹೋಗುತ್ತದೆ ಎನ್ನುವ ಅಭಿಪ್ರಾಯ ಇದೆ. ನಮ್ಮ ದೇಶದಲ್ಲಿ ಜನತೆ ಎಷ್ಟು ಅಶಾಂತಿಯನ್ನು ಹೊಂದಿದರೂ ಸಹ ನಾನು ಮುಂದೆ ಬರಬೇಕು, ನನ್ನ ಪಾರ್ಟಿ ಮುಂದೆ ಬರಬೇಕು, ಎನ್ನುವಂಥ ರಾಜಕೀಯ ಮುಖಂಡರುಗಳನ್ನು ನಾವು ಕಾಣುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ನಾವು ರಾಜ್ಯಭಾರ ಮಾಡುತ್ತಿರುವಾಗ, ಇಂಥ ಪ್ರವೃತ್ತಿಯನ್ನು ನಮ್ಮ ಜನರಲ್ಲಿ ಕಾಣುತ್ತಿರುವಾಗ ಇಂಥ ಒಂದು ಕಾನೂನಿನ ಅವಶ್ಯಕತೆಯನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗಿದೆ. ಇದೊಂದು ತಾತ್ಕಾಲಿಕ ಮಸೂದೆ, ಇದು ಸದುದ್ದೇಶದಿಂದ ಕೂಡಿರುವುದರಿಂದ ನಾವೆಲ್ಲರೂ ಇದಕ್ಕೆ ಬೆಂಬಲ ಕೊಡಬೇಕು ಎಂದು ತಿಳಿಸಿ, ನಾನು ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಅವಶ್ಯಕ ಸೇವಾ ತಿದ್ದುಪಡಿಯನ್ನು ತಂದು ಮುಷ್ಕರಗಳನ್ನು ತಡೆಹಿಡಿಯಬೇಕು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಿ ಸರಿಯಾದ ಸೇವೆಯನ್ನು ಒದಗಿಸಬೇಕು ಎನ್ನುವಂಥ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ ಎಂದು ನಾನಾದರೂ ತಿಳಿದಿದ್ದೇನೆ. ಸರ್ಕಾರದವರ ಉದ್ದೇಶವೇನೋ ಬಹಳ ಒಳ್ಳೆಯದು. ಇದರಲ್ಲಿ ನನ್ನ ಭಿನ್ನಾಭಿಪ್ರಾಯವೇ ಇಲ್ಲ. ಸಾರ್ವಜನಿಕ ರಂಗಗಳಲ್ಲಿ ಮಿಂಚಿನಂತೆ ಮುಷ್ಕರಗಳು ನಡೆದು ಜನಜೀವನಕ್ಕೆ ತೊಂದರೆಯಾಗುವುದನ್ನು ಯಾರೂ ಒಪ್ಪಲಾರರು; ಮತ್ತು ಯಾರೂ ಇಂಥಾದಕ್ಕೆ ಬೆಂಬಲ ಕೊಡಲಾರರು ಎಂದು ನಾನಾದರೂ ತಿಳಿದುಕೊಂಡಿದ್ದೇನೆ ಮತ್ತು ಇಂಥಾದನ್ನು ತಡೆಯಬೇಕು ಎನ್ನುವಂಥ ಆಸಕ್ತಿ ಎಲ್ಲರಿಗೂ ಇದೆಯೆಂದು ತಿಳಿದಿದ್ದೇನೆ. ಈ ಮಸೂದೆಯ ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಕೆಲವೊಂದು ಇಲಾಖೆಗಳನ್ನು ಮಾತ್ರ ನಮೂದು ಮಾಡಿದ್ದಾರೆ.

'To prevent the workers of the Karnataka Electricity Board, the Bangalore Water Supply and Sewerage Board, the Karnataka State Road Transport Corporation and drivers of transport services, including taxes and autorikshaws and other similar services to be notified by the Government from going on snap strikes frequently for flimsy reasons and thereby affecting the general public, it is considered necessary to prohibit and make penal any refusal to work in such services'

ಇದು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್‌ನಲ್ಲಿ ಕೊಟ್ಟಿರುವ ಕಾರಣ. ಈ ಮಸೂದೆಯಲ್ಲಿ ಒಂದೆರಡು ಇಲಾಖೆಗಳನ್ನು ನಮೂದಿಸಿ ಮಿಂಚಿನ ಮುಷ್ಕರಗಳನ್ನು ಮಾಡುವುದನ್ನು ತಡೆಗಟ್ಟುತ್ತೇವೆಂದು ಹೇಳಿದ್ದರೆ ಅದನ್ನು ನಾವು ಸ್ವಾಗತಿಸಬಹುದಾಗಿತ್ತು. ಬೆಂಗಳೂರು ಜಲ ಮಂಡಳಿಯ ನೌಕರರು ಮುಷ್ಕರ ಮಾಡಿ ನೀರಿನ ತೊಂದರೆಯುಂಟು ಮಾಡಿದರೆ ಅದನ್ನು ಪ್ರತಿಭಟಿಸಬೇಕಾಗುತ್ತದೆ, ಮತ್ತೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ಕಠಿಣ ಕ್ರಮವನ್ನು ತೆಗೆದುಕೊಳ್ಳಬಹುದು. ಆದರೆ ಎಲ್ಲಾ ಕಾರ್ಮಿಕರ ನ್ಯಾಯ ಒದ್ಧವಾದ ಹಕ್ಕನ್ನು ಕುಂಠಿತಗೊಳಿಸುವಂಥ ಮಸೂದೆ ಇದಾಗಬಾರದು. ಕಾರ್ಮಿಕರಿಗೆ ನಾವು ಕೆಲವು ಹಕ್ಕುಗಳನ್ನು ಕೊಟ್ಟಿದ್ದೇವೆ, ಕಾರ್ಮಿಕರಿಗೆ ರಕ್ಷಣೆ ಕೊಡಬೇಕೆಂದು ನಾವು ಒಪ್ಪಿಕೊಂಡಿದ್ದೇವೆ. ಹೀಗಿರುವಾಗ ಅವರ ಹಕ್ಕನ್ನು ಕುಂಠಿತಗೊಳಿಸುವಂಥ ಕಾರ್ಯ ಈ ಮಸೂದೆಯಿಂದ ಆಗಬಾರದೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಈ ಮಸೂದೆಯಲ್ಲಿ ಡೆಫನಿಷನ್‌ನಲ್ಲಿ ಏನು ಹೇಳಿದೆ ಎನ್ನುವುದನ್ನು ತಾವು ನೋಡಿದ್ದೀರಿ. ಅದರಲ್ಲಿ ಈ ರೀತಿ ಇದೆ. —

" Essential Services " means—

(i) any service connected with the supply of water o· electricity,

(ii) any transport service for the carriage of passengers or goods by motor vehicles. " ಎಂದು

ಈ ಡೆಫನಿಷನ್‌ನಲ್ಲಿ ಈ ರೀತಿ ಹೇಳಿದ್ದರೂ ಕೂಡ, ಎಸೆನ್ಷಿಯಲ್ ಸರ್ವಿಸಸ್ ಅಂತ ೩-೪ ವಿಷಯ ಗಳನ್ನು ನಮೂದಿಸಿದ್ದರೂ ಸಹ ಮುಂದೆ ಇದನ್ನು ಬೇಕಾದ ಹಾಗೆ ವಿಸ್ತರಿಸಿಕೊಳ್ಳಬಹುದು. ಮತ್ತು ಇದೇ ಮಸೂದೆಯ (iii)ರ ಕಲಂ ನೋಡಿದರೆ ಇದರ ಅರ್ಥ ಸ್ಪಷ್ಟವಾಗುತ್ತದೆ. ಅದು ಈ ರೀತಿ ಇದೆ.

" Any other service or employment or class thereof connected with any matter with respect to which the State Legislature has power to make laws under List II in the Seventh Schedule to the Constitution and which the Government, being of the opinion that refusal to work therein would prejudicially affect the maintenance of any public utility services or the public safety or the maintenance of supplies and service necessary for the life of the community or would result in the infliction of grace hardship on the community, may, by notification, declare to be an essential service for the purpose of this Act. " ಎಂದು

ತಮಗೆ ಹೇಳಬೇಕಾದರೆ ಬಹುಶಃ ಎಲ್ಲಾ ಸೇವೆಗಳೂ ಕೂಡ ಬಹಳ ಆವಶ್ಯಕವಾದ ಪ್ರಾಮುಖ್ಯವಾದ ಸೇವೆಗಳೇ. ಈ ಮಸೂದೆಯಲ್ಲಿ ತಾವು ೨-೩ ಮಾತ್ರ ನಮೂದಿಸಿದ್ದೀರಿ. ಇದಕ್ಕೆ ನಾನು ಹೇಳುತ್ತೇನೆ ಬಹುಶಃ ಆಕಾಶದ ಗಡಿಯಿಂದ ನೆಲದ ಗಡಿಯವರೆಗೆ ನೋಡಿದರೂ ಕೂಡ ಎಲ್ಲಾ ಗಡಿಗಳೂ ಸಹ ಎಸೆನ್ಷಿಯಲ್ ಸರ್ವಿಸಸ್ ಅಂತ ಘೋಷಣೆ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಆದ್ದರಿಂದ ನಾನು ಹೇಳುವುದು ಏನೆಂದರೆ ಈ ಕಾರ್ಮಿಕರ ಒಂದು ಸಮಸ್ಯೆ ಈಗ ಏನು ಎದ್ದು ತೋರುತ್ತದೋ ಅದನ್ನು ತಡೆಗಟ್ಟುವ ಉದ್ದೇಶದಿಂದ ಈ ಒಂದು ಕಾನೂನನ್ನು ತಾವು ಈಗ ತಂದಿದ್ದೀರಿ ಎಂದು ನಾನು ನೇರವಾಗಿ ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ನೇರವಾಗಿ ಕೇಳುತ್ತೇನೆ ಈ ತರಹವಾಗಿ ಮಿಂಚಿನ ಮುಷ್ಕರ ನಡೆದರೆ ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದಿಂದ ಸಾಧ್ಯವಿಲ್ಲವೇನು ? ಅದು ಕಾನೂನಿನ ಮುಖಾಂತರವೇ ಆಗಬೇಕೇ ? ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಬೇಕಾದ ಕಾನೂನುಗಳು ಮೊದಲಿನಿಂದಲೂ ಇದ್ದೇ ಇದೆ. ಈ ತರಹವಾಗಿ ಮಿಂಚಿನ ಮುಷ್ಕರ ನಡೆದರೆ ಅದು ಕಾನೂನು ಬಾಹಿರವಾದುದು ಎಂದು ಮೊದಲಿನ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಕಾನೂನಿನಲ್ಲೇ ಇದೆ. ಇದಕ್ಕೆ ಏನೂ ಬೇರೆ ಹೊಸ ಕಾನೂನು ಬೇಕಾಗಿಲ್ಲಾ. ಅದು ಬಿಟ್ಟು ಈ ಮಿಂಚಿನ ಮುಷ್ಕರ ನಿಲ್ಲಿಸುವುದಕ್ಕೆ ಹೊಸ ಕಾನೂನು ಏನಾದರೂ ಸರ್ಕಾರ ತೆಗೆದುಕೊಂಡು ಬಂದರೆ ಇದರ ಪರಿಣಾಮ ಇನ್ನೂ ಹೆಚ್ಚಾಗುತ್ತದೆಯೋ ವಿನಾ ಕಡಿಮೆಯಾಗುವುದಿಲ್ಲ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ತಮಗೆ ಹೇಳಬೇಕಾದರೆ ನಮ್ಮ ಕರ್ನಾಟಕದಲ್ಲಿರುವ ಕಾರ್ಮಿಕ ವರ್ಗದವರ ಶಾಂತಿ ಇನ್ನೆಲ್ಲೂ ಇಲ್ಲ, ಈಗ ಏನಾದರೂ ಇದರ ಬಗ್ಗೆ ಒಂದು ಕಾನೂನು ತಂದರೆ ಇದರಿಂದ ಶಾಂತಿ ಉಂಟಾಗುವ ಬದಲು ಅಶಾಂತಿ ಹೆಚ್ಚಾಗುತ್ತದೆಯೇ ವಿನಾ ಪ್ರಯೋಜನವಾಗುವುದಿಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಈಗ ಅಸ್ಸಾಂನಲ್ಲಿ ಏನಾಗುತ್ತಾ ಇದೆ ಅನ್ನುವುದನ್ನು ನೋಡಿ. ಅವರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಹೊಸ ಹೊಸ ಕಾನೂನುಗಳನ್ನು ಮಾಡಿದರು. ಆದರ ಪರಿಣಾಮವಾಗಿ ಅದು ಇನ್ನೂ ಉಗ್ರ ರೂಪವಾಗಿ ತಾಳಿತು. ಇಂತಹ ಸಮಸ್ಯೆಗಳನ್ನು ಕಾನೂನಿನ ಮುಖಾಂತರ ಪರಿಹರಿಸುತ್ತೇವೆಂದರೆ ಅದು ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಇದಕ್ಕೆ ಬೇರೆ ರೀತಿಯಾದ ಪರಿಹಾರ ಮಾರ್ಗವನ್ನು ಅನುಸರಿಸಿದರೆ ಅದನ್ನು

ಒಪ್ಪಿಕೊಳ್ಳಬಹುದು ಅದನ್ನು ಆ ಕಾರ್ಮಿಕರು ಒಪ್ಪಿಕೊಳ್ಳದೇ ಹೋದರೆ ಆವಾಗ ಸಮಾಜದ ಕರ್ತವ್ಯ ದಲ್ಲಿ ಒಂದು ಹೊಣೆ ಅವರ ಮೇಲೆ ಬಿದ್ದಂತಾಗುತ್ತದೆ. ಅವರು ಇದರಲ್ಲಿ ಜಾರಿ ಕೊಂಡಂತಾಗುತ್ತದೆ. ಆದರೆ ಈ ಮುಷ್ಕರಕ್ಕೆ ಕಾರಣಗಳು ಏನೇ ಇರಲಿ ಅದನ್ನು ಪರಿಹರಿಸುವುದಕ್ಕೆ ಬೇರೆ ಮಾರ್ಗಗಳು ಇವೆ. ಇದರ ಬಗ್ಗೆ ಮಾನ್ಯ ಕಕ್ಕಿಲಾಯರವರು ವಿವರವಾಗಿ ಸಾಕಷ್ಟು ಹೇಳಿದ್ದಾರೆ. ತಾವು ಈ ಬಗ್ಗೆ ಹೊಸ ಕಾನೂನುಗಳನ್ನು ತಂದರೆ ಸಣ್ಣ ಪುಟ್ಟ ಕಾರಣಗಳಿಗೂ ಸಹ ಮುಷ್ಕರ ಆದೀತು ಎನ್ನುವ ಎಚ್ಚರಿಕೆಯನ್ನು ಕೊಡುತ್ತೇನೆ. ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾದರೆ ಇದಕ್ಕೆ ಸಂಬಂಧಪಟ್ಟ ಕಾರ್ಮಿಕ ಮುಖಂಡರನ್ನು ಕರೆದು ತಕ್ಕ ಪರಿಹಾರವನ್ನು ಕಂಡುಹಿಡಿಯಬೇಕೆ ವಿನಾ ಅದು ಬಿಟ್ಟು ಅವರಿಗೆ ಶಿಕ್ಷೆ ಕೊಡುತ್ತೇವೆ ಅಂತಾಗಲಿ ಅವರನ್ನು ಜೈಲಿಗೆ ಕಳುಹಿಸುತ್ತೇವೆ ಅಂತಾಗಲಿ ಮಾಡಿದರೆ ಇದರಿಂದ ಮುಷ್ಕರ ವನ್ನು ತಡೆಯಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಮಾಲೀಕರನ್ನೂ ಕಾರ್ಮಿಕ ಮುಖಂಡರನ್ನೂ ಕರೆಸಿ ಮಾತುಕತೆಗಳನ್ನಾಡಿದರೆ ಅದರಿಂದ ಅವರ ಸಮಸ್ಯೆಗಳನ್ನು ಬಗೆಹರಿಸಬಹುದೆ ವಿನಾ ಮತ್ತಾವುದ ರಿಂದಲೂ ಸಾಧ್ಯವಿಲ್ಲಾ ಎಂದು ಹೇಳುತ್ತೇನೆ. ಶ್ರೀಮಾನ್ ಖಂಡ್ರೆಯವರು ಮಾತನಾಡುವಾಗ ರೈಟ್ಸ್ ಅಂಡ್ ಡ್ಯೂಟೀಸ್ ಬಗ್ಗೆ ಮಾತನಾಡುವಾಗ ಅವರ ರೈಟ್ಸ್ ಬಗ್ಗೆ ಹೇಳಿದರೇ ವಿನಾ ಡ್ಯೂಟಿ ಬಗ್ಗೆ ಸರಿ ಯಾಗಿ ಹೇಳಲಿಲ್ಲ, ಈವೊತ್ತಿನ ದಿವಸ ಈ ಬಗ್ಗೆ ನಮ್ಮ ಕರ್ತವ್ಯ ಏನು ಇದೆ ನಮ್ಮ ಹೊಣೆ ಏನು ಇದೆ ಅನ್ನುವುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ಅದರಿಂದ ಏನಾದರೂ ಸಾಧನೆ ಮಾಡಬಹುದೆ ವಿನಾ ಅದು ಬಿಟ್ಟು ಬೇರೆ ಮಾರ್ಗ ಅನುಸರಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಹಾಗೆಯೇ ಸಣ್ಣ ಪುಟ್ಟ ಕಾರಣಗಳಿಗೋಸ್ಕರ ಮುಷ್ಕರ ಮಾಡಿದರೆ ಅದನ್ನು ಮೂರ್ಖತನ ಎಂದು ಹೇಳಬೇಕಾಗುತ್ತದೆ. ಈವೊತ್ತಿನ ದಿವಸ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ಮಾತನಾಡುವಾಗ ಹೇಳಿದರು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಮಸೂದೆಯನ್ನು ನಾವು ತಂದಿ ದ್ದರೂ ಈಗ ಅದನ್ನು ವಿರೋಧಿಸುತ್ತೇನೆ ಅನ್ನುವ ಮಾತನ್ನು ಹೇಳಿದರು ಹಾಗೆಯೇ ವಿರೋಧ ಪಕ್ಷದ ಕೆಲವು ಸದಸ್ಯರು ಮಾತನಾಡುವಾಗ ಇದರ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರೂ ಇದರ ಬಗ್ಗೆ ಮಾತನಾಡುವಾಗ ಈ ಮಸೂದೆಯನ್ನು ನಾನು ಮುಖ್ಯ ಮಂತ್ರಿಯಾಗಿದ್ದಾಗ ತಂದಿದ್ದರೂ ಕೂಡ ಇದರ ಬಗ್ಗೆ ಏತಕ್ಕೆ ಒತ್ತಾಯ ಮಾಡಲಿಲ್ಲ ಎನ್ನುವ ಕಾರಣವನ್ನೂ ಸಹ ಹೇಳಿದರು. ಏನು ಹೇಳಿದರು ಎಂದರೆ ಈ ವಿಚಾರದ ಬಗ್ಗೆ ಕಾರ್ಮಿಕ ಮುಖಂಡರನ್ನೂ ಕರೆಸಿ, ಬೇರೆ ಬೇರೆ ರಾಷ್ಟ್ರದ ನಾಯಕರನ್ನೂ ಕರೆಸಿ ವಿಚಾರ ವಿನಿಮಯ ನಡೆಸಿದ ಮೇಲೆ, ಇದರ ಬಗ್ಗೆ ಚರ್ಚೆ ಮಾಡಿದ ಮೇಲೆ ನನಗೆ ತೃಪ್ತಿ ಉಂಟಾಗಿ ಅದನ್ನು ಮುಂದಕ್ಕೆ ಜಾರಿ ಮಾಡಲಿಲ್ಲ ಅನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದರು. ಆದುದರಿಂದ ನಾವು ಈವೊತ್ತಿನ ದಿವಸ ಕಾರ್ಮಿಕ ವರ್ಗದಲ್ಲಿ ಅಶಾಂತಿಯನ್ನು ಮೂಡಿಸುವುದಕ್ಕೆ ಹೋಗ ಬಾರದು. ಆದ್ದರಿಂದ ಕಾರ್ಮಿಕರ ಹಿತಕ್ಕೆ ಒಂದು ಧಕ್ಕೆ ಉಂಟಾಗುತ್ತದೆ. ಹಾಗೇನಾದರೂ ಆದರೆ ಅದರಿಂದ ಇನ್ನಷ್ಟು ಅಶಾಂತಿ ಮೂಡುತ್ತದೆ ವಿನಾ ಪ್ರಯೋಜನ ಏನೂ ಆಗುವುದಿಲ್ಲ. ತಮಗೆ ಒಂದು ಉದಾಹರಣೆ ಕೊಡಬೇಕಾದರೆ ಹಿಂದೆ ಪ್ರೊಹಿಬಿಷನ್ ವಿಚಾರವಾಗಿ ಒಂದು ಕಾನೂನು ತಂದೆವು. ಈ ಕುಡಿತ ಅನ್ನುವುದು ಕೆಟ್ಟದ್ದು ಇದನ್ನು ತೆಗೆದು ಹಾಕಬೇಕು ಎಂದು. ಇದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮತ್ತೆ ಈ ಕುಡಿಯುವುದನ್ನು ಯಾರೂ ಕೂಡ ಒಳ್ಳೆಯದು ಎಂದು ಹೇಳುವುದಿಲ್ಲ. ಈ ಪ್ರೊಹಿ ಬಿಷನ್ ಬಗ್ಗೆ ಒಂದು ಕಾನೂನು ಸಹ ತಂದಿದ್ದಾಯಿತು. ಅದರ ಪರಿಣಾಮ ಏನಾಯಿತು ನೋಡಿ. ಅದು ನಾವು ನಿರೀಕ್ಷಿಸಿದ ಮಟ್ಟಕ್ಕೆ ಬರಲಿಲ್ಲಾ. ಅದನ್ನು ನಾವು ಸರಿಯಾಗಿ ತಡೆಗಟ್ಟಲಿಕ್ಕಾಗಲಿಲ್ಲ. ಈ ಮಿಂಚಿನ ಮುಷ್ಕರದಿಂದ ತೊಂದರೆಗಳು ಇಲ್ಲ ಎಂದು ಹೇಳುವುದಿಲ್ಲ ತೊಂದರೆಗಳು ಇವೆ. ಆದರೆ ಅದನ್ನು ಬಗೆಹರಿಸುವುದಕ್ಕೆ ಏನು ಮಾರ್ಗ ಅನುಸರಿಸಬೇಕೋ ಅದನ್ನು ಅನುಸರಿಸಬೇಕೇ ವಿನಾ ಅದು ಬಿಟ್ಟು ಕೇವಲ ಕಾನೂನಿನ ಮೂಲಕ ಇದನ್ನೆಲ್ಲಾ ತಡೆಗಟ್ಟುತ್ತೇವೆ ಅನ್ನುವುದಾದರೆ ಅದನ್ನು ಯಾರೂ ಒಪ್ಪಲಿಕ್ಕಿಲ್ಲ. ಈಗ ಏನೋ ಇದಕ್ಕೆ ಒಂದು ಕಾನೂನು ತಂದಿದ್ದೀರಿ. ಇದರಿಂದ ಏನಾದರೂ ತಡೆಗಟ್ಟುತ್ತೇವೆ ಅನ್ನುವು ದಾದರೆ ಕರ್ನಾಟಕದಲ್ಲಿರುವ ಕಾರ್ಮಿಕ ವರ್ಗದಲ್ಲಿ ಇನ್ನೂ ಅಶಾಂತಿ ಉಂಟಾಗುತ್ತದೆ ವಿನಾ ಪ್ರಯೋಜನ ವಾಗುವುದಿಲ್ಲ. ಅದರ ಬದಲಾಗಿ ಮಾಲಿಕ ವರ್ಗದವರನ್ನೂ ಮತ್ತು ಕಾರ್ಮಿಕ ವರ್ಗದವರನ್ನೂ ಕರೆಸಿ ಚರ್ಚಿಸಿ ಬಗೆಹರಿಸಿಕೊಳ್ಳಬಹುದು. ಈ ಕಾರಣದಿಂದ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳ ಬೇಕೆಂದು ಹೇಳುತ್ತೇನೆ, ಒಂದು ವೇಳೆ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ವಿಲ್ಲದೇ ಹೋದರೆ ಇದನ್ನು ಸರ್ಕ್ಯುಲೇಷನ್ ಮಾಡಿ ಜನರ ಅಭಿಪ್ರಾಯವನ್ನು ಪಡೆಯಲಿ. ಈ ಒಂದು ಅಭಿಪ್ರಾಯವನ್ನು ಶ್ರೀಮಾನ್ ಕಕ್ಕಿಲಾಯರವರೂ ಸಹ ಕೊಟ್ಟಿದ್ದಾರೆ. ಇದನ್ನಾದರೂ ಕೂಡ ಸರ್ಕಾರ ಒಪ್ಪಬೇಕು. ಇದು ನಮ್ಮ ಒಂದು ಪ್ರೆಸ್ಟೀಜ್ ಅಂತ ಸರ್ಕಾರ ತಿಳಿದುಕೊಂಡರೆ ಆಗುವುದಿಲ್ಲ. ಮತ್ತು

ಸರ್ಕಾರ ಇದನ್ನು ನಾವು ಈಗ ಮಂಡಿಸಿದ್ದೇವೆ, ಇದು ನಮ್ಮ ಘನತೆ ಮತ್ತು ಗೌರವದ ಪ್ರಶ್ನೆ ಎಂದು ತಿಳಿದುಕೊಂಡು ಇದನ್ನು ಹಿಂದಕ್ಕೆ ತೆಗೆದುಕೊಂಡರೆ ನಮಗೆ ಕುಂದುಂಟಾಗುತ್ತದೆ ಎಂದು ತಿಳಿದುಕೊಂಡು ಇದನ್ನು ಪಾಸ್ ಮಾಡಿಕೊಂಡಿದ್ದೇ ಆದರೆ ಅದನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಇದರಿಂದ ಏನು ಅನಾಹುತವಾಗುತ್ತದೆ ಏನು ಅಶಾಂತಿ ಕಾರ್ಮಿಕ ವರ್ಗದಲ್ಲಿ ಉಂಟಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿ ಈ ಮಸೂದೆಯನ್ನು ನಾನು ಪ್ರಬಲವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).– ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಮಾತನಾಡಿರ ತಕ್ಕಂಥಾ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಈ ಕಾನೂನು ಮೇಲ್ನೋಟಕ್ಕೆ ಕಾಣತಕ್ಕಂಥಾ ಉದ್ದೇಶ ವಾದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಇದರ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್‌ನಲ್ಲಿ ಏನು ಇದೆ ಎಂದರೆ ಸಾರ್ವಜನಿಕ ಹಿತದೃಷ್ಟಿಯಿಂದ ಜನತೆಗೆ ತೊಂದರೆ ಆಗುತ್ತದೆ ಅನ್ನುವ ದೃಷ್ಟಿಯಿಂದ ಇದನ್ನು ತಂದಿರತಕ್ಕಂಥಾ ಉದ್ದೇಶ ಇದೆ ಆದರೆ ಸಣ್ಣಪುಟ್ಟ ಕಾರಣಗಳಿಗೋಸ್ಕರ ಕಾರ್ಮಿಕ ವರ್ಗಕ್ಕೆ ಅಥವಾ ಯಾವ ನೌಕರರಿಗಾಗಲಿ ಇದನ್ನು ವಿಸ್ತರಿಸಿಕೊಳ್ಳಬಹುದು. ಈ ಮಸೂದೆಯಲ್ಲಿ ೩-೪ ಸಂಸ್ಥೆ ಗಳಿಗೆ ಮಾತ್ರ ಕೊಟ್ಟಿದ್ದಾರೆ. ಆದರೆ ಇವರ ಒಂದು ಅಮೆಂಡ್‌ಮೆಂಟ್ ಪ್ರಕಾರ ಯಾರನ್ನಾದರೂ ಕೂಡ ತಮ್ಮ ಪರಿಮಿತಿಯೊಳಗೆ, ತಮ್ಮ ಒಂದು ವ್ಯಾಪ್ತಿಯೊಳಗೆ ಎಕ್ಸ್‌ಟೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಅಂಥಾ ಒಂದು ಸರ್ವಶಕ್ತಿ ಈ ಕಾನೂನಿನಲ್ಲಿ ಇದೆ. ಈಗ ನಾವು ಇದಕ್ಕೆ ಅಂಗೀಕಾರ ಕೊಡಬೇಕೇ ಕೊಡಬಾರದೇ ಅನ್ನುವ ಪ್ರಶ್ನೆ ಬಂದಿದೆ. ನಮಗೆ ಈಗ ಇದರಲ್ಲಿ ೩ ಅಂಗಗಳಿವೆ. ಯಾವ್ಯಾವುದೆಂದರೆ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು. ನಮ್ಮ ರಾಜ್ಯಾಂಗಕ್ಕೆ ವಿರುದ್ಧ ವಾಗಿ ಏನಾದರೂ ಅಧಿಕಾರವನ್ನು ಕೊಟ್ಟರೆ ಅದು ನ್ಯಾಯಾಂಗದ ಮುಂದೆ ಹೋದರೆ ಅದು ಸರಿಯಲ್ಲ ಎಂದು ಹೇಳತಕ್ಕಂಥಾ ಸಂಭವವೂ ಉಂಟು. ತಮಗೆ ಹೇಳಬೇಕಾದರೆ ೧೯೭೩-೭೪ ರಲ್ಲಿ ಈಗ್ಗೆ ಎರಡು ವರ್ಷದ ಹಿಂದೆ ನಮ್ಮ ದೇಶದಲ್ಲಿ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ದೇಶದಲ್ಲಿ ಬಹಳ ಅಶಾಂತಿಯೂ ಹುಟ್ಟಿತು. ಹಲವಾರು ಕಡೆಗಳಲ್ಲಿ ಮುಷ್ಕರಗಳು ನಡೆದವು ಇದರಿಂದ ದೇಶದಲ್ಲಿ ಕೆಲವೆಡೆಗಳಲ್ಲಿ ಸಾರ್ವಜನಿಕರಿಗೆ ಅಸಮಾಧಾನವೂ, ಅಶಾಂತಿಯೂ ಹೆಚ್ಚಾಯಿತು. ಆವಾಗ ಒಂದು ಸರಿಯಾದ ಮಾರ್ಗವಿಲ್ಲದೆ ಸಾರ್ವಜನಿಕರಿಗೆ ಆಗಿರತಕ್ಕಂಥಾ ಅಸಮಾಧಾನ ವನ್ನು ತೋರಿಸುವುದಕ್ಕೆ ಬಹಳ ಕಷ್ಟವೂ ಆಯಿತು. ಆಗ ಏನು ಹೇಳಿದರೆಂದರೆ, ಈ ತರಹದ ಪರಿಸ್ಥಿತಿ ಇದ್ದರೆ ನಮ್ಮ ದೇಶ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಗತಿಯಾಗುವುದಿಲ್ಲ, ಆದಕಾರಣ ಸಾಮಾನ್ಯ ಜನರ ಹಿತಕ್ಕೋಸ್ಕರ ತುರ್ತುಪರಿಸ್ಥಿತಿಯ ಕಾಲದಲ್ಲಿ ಉಪಯೋಗ ಮಾಡುವಂತಹ ಕೆಲವು ಕಾನೂನುಗಳು ಸರ್ಕಾರಕ್ಕೆ ಬೇಕು ಎಂದು ಕೇಳಿ ಪಡೆದುಕೊಂಡರು. ಅದೇ ರೀತಿ ಇದರಲ್ಲಿಯೂ ಹೇಳಿದ್ದಾರೆ. ಜನರ ಹಿತಕ್ಕಾಗಿಯೇ ಇದನ್ನು ತಂದಿರುವುದೆಂದು ಹೇಳುತ್ತಿದ್ದಾರೆ. ಈ ಮೊದಲು ಹಿಟ್ಲರ್ ಜರ್ಮನ್ ಪಾರ್ಲಿಮೆಂಟಿನಲ್ಲಿ ಅಲ್ಲಿನ ರಾಜ್ಯಾಂಗವನ್ನು ಬದಲಾವಣೆ ಮಾಡುವಾಗ ಹೇಳಿದಂಥ ಮಾತುಗಳನ್ನು ನಾವು ಇಲ್ಲಿ ಜ್ಞಾಪಿಸಿಕೊಳ್ಳಬೇಕಾಗಿದೆ. ಅಲ್ಲಿ ರಾಜ್ಯಾಂಗವನ್ನು ಬದಲಾವಣೆ ಮಾಡುವುದಕ್ಕೂ ಮೊದಲು ನಡೆದ ಯುದ್ಧದಲ್ಲಿ ಆ ದೇಶ ಸಾಕಷ್ಟು ನಷ್ಟವನ್ನು ಅನುಭವಿಸಿತ್ತು. ಬೇರೆ ರಾಷ್ಟ್ರಗಳ ದೃಷ್ಟಿಯಲ್ಲಿ ಆ ದೇಶ ಬಹಳ ಹಿಂದೆ ಬಿದ್ದಿತ್ತು. ಈ ಒಂದು ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಹಿಟ್ಲರ್ ಅಲ್ಲಿನ ಪಾರ್ಲಿಮೆಂಟ್‌ನಲ್ಲಿ ಏನು ಹೇಳಿದನೆಂದರೆ, ಜರ್ಮನಿಯ ಹಿತದೃಷ್ಟಿಯಿಂದ, ಈ ದೇಶದ ಘನತೆಗೌರವಗಳನ್ನು ಉಳಿಸುವ ದೃಷ್ಟಿಯಿಂದ ರಾಜ್ಯಾಂಗವನ್ನು ಬದಲಾವಣೆ ಮಾಡಲು ಅನುಮತಿ ಕೊಡಿ, ಇದರಲ್ಲಿ ಹೆಚ್ಚಿನ ಬದಲಾವಣೆಗಳನ್ನು ಮಾಡುವುದಿಲ್ಲ, ತಲೆ ನುಗ್ಗಿಸಲು ಸ್ವಲ್ಪ ಕಿಂಡಿ ಇದ್ದರೆ ಸಾಕು ಎಂದು ಹೇಳುವಂತೆ, ಕಾರ್ಯಾಂಗದ ಮೂಲಕ ಬೇಕಾದಂಗ ಉಪಯೋಗಿಸಲು ಸ್ವಲ್ಪ ಮಾತ್ರ ಅಧಿಕಾರ ಕೊಡಿ ಎಂದು ಕೇಳಿಕೊಂಡು ರಾಜ್ಯಾಂಗವನ್ನು ಬದಲಾವಣೆ ಮಾಡಿಸಿದ. ಅನಂತರ ಏನಾಯಿತೆಂಬುದು ನಮಗೆಲ್ಲಾ ಗೊತ್ತಿದೆ. ಅದೇರೀತಿ ನಮ್ಮ ದೇಶದಲ್ಲಿ ೧೯೭೫ ರಲ್ಲಿ ತುರ್ತುಪರಿಸ್ಥಿತಿ ಯನ್ನು ಜಾರಿಗೆ ತರಲಾಯಿತು. ಅನಂತರ ಸಾರ್ವಜನಿಕರ ಹಿತದೃಷ್ಟಿಗಾಗಿ ಎಂದು ಹೇಳಿಕೊಂಡು ರಾಜ್ಯಾಂಗವನ್ನು ಬದಲಾವಣೆ ಮಾಡಿದರು. ಅನಂತರ ಏನಾಯಿತೆಂಬುದು ಸಹ ನಮಗೆಲ್ಲಾ ಅನುಭವ ವಾಗಿದೆ. ಈಗ ಇಲ್ಲಿ ತಂದಿರುವಂತಹ ಮಸೂದೆ ಸಣ್ಣದಾಗಿ ನಮಗೆ ಕಾಣುತ್ತಿರಬಹುದು, ಆದರೆ ಇದನ್ನು ಪಾಸ್ ಮಾಡಿದರೆ ಮುಂದೆ ಬಹಳ ಗಂಭೀರವಾದಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಈಗ

ಕೆಲವರು ಮಾಡುವ ಚೇಷ್ಟೆಗಳನ್ನು ನೋಡಿದಾಗ ಇಂತಹ ಕಾನೂನಿನ ಅಗತ್ಯ ಕಂಡುಬಂದರೂ ಸಹ, ಉದಾಹರಣೆಗೆ ಹೇಳಬೇಕೆಂದರೆ. ಆಟೋರಿಕ್ಷಾ ಡ್ರೈವರ್‌ಗಳು ಕೆಲವು ಸಲ ಅರ್ಜೆಂಟ್ ಆಸ್ಪತ್ರೆಗೆ ಹೋಗಬೇಕು ಎಂದು ಕೇಳಿದಾಗ, ಇಲ್ಲ ಶಿವಾಜಿನಗರಕ್ಕೆ ಆದರೆ ಬರುತ್ತೇನೆಂದು ಹೇಳುತ್ತಾರೆ, ಅದೇರೀತಿ ಟ್ಯಾಕ್ಸಿ ಡ್ರೈವರ್‌ಗಳು ಮೀಟರ್‌ನಲ್ಲಿ ನಾಲ್ಕೂವರೆ ರೂಪಾಯಿಗಳನ್ನು ತೋರಿಸುತ್ತಿದ್ದರೂ ಸಹ ೮ ರೂಪಾಯಿಗಳನ್ನು ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಾರೆ. ಅದೇರೀತಿ ಆಸ್ಪತ್ರೆಗಳಲ್ಲಿ ಸಾಯುತ್ತಿರುವ ರೋಗಿಯ ಕಡೆಗೆ ಡಾಕ್ಟರ್ ಆದವರು ಮೊದಲು ಗಮನ ಕೊಡದೆ ಮಂತ್ರಿಗಳು ಯಾರೋ ಟೆಲಿಫೋನ್ ಮಾಡಿದರೆಂದುಕೊಂಡು ಸಕ್ಕರೆ ರೋಗದ ರೋಗಿಯ ಕಡೆಗೆ ಮೊದಲು ಗಮನ ಕೊಡುತ್ತಾರೆ. ಇಂತಹ ದೋಷಗಳು ನಮ್ಮ ದೇಶದಲ್ಲಿವೆ. ಇದನ್ನೆಲ್ಲಾ ತಪ್ಪಿಸಲು ಈ ಒಂದು ಕಾನೂನಿಂದ ಸಾಧ್ಯವೆಂದು ಯಾರಾದರು ತಿಳಿದುಕೊಂಡಿದ್ದರೆ, ಅದು ತಪ್ಪಾಗುತ್ತದೆ. ಏಕೆಂದರೆ, ಇಲ್ಲಿಯುವರೆಗೆ ನಡೆದಿರುವ ಕೆಲವು ಘಟನೆಗಳ ಒಂದು ಅನುಭವದಿಂದ ಇದು ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ, ಬೇರೆ ರಾಷ್ಟ್ರಗಳಲ್ಲಿ ನಡೆದಿರುವ ಘಟನೆಗಳ ಒಂದು ಅನುಭವದಿಂದ ಸಹ ನೋಡುವುದಾದರೆ ಇಂತಹ ಕಾನೂನುಗಳಿಂದ ಎಲ್ಲವನ್ನೂ ಹತೋಟಿಗೆ ತರಲಾಗುತ್ತದೆಂದು ತಿಳಿದುಕೊಂಡರೆ, ಅದು ತಪ್ಪಾಗುತ್ತದೆ. ಈಗ ಪ್ರಿವೆಂಟೀವ್ ಡಿಟೆನ್‌ಷನ್ ಆಕ್ಟ್ ಪ್ರಕಾರ ಯಾರನ್ನು ಬೇಕಾದರೂ ಅರೆಸ್ಟ್ ಮಾಡಬಹುದು. ಆದರೆ ಕಾನೂನು ರೀತ್ಯಾ ಒಬ್ಬ ಮನುಷ್ಯ ತಪ್ಪು ಮಾಡಿದ್ದಾನೆಂದು ಕೋರ್ಟು ಹೇಳುವವರೆಗೂ ಅವನ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕಂಥ ಶಕ್ತಿಯನ್ನು ಯಾರಿಗೂ ಕೊಡಬಾರದೆಂಬುದೇ ನಮ್ಮ ಪ್ರಜಾ ಪ್ರಭುತ್ವದ ಒಂದು ಅಡಿಗಲ್ಲಾಗಿದೆ. ಆದರೆ ಈ ಕಾನೂನಿನ ಪ್ರಕಾರ ಯಾರನ್ನು ಬೇಕಾದರೂ ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಬಹುದು. ಸಾರ್ವಜನಿಕರ ಹಿತದೃಷ್ಟಿಯಿಂದ ಈ ರೀತಿ ಮಾಡಲಾಗುತ್ತದೆಂದು ತಾವು ಹೇಳಬಹುದು, ಹಾಗೆ ನೋಡಿದರೆ ಕೇವಲ ಆಟೋ ಡ್ರೈವರ್‌ಗಳು ಮತ್ತು ಟ್ಯಾಕ್ಸಿ ಡ್ರೈವರ್‌ಗಳು ಮಾತ್ರ ತಪ್ಪು ಮಾಡುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ, ನಮ್ಮ ದೇಶದಲ್ಲಿ ಆಡಳಿತ ನಡೆಸುತ್ತಿರುವ ಮಂತ್ರಿಗಳ ಬಗ್ಗೆ ಹಾಗೂ ಶಾಸಕರ ಬಗ್ಗೆಯೂ ಸಹ ಜನರಲ್ಲಿ ಒಂದು ಕೆಟ್ಟ ಅಭಿಪ್ರಾಯವಿದೆ. ಆದ್ದರಿಂದ ಇವರುಗಳನ್ನು ಹತೋಟಿಗೆ ತರಲು ಇಂತಹ ಒಂದು ಕಾನೂನನ್ನು ಜಾರಿಗೆ ತರಬೇಕಾಗುತ್ತದೆ, ಈ ರಾಜ್ಯದಲ್ಲಿ ಹಾಗೂ ಈ ರಾಷ್ಟ್ರದಲ್ಲಿ ನಡೆಯುತ್ತಿರುವ ಕೆಲವು ಘಟನೆಗಳನ್ನು ನೋಡಿದಾಗ, ಕೆಲವರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂದರೆ, ಅವರ ಹೆಸರನ್ನು ನಾನು ಇಲ್ಲಿ ಹೇಳುವುದಿಲ್ಲ, ಸಂಸತ್ತಿನ ಸದಸ್ಯರೊಬ್ಬರು ಪಾಟ್ನ ರೈಲ್ವೇಸ್ಟೇಷನನ್ನು ಮಾರಾಟ ಮಾಡಿದ್ದಾರೆ. ಇಂತಹವರನ್ನು ಹತೋಟಿಗೆ ತರಲು ಈ ರೀತಿಯ ಕಾನೂನು ಬೇಕು. ಆದರೆ ಕಾರ್ಮಿಕರ ಬೇಜವಾಬ್ದಾರಿತನವನ್ನು ಇಂತಹ ಕಾನೂನು ಮೂಲಕ ಹತೋಟಿಗೆ ತರಲು ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲು ಅವರನ್ನು ಸಹ ಈ ರಾಷ್ಟ್ರದ ಅವಿಭಾಜ್ಯ ಅಂಗವೆಂದು ಪರಿಗಣಿಸಿದರೆ, ಅವರೂ ಸಹ ನಮ್ಮ ಮಾಲೀಕರು ನಮ್ಮ ಹಿಸ್ಸೇದಾರರೆಂಬ ಭಾವನೆಯಿಂದ ನೋಡಿದರೆ, ಅವರು ಸ್ವಯಂಸ್ಫೂರ್ತಿಯಿಂದ ಹಾಗೂ ಕಷ್ಟಪಟ್ಟು ದುಡಿಯುತ್ತಾರೆ. ಈ ಕಾರಣದಿಂದಲೇ ನಮ್ಮ ರಾಜ್ಯಾಂಗದಲ್ಲಿ ಇದ್ದಂಥ ಎಲ್ಲ ತಿದ್ದುಪಡಿಗಳೂ ಹೋದಮೇಲೆ ಫಂಡಮೆಂಟಲ್ ಡ್ಯೂಟೀಸ್ ಎಂಬ ಛಾಪ್ಟರನ್ನು ಅದರಲ್ಲಿ ಸೇರಿಸಿದ್ದಾರೆ. ಈಗ ನಾನು ಎಲ್ಲವನ್ನೂ ಓದಲು ಹೋಗುವುದಿಲ್ಲ. ಒಂದನ್ನು ಮಾತ್ರ ಓದಿ ಹೇಳುತ್ತೇನೆ :

> "To strive towards excellence in all spheres of individual and collective activity so that the nation constantly rises to higher levels of endevour and achievement."

ಇದು ನಮ್ಮ ಡ್ಯೂಟಿ. ರಾಜ್ಯಾಂಗದಲ್ಲಿರತಕ್ಕಂಥ ಈ ಡ್ಯೂಟಿ ಕೇವಲ ಆಟೋರಿಕ್ಷಾ ಡ್ರೈವರ್‌ಗಳಿಗೆ ಹಾಗೂ ಟ್ಯಾಕ್ಸಿ ಡ್ರೈವರ್‌ಗಳಿಗೆ ಮಾತ್ರವಲ್ಲ, ಪ್ರಧಾನಮಂತ್ರಿಗಳಿಂದ ಹಿಡಿದು ಅಥವಾ ಅಲ್ಲಿನ ಹಿರಿಯ ಕಾರ್ಯದರ್ಶಿಯಿಂದ ಹಿಡಿದು ಜವಾನನವರೆಗೆ ಸಹ ಈ ಫಂಡಮೆಂಟಲ್ ಡ್ಯೂಟಿ ಇದೆ. ಹಾಗೆ ನೋಡಿದರೆ ಸಾರ್ವಜನಿಕರೇ ಈ ದೇಶದ ಮಾಲೀಕರಾಗಿದ್ದಾರೆ. ಅವರು ಕೊಟ್ಟಿರುವ ಅಧಿಕಾರದಿಂದಲೇ ತಾವು ಆಡಳಿತ ನಡೆಸುತ್ತಿದ್ದೀರಿ. ಆದ್ದರಿಂದ ಕಾರ್ಮಿಕರು ಮತ್ತು ಮಾಲೀಕರ ನಡುವೆ ಒಂದು ಸುಮಧುರ ವಾತಾವರಣವನ್ನು ತಾವು ನಿರ್ಮಿಸಬೇಕೇ ಹೊರತು. ಇಂತಹ ಕಾನೂನು ಜಾರಿಗೆ ತರುವುದರಿಂದ ಅಲ್ಲ. ೧೯೭೮ ರಲ್ಲಿ ನಮ್ಮ ದೇಶದಲ್ಲಿ ಮಿಲ್ ಮಾಲೀಕರು, ಲೇಬರ್ ಲೀಡರ್ಸ್ ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡಂತಹ ಒಂದು ತ್ರಿಪಕ್ಷೀಯ ಸಭೆಯನ್ನು ಕರೆದು ಇಂಡಸ್ಟ್ರಿಯಲ್ ಪ್ರೊಡಕ್ಷನನ್ನು ಜಾಸ್ತಿ ಮಾಡುವ ಬಗ್ಗೆ ಯಾವರೀತಿ ಕ್ರಮತೆಗೆದುಕೊಳ್ಳಬೇಕೆಂಬ ಬಗ್ಗೆ ಚರ್ಚೆ ನಡೆಸಿದರು,

ಕಾರ್ಮಿಕ ವರ್ಗದವರು ಮುಷ್ಕರ ನಡೆಸುವುದರಿಂದ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಕಡಿಮೆಯಾಗಿದೆ ಎಂದು ಯಾರಾದರು ಅರ್ಥಶಾಸ್ತ್ರಜ್ಞರು ಪ್ರೂವ್ ಮಾಡುವುದಿದ್ದರೆ ಮಾಡಲಿ ಆದರೆ ನನಗೆ ತಿಳಿದಂತೆ, ನನ್ನ ಬಳಿ ಇರುವ ಅಂಕಿ ಅಂಶಗಳ ಪ್ರಕಾರ ಕಾರ್ಮಿಕರ ಒಂದು ಮುಷ್ಕರದಿಂದ ನಮ್ಮ ದೇಶದಲ್ಲಿ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಬಿದ್ದು ಹೋಗಿಲ್ಲ. ನಮ್ಮ ರಾಷ್ಟ್ರದಲ್ಲಿ ೨ ಕೋಟಿ ಮಿಲಿಯನ್ ವರ್ಕರ್ಸ್ ಇದ್ದಾರೆ. ಆದರೆ ಯೂನಿಯನ್‌ಗಳಲ್ಲಿ ಸದಸ್ಯರಾಗಿರುವವರು ಕೇವಲ ೫-೬ ಮಿಲಿಯನ್ ವರ್ಕರ್ಸ್ ಮಾತ್ರ. ಆದ್ದರಿಂದ ಈ ದೇಶದ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಏನಾದರೂ ಕಡಿಮೆಯಾದರೆ, ಅದಕ್ಕೆ ಕಾರಣಕರ್ತರು ಈ ದೇಶದಲ್ಲಿರತಕ್ಕಂಥ ಟಾಟಾ ಬಿರ್ಲಾ ಮುಂತಾದ ೭೦ ದೊಡ್ಡ ದೊಡ್ಡ ಮನೆತನದವರು ಹಾಗೂ ದೊಡ್ಡ ದೊಡ್ಡ ಜಮೀನ್ದಾರರು ಇವರು ತಮಗಿಷ್ಟ ಬಂದಂತೆ ಕಾರ್ಮಿಕರನ್ನು ನಡೆಸಿಕೊಳ್ಳುತ್ತಾರೆ. ಇವರೇ ಇಂಡಸ್ಟ್ರಿಯಲ್ ಪ್ರೊಡಕ್ಷನನ್ನು ಹಾಗೂ ಸಾರ್ವಜನಿಕರ ಶಕ್ತಿಯನ್ನು ಹಾಳು ಮಾಡತಕ್ಕಂಥ ಜನರಾಗಿದ್ದಾರೆ. ಆದಕಾರಣ ಇಂತಹ ಜನರ ಬಗ್ಗೆ ಈ ರೀತಿಯ ಕಾನೂನನ್ನು ಮಾಡಬೇಕೇ ಹೊರತು ಟ್ಯಾಕ್ಸಿ ಡ್ರೈವರ್‌ಗಳಿಗೆ ಅಲ್ಲ, ಹಾಲು, ಸಕ್ಕರೆ ಮುಂತಾದ ಪದಾರ್ಥಗಳು ಸಿಗದಿದ್ದಾಗ ಜನರಿಗೆ ತೊಂದರೆಯಾಗುತ್ತದೆಂಬುದು ನಿಜ. ಆದರೆ ಅದಕ್ಕೆ ಕಾರಣಕರ್ತರು ಯಾರೆಂಬುದನ್ನು ಮೊದಲು ನೋಡಬೇಕು. ಹೊಟ್ಟೆಯಲ್ಲಿ ಗೆಡ್ಡೆ ಇದ್ದಾಗ, ಅದು ಕರಗಲು ಔಷಧ ಕೊಡಬೇಕು. ಇಲ್ಲದಿದ್ದರೆ ಗೆಡ್ಡೆ ಜಾಸ್ತಿ ಬೆಳೆದರೆ ಕೆಮ್ಮು ಪ್ರಾರಂಭವಾಗುತ್ತದೆ. ಆಗ ಕೆಮ್ಮಿಗೆ ಔಷದ ಕೊಟ್ಟರೆ ಗೆಡ್ಡೆ ಕರಗುವುದಿಲ್ಲ, ಆದಕಾರಣ ರೋಗದ ಚಿಹ್ನೆ ಎಲ್ಲಿದೆ ಎಂಬುದನ್ನು ಕಂಡುಹಿಡಿದು, ಅದಕ್ಕೆ ಔಷಧ ಕೊಡಬೇಕು. ಇಲ್ಲದಿದ್ದರೆ ಅದು ಹೊಸ ರೋಗಕ್ಕೆ ದಾರಿಯಾಗುತ್ತದೆ.

ಛೇರ್‌ಮನ್.— ತಾವು ಹೇಳುವುದನ್ನೆಲ್ಲಾ ಹೇಳಿಬಿಟ್ಟಿದ್ದೀರಿ. ಆದಕಾರಣ ತಾವು ತಮ್ಮ ಭಾಷಣವನ್ನು ಇಲ್ಲಿಗೇ ಮುಗಿಸಿ ಬೇರೆಯವರಿಗೆ ಮಾತನಾಡಲು ಅವಕಾಶ ಮಾಡಿಕೊಡುವುದು ಒಳ್ಳೆಯದು

೧-೦೦ ಪಿ. ಎಂ.

ಶ್ರೀ ಜೆ. ಹೆಚ್. ಪಟೇಲ್.—ಸರ್ವಜ್ಞ ಕವಿಯು ತನ್ನ ವಚನದಲ್ಲಿ ‘ ಮೂರ್ಖನಿಗೆ ಬುದ್ಧಿಯನ್ನು ನೂರ್ಕಾಲ ಪೇಳಿದರೆ ಗೋಕ್ಕಲ್ಲ ಮೇಲೆ ಮಳೆ ಹುಯ್ದಂತೆ ’ ಎಂದು ಹೇಳಿರುವಂತೆ ನೀವು ನನಗೆ ಭಾಷಣ ಮಾಡಬೇಡಿ ಎಂದು ಹೇಳುತ್ತೀರಾ ?

ಛೇರ್‌ಮನ್.—ಹಾಗಲ್ಲ, ಈಗಾಗಲೇ ಈ ಬಗ್ಗೆ ಒಂದು ಒಪ್ಪಂದ ಆಗಿದೆ.

ಶ್ರೀ ಆರ್. ಗುಂಡೂರಾವ್.—ಮೂರ್ಖರು ಯಾರು ಅಂತ ಕೇಳುವುದಕ್ಕೆ ನೀವು ತಯಾರು ಇರಬೇಕು.

ಶ್ರೀ ಜೆ. ಹೆಚ್. ಪಟೇಲ್.-- ನಾವು ಯಾವಾಗಲೂ ಅದನ್ನು ಕೇಳುವುದಕ್ಕೆ ತಯಾರು ಇದ್ದೇವೆ.

ಛೇರ್‌ಮನ್.—ದಯವಿಟ್ಟು ನೀವು ಕನ್‌ಕ್ಲೂಡ್ ಮಾಡಿ.

ಶ್ರೀ ಆರ್. ಗುಂಡೂರಾವ್.—ಇಲ್ಲಿ ಮೂರ್ಖರೂ ಇರುತ್ತಾರೆ, ಮೂರ್ಖರ ಅಪ್ಪಂದಿರು ಇರುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಕುಂಬಳಕಾಯಿ ಕಳ್ಳ ಅಂದರೆ ತಾವು ಏತಕ್ಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ ?

ಶ್ರೀ ಆರ್. ಗುಂಡೂರಾವ್.—ನೀವು ಒಬ್ಬರೇ ಬುದ್ಧಿವಂತರು.

ಶ್ರೀ ಜೆ. ಹೆಚ್. ಪಟೇಲ್.— ಸ್ವಾಮಿ, ಅವರಿಗೆ ಇಲ್ಲಿ ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನನಗೆ ಇಲ್ಲಿ ಇದೆ. ಅದನ್ನು ನೀವು ಒಪ್ಪುತ್ತೀರಿ. ಅವರು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದರೂ ನಾನು ಒಬ್ಬ ಸಾಮಾನ್ಯ ಸದಸ್ಯನಾಗಿದ್ದರೂ ಸ್ಟ್ರೈಕ್ ಮಾಡುವ ಬಗ್ಗೆ ನಾನು ಭಾಷಣ ಮಾಡುತ್ತೇನೆ. ಕಾನೂನು ಇಲ್ಲಿದೆ. ಈ ಕಾನೂನಿನ ವ್ಯಾಪ್ತಿಯಲ್ಲಿ ನಾನೆಲ್ಲಿ ಬರುತ್ತೇನೆಯೋ ಎಂದು ನನಗೆ ಹೆದರಿಕೆಯಾಗುತ್ತಿದೆ. ಅಲ್ಲದೇ ಅವರನ್ನು ನೋಡಿದರೆ ನನಗೆ ಹೆದರಿಕೆಯಾಗುತ್ತದೆ.

ಛೇರ್‌ಮನ್.— ಈ ಕಾನೂನಿನ ವ್ಯಾಪ್ತಿಯಲ್ಲಿ ನೀವು ಬರುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ನಾಳೆ ಯಾರಾದರೂ ವರ್ಕರ್ಸ್ ಸ್ಟ್ರೈಕ್ ಮಾಡಿದರೆ ನಾನು ಸಪೋರ್ಟ್ ಮಾಡುತ್ತೇನೆ, ಆಗ ಈ ಕಾನೂನಿನ ಪ್ರಕಾರ ನನ್ನನ್ನು ಜೈಲಿಗೆ ಹಾಕುತ್ತಾರೆ. ನಾಗಮಂಗಲದಲ್ಲಿ ನೀವು ಏನಾದರೂ ಭಾಷಣ ಮಾಡಿದರೆ ನಿಮಗೂ ಅದೇ ಗತಿ ಆಗುತ್ತದೆ. ಆದ್ದರಿಂದ... ..

ಶ್ರೀ ಆರ್. ಗುಂಡೂರಾವ್. ನೀವು ಹೇಳಿದ್ದನ್ನು ನಾವು ಕೇಳಿಕೊಂಡು ಹೋದರೆ ಬುದ್ಧಿವಂತರು ಅಂತ ಹೇಳುತ್ತೀರಿ, ಇಲ್ಲದಿದ್ದರೆ ಇಲ್ಲ. ನಿಮ್ಮ ಆ ಕಾಲ ಹೋಯಿತು, ನಿಮ್ಮ ಹಳೆಯ ಮೌಲ್ಯಗಳೆಲ್ಲಾ ಈಗ ಹೋಯಿತು.

ಶ್ರೀ ಜೆ. ಹೆಚ್. ಪಟೇಲ್.—ಆ ಕಾಲ ಹೋಯಿತು ಅಂತ ನೀವು ಹೇಳುತ್ತೀರಲ್ಲ, ೧೯೭೭ರಲ್ಲಿ ನೀವು ಹೋಗಿದ್ದಿರಿ, ಜನ ಮತ್ತೆ ನಿಮಗೆ ಮತ ಕೊಟ್ಟರು ನೀವು ಬಂದಿರಿ, ಮತ್ತೆ ನೀವು ಅಲ್ಲಿಗೇ ಹೋಗುತ್ತೀರಿ.

ಶ್ರೀ ಆರ್. ಗುಂಡೂರಾವ್.—ನಿಮ್ಮ ಅವಸ್ಥೆಯನ್ನು ನೋಡಿ ಸಾಕಾಗಿ ಜನ ನಮಗೆ ಓಟು ಕೊಟ್ಟರು. ಆದ್ದರಿಂದ 'ನೀವು ಹೋದಿರಿ, ಬಂದಿರಿ' ಇದೆಲ್ಲಾ ಬೇಡ ಸ್ವಾಮಿ. ಈಗ ನಿಮ್ಮ ಮುಂದೆ ಇರತಕ್ಕಂಥ ವಿಷಯಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತನಾಡಿ.

ಛೇರ್‌ಮನ್.—ಮಾನ್ಯ ಸದಸ್ಯರು ಬೇಗ ಕನ್‌ಕ್ಲೂಡ್ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಈ ಒಂದು ಕಾನೂನು ಏನಿದೆ ಇದು ಸಾರ್ವತ್ರಿಕವಾಗಿ ಪ್ರಜಾತಂತ್ರ ಮತ್ತು ರಾಜ್ಯಾಂಗದ ಮೂಲ ಉದ್ದೇಶ ಏನಿದೆ ಅದಕ್ಕೆ ವಿರೋಧವಾದಂತಾಗಿದೆ. ದೇಶದಲ್ಲಿರತಕ್ಕಂಥ ರೈತರು, ಕಾರ್ಮಿಕರು ಮತ್ತು ಶ್ರಮಜೀವಿಗಳು ಏನಿದ್ದಾರೆ ಅವರ ಹಿತರಕ್ಷಣೆಯನ್ನು ಮಾಡತಕ್ಕಂಥ ಕಾನೂನು ಇದಲ್ಲ. ಇದು ಅವರನ್ನು ತುಳಿಯತಕ್ಕಂಥ ಮಾರಕಾಸ್ತ್ರವಾಗಿದೆ. ಇದು ನೋಡುವುದಕ್ಕೆ ಚೆನ್ನಾಗಿ ಕಾಣುತ್ತದೆ, ಅಲ್ಲದೇ ಇದೊಂದು ಸಿಹಿಯಾದ ವಿಷದ ಗುಳಿಗೆ. ಇಂತಹ ಕಾನೂನನ್ನು ಜನರಿಗೆ ಕೊಡುವುದಕ್ಕೆ ನಾವಂತೂ ತಯಾರು ಇಲ್ಲ. ನಾವು ಇದನ್ನು ಕಟುವಾಗಿ ಒಳಗೂ ವಿರೋಧ ಮಾಡುತ್ತೇವೆ, ಸಂದರ್ಭ ಬಂದರೆ ಹೊರಗೂ ವಿರೋಧ ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬಿಲ್, ಇದು ಮೊದಲನೆಯದಾಗಿ ಆ್ಯಂಟಿಲೇಬರ್ ಬಿಲ್ ಮತ್ತು ಎರಡನೆಯದಾಗಿ ಆ್ಯಂಟಿ ಕಾನ್‌ಸ್ಟಿಟ್ಯೂಷನಲ್ ಬಿಲ್ ಆಗಿದೆ. ಈ ೨ ಕಾರಣಗಳಿಗಾಗಿ ನಾನು ಇದನ್ನು ವಿರೋಧಿಸುತ್ತಿದ್ದೇನೆ. ಯಾವುದೇ ಒಂದು ಮಸೂದೆಯನ್ನು ಮಾಡಿ ಒಂದು ಕಾರಣವನ್ನು ತೋರಿಸುವ ಸಂದರ್ಭದಲ್ಲಿ ಅದಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿರಬೇಕಾಗಿತ್ತು. ಅದನ್ನು ಮಾಡದೇ ಇರುವುದರಿಂದ ಇದೊಂದು ಏಕಮುಖವಾದ ಬಿಲ್ ಆಗಿದೆ. ಈ ಏಕಮುಖವಾದ ಬಿಲ್ಲನ್ನು ತಂದು ಸರ್ಕಾರ ಕಾರ್ಮಿಕರ ಹಕ್ಕುಬಾಧ್ಯತೆಗಳನ್ನು ತನ್ನ ಕರವಶ ಮಾಡಿಕೊಳ್ಳುವುದಕ್ಕೆ ಇದರಲ್ಲಿ ಕಾನೂನು ಇರುವುದನ್ನು ನಾವು ಕಾಣುತ್ತಿದ್ದೇವೆ. ನಾವು ರಾಜ್ಯಾಂಗಕ್ಕೆ ವಿರುದ್ಧವಾದ ಮಾತನ್ನು ಹೇಳುವಾಗ ನಮ್ಮ ರಾಜ್ಯಾಂಗ ಬಹಳಮಟ್ಟಿಗೆ ತತ್ವದ ಆಧಾರದ ಮೇಲೆ ಇರತಕ್ಕಂಥಾದ್ದನ್ನು, ಅದರಲ್ಲೂ ಬ್ರಿಟೀಷ್ ತತ್ವಗಳ ಆಧಾರದ ಮೇಲೆ ಇರತಕ್ಕಂಥಾದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಬ್ರಿಟೀಷ್ ತತ್ವಗಳಲ್ಲಿ ರೈಟ್ ಆಫ್ ಸ್ಟ್ರೈಕ್ ಬಗ್ಗೆ ಹೇಳಿದ್ದಾರೆ. ಬ್ರಿಟೀಷ್‌ನಲ್ಲಿರತಕ್ಕಂಥ ಅಲ್ಸ್‌ಬರೀಸ್ ಲಾಸ್ ಆಫ್ ಇಂಗ್ಲೆಂಡ್ ಅವರು ಇದರ ಬಗ್ಗೆ ವ್ಯಾಖ್ಯಾನ ಕೊಟ್ಟಿದ್ದಾರೆ. Second Edition, Vol. 6-Page 392.

> Right to Strike – "The right to strike, or the right of the subject to with hold his labour, so long as he commits no breach of contract, or tort, or crime (c).

ಇದನ್ನು ನಾವು ಗಮನದಲ್ಲಿಡಬೇಕಾದುದು ಅವಶ್ಯ. ಬ್ರಿಟೀಷ್ ಸಾಮ್ರಾಜ್ಯದಲ್ಲಿ ರೈಟ್ ಆಫ್ ಸ್ಟ್ರೈಕ್ ಎನ್ನತಕ್ಕಂಥಾದ್ದು 'his has been regarded as one of the important principles and fundamental character of the British subject. ಈ ಒಂದು ತತ್ವದ ಆಧಾರದ ಮೇಲೆ ನಾವು ರಾಜ್ಯಾಂಗವನ್ನು ರಚನೆ ಮಾಡಿದ್ದೇವೆ ಅದರಂತೆ ಇವತ್ತು ತಾವು ಕಾರ್ಮಿಕರಿಗೆ ಇರತಕ್ಕಂಥ ಹಕ್ಕುಬಾಧ್ಯತೆಗಳು ಏನಿದೆ ಅದನ್ನು ಕಿತ್ತುಕೊಳ್ಳತಕ್ಕಂಥ ಪ್ರಯತ್ನ ಮಾಡಿ

ದ್ದೀರಿ. ಇದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಆದ್ದರಿಂದ ಈ ಸದನದಲ್ಲಿ ಈ ಒಂದು ಮಸೂದೆಯನ್ನು ಅಂಗೀಕರಿಸುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಇಲ್ಲಿ ಅಂಗೀಕರಿಸಿದ್ದಾಗ್ಯೂ ಕೂಡ ಇದು ನಿಲ್ಲತಕ್ಕಂಥಾದ್ದಲ್ಲ. ಹಿಂದಿನ ಕ್ಲಾಸ್ ೯ (೧) ರಂತೆ ಕೇಂದ್ರ ಸರ್ಕಾರದವರು ಇಂಡಸ್ಟ್ರಿಯಲ್ ರಿಲೇಷನ್ಸ್ ಬಿಲ್ಲನ್ನು ಅಲ್ಲಿ ತಂದಂಥ ಕಾಲಕ್ಕೆ ಇದೇ ರೀತಿಯ ನಿರ್ಣಯ ಬಂದಿತ್ತು. ಅದರಲ್ಲಿ ಹೀಗೆ ಹೇಳಿದೆ.

> Chapter 8, Clause-IX (i) - " No employee, employed in any essential service shall go on strike in breach of contract. "

ಇದನ್ನೇ ನೀವು ತಂದಿದ್ದೀರಿ.

SRI B. B. SAYANAK.—Mr. Chairman, I rise on a point of order. Now, again we will have to come at 3-00 p. m. How long should we sit here now ?

CHAIRMAN —If all the members agree, we shall sit upto 1-30 p.m. otherwise we can rise now.

ಶ್ರೀ ಜಯದೇವರಾಜ ಅರಸ್.—ಈಗ ಗಂಟೆ ೧-೧೦ ಆಯಿತು. ಈಗ ತಾವು ಹೌಸನ್ನು ಅಡ್ಜರ್ನ್ ಮಾಡಿದರೆ ನಾವು ಮತ್ತೆ ೩ ಗಂಟೆಗೆ ಬರಬೇಕೋ ಅಥವಾ ೩-೩೦ ಗಂಟೆಗೆ ಬರಬೇಕೋ ಹೇಗೆ ಸ್ವಾಮಿ.

ಶ್ರೀ ಪಂಪಾಪತಿ.—ಸ್ವಾಮಿ, ಇಲ್ಲಿ ಬಹಳ ಮುಖ್ಯವಾದ ವಿಚಾರ ಚರ್ಚೆಯಾಗುತ್ತಿದೆ. ತಾವು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ಸಭೆಯನ್ನು ಮುಗಿಸಬೇಕು ಎನ್ನುವುದಾದರೆ ಅದು ಸಾಧ್ಯವಿಲ್ಲ.

ಛೇರ್‌ಮನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನ ಆಗಿರುತ್ತದೆಯೋ ಅದಕ್ಕೆ ನೀವೂ ನಾವೂ ಎಲ್ಲರೂ ಬದ್ಧರು. ಅದರಂತೆ ನಡೆಯಬೇಕು.

ಶ್ರೀ ಪಂಪಾಪತಿ.—ನಾಳೆ ಬೇಕಾದರೆ ಇದನ್ನು ಮುಂದುವರಿಸಿಕೊಳ್ಳೋಣ ಎಂದು ನಮ್ಮ ಅಧ್ಯಕ್ಷರು ಹೇಳಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಮಾತನಾಡತಕ್ಕಂಥವರೆಲ್ಲರಿಗೂ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಚೇರ್‌ಮನ್.—ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದರೆ ನೀವು ಕಾಲದ ಮಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಜಯದೇವರಾಜ ಅರಸ್.—ಸ್ವಾಮಿ, ಈಗ ಹೌಸನ್ನು ಅಡ್ಜರ್ನ್ ಮಾಡಿ, ಇದನ್ನೇ ೩ ಗಂಟೆಗೆ ತೆಗೆದುಕೊಳ್ಳೋಣ.

ಛೇರ್‌ಮನ್.—ಈಗ ಮಾನ್ಯ ಗಂಗಾಧರನ್‌ರವರು ಕನ್‌ಕ್ಲೂಡ್ ಮಾಡಲಿ. ನೀವೆಲ್ಲಾ ಮಾತನಾಡಿದಮೇಲೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗುತ್ತದೆ. ಅವರಿಗೆ ಸಾಕಷ್ಟು ಕಾಲ ಬೇಕಾಗುತ್ತದೆ. ಅದಕ್ಕೆ ಎಷ್ಟು ಕಾಲ ಬೇಕೆಂಬುದನ್ನು ನಾವು ಅಂದಾಜು ಮಾಡಿಕೊಂಡಿದ್ದೇವೆ. ಆದ್ದರಿಂದ ನೀವುಗಳು ಕಾಲದ ಮಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕು ಮತ್ತು ನಡುನಡುವೆ ವಾಕ್ಯಗಳ ಪುನರುಚ್ಚಾರ ಮಾಡತಕ್ಕಂಥಾದ್ದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ.

ಶ್ರೀ ಜಯದೇವರಾಜ ಅರಸ್.—ಸ್ವಾಮಿ, ಈಗ ಹೌಸನ್ನು ಅಡ್ಜರ್ನ್ ಮಾಡಿ, ನಾವು ಮತ್ತೆ ೩ ಗಂಟೆಗೆ ಸೇರೋಣ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ೯ ಗಂಟೆಯಿಂದ ಸಭೆ ಸೇರಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ೧½ ಗಂಟೆಗಳ ಕಾಲ ಮಾತನಾಡಿದ್ದಾರೆ. ಅವರ ಪಕ್ಷದ ಇನ್ನೂ ಕೆಲವು ಜನ ಮಾನ್ಯ ಸದಸ್ಯರುಗಳು ಮಾತನಾಡಬೇಕು ಎಂದು ಹೇಳುತ್ತಿದ್ದಾರೆ. ಇವತ್ತು ನಾವು ಇದನ್ನು ಮುಗಿಸಬೇಕಾಗುತ್ತದೆ. ಈಗ ೧-೩೦ ಗಂಟೆಯವರೆಗೆ ಈ ಚರ್ಚೆ ಮುಂದುವರಿಯಬಹುದು.

ಅವರೆಲ್ಲರೂ ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ, ನನಗೂ $\frac{3}{4}$ ಗಂಟೆಯ ಕಾಲಾವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಅದನ್ನು ಅನುಸರಿಸಿ ತಾವು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಈಗ ಒಂದೂವರೆ ಗಂಟೆವರೆಗೆ ಎಂದು ನಿಗದಿ ಮಾಡಿದರೆ ನಮಗೆ ಮಾತನಾಡುವುದಕ್ಕೆ ಆಗುವುದಿಲ್ಲ. ನಮ್ಮ ಹತ್ತಿರ ಹೆಚ್ಚು ಪಾಯಿಂಟ್ಸ್ ಇವೆ, ಹೇಳಬೇಕಾಗಿದೆ. ಇದು ಬಹಳ ಮುಖ್ಯವಾದ ಬಿಲ್.

ಛೇರ್‌ಮನ್.—ಮಾನ್ಯ ವಿರೋಧಪಕ್ಷದ ಮುಖಂಡರು ಮಾತನಾಡಿದ್ದಾರೆ. ಆಮೇಲೆ ಪಕ್ಷದ ಇತರ ಸದಸ್ಯರು ಮಾತನಾಡಿದ್ದಾರೆ. ಎಲ್ಲರೂ ಮಾತನಾಡಬೇಕು ಅಂದರೆ ಹೇಗೆ ?

ಶ್ರೀ ಪಂಪಾಪತಿ.—ಅವರವರೇ ಮಾತನಾಡಬೇಕು ಎಂದರೆ ನಾವೇಕೆ ಇಲ್ಲಿಗೆ ಬರಬೇಕು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಇದು ಬಹಳ ಮುಖ್ಯವಾದ ಮಸೂದೆ. ಇದರ ಬಗ್ಗೆ ಕೆಲವು ಅಂಶಗಳನ್ನು ಹೇಳಬೇಕಾಗಿದೆ.

ಛೇರ್‌ಮನ್.—ಈ ಮಸೂದೆ ಅಮುಖ್ಯ ಎಂದು ನಾನು ಹೇಳುವುದಿಲ್ಲ. ಉಪಯೋಗಕ್ಕೆ ಬಾರದ ಮಾತುಗಳನ್ನಾಡುವುದಕ್ಕೆ ಬಂದಿದ್ದೀರಿ ಎಂದು ನಾನು ಹೇಳುವುದಿಲ್ಲ. ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದೀರಿ ಒಪ್ಪಿಕೊಳ್ಳೋಣ. ಆದರೆ ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಒಂದು ಪಕ್ಷದಲ್ಲಿ ೨-೩ ಜನರು ಮಾತನಾಡಿದರೆ ಸಾಕು

ಶ್ರೀ ಪಂಪಾಪತಿ.—ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಪಿ. ರಾಮದೇವ್.—ನನ್ನ ಕ್ಷೇತ್ರದಲ್ಲೂ ಕಾರ್ಮಿಕರಿದ್ದಾರೆ. ಇದರ ಬಗ್ಗೆ ಮಾತನಾಡಲಿಲ್ಲ ಅಂದರೆ ನನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಾನು ಟ್ರೇಡ್ ಯೂನಿಯನ್ ಲೀಡರ್. ನಾನು ಮಾತನಾಡದೇ ಹೋದರೆ ಕಷ್ಟಕ್ಕೆ ಬರುತ್ತದೆ.

ಛೇರ್‌ಮನ್.—ಪತ್ರಿಕೆಯಲ್ಲಿ ಬಂದರೆ ರಕ್ಷಣೆ ಸಿಗುತ್ತದೆಯೇ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಾನು ಇದರ ಬಗ್ಗೆ ಮಾತನಾಡದೇ ಹೋದರೆ ಕಾರ್ಮಿಕರು ನನ್ನನ್ನು ಕ್ಷಮಿಸುವುದಿಲ್ಲ, ನನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಲೇಬೇಕು.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಅಧ್ಯಕ್ಷರು.—ಹೌಸ್ ಕನ್ಸಲ್ಟ್ ಮಾಡಿ ಅವಕಾಶ ಕೊಡುತ್ತೇನೆ. ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕು ಎಂದು ಹೇಳಿದ್ದೇವೆ. ಅದನ್ನು ಒಪ್ಪಿಕೊಂಡರೆ ಹೆಚ್ಚಿನ ಚರ್ಚೆಗೆ ಅವಕಾಶವಿಲ್ಲ ಎಂದು ಕಾಣಿಸುತ್ತದೆ. ಒಂದೂವರೆ ಗಂಟೆವರೆಗೆ ಚರ್ಚೆಯಾಗಲಿ, ಮತ್ತೆ ೩ ಗಂಟೆಗೆ ಬಂದಮೇಲೆ ಬೇಕಾದರೆ......

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್. ಹತ್ತೂವರೆ ಗಂಟೆಯಿಂದ ಬೆಂಗಳೂರು ಡ್ರೈ ವಿಷಯವಾಗಿ ನಾನು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಸಂಧಾನದಲ್ಲಿ ನಿರತನಾಗಿದ್ದೆ ನನಗೆ ಅವಕಾಶ ಸಿಕ್ಕಲಿಲ್ಲ. ನಾನು ಖಂಡಿತವಾಗಿಯೂ ಮಧ್ಯಾಹ್ನ ಮಾತನಾಡಲೇಬೇಕು. ಇಲ್ಲದೇಹೋದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಇಂಡಿವಿಜುಯಲ್ಲಾಗಿ ಹೇಳಿದಿರಿ. ಸಮಯವನ್ನು ನೋಡಿಕೊಂಡು ಕೊಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲರೂ ಮಾತನಾಡದೇಹೋದರೂ ಕೆಲವರಾದರೂ ಮಾತನಾಡಬೇಕು; ಅವರ ಅಭಿಪ್ರಾಯ ಹೇಳಬೇಕು. ಮಾನ್ಯ ದೇವೇಗೌಡರು ಮಾತನಾಡಬೇಕು, ಅವರ ಹೆಸರೂ ಇದೆ. ಮತ್ತೆ ಆರೇಳು ಜನ ಮಾತನಾಡುವವರು ಇದ್ದಾರೆ. ಈಗಾಗಲೇ ಒಂದೂಕಾಲು ಗಂಟೆಯಾಗಿದೆ. ೩ ಗಂಟೆಗೆ ಮತ್ತೆ ಸೇರಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇವತ್ತು ೩ ಗಂಟೆಗೆ ಮತ್ತೆ ಸೇರಿ ೩ ರಿಂದ ೬ ಗಂಟೆವರೆಗೆ ಕೂರುತ್ತೇವೆ. ಅಷ್ಟರೊಳಗೆ ಚರ್ಚೆ ಮುಗಿಯಬಹುದು ಎಂದು ನನ್ನ ಭಾವನೆ,

ಮುಗಿಸೋಣ. ನಾನು ಸಲಹೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಅವರ ಇಷ್ಟ, ಬೇಕಾದರೆ ವತ್ತೇ ರಿಪ್ಲೈ ಕೊಡಬೇಕು ಅಂದರೆ ಕೊಟ್ಟುಕೊಳ್ಳಲಿ, ಆದರೆ ಇವತ್ತು ಚರ್ಚೆ ಮುಗಿಸೋಣ. ನಾಳೆ ರಿಪ್ಲೈ ಕೊಡಲಿ ಎನ್ನುವುದು ನನ್ನ ಸಲಹೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನದೊಂದು ಬಹಳ ಮುಖ್ಯವಾದ ಮ್ಯಾಟರ್ ಇದೆ, ಅದನ್ನು ತೆಗೆದು ಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ಹಿಂದೆ ತೀರ್ಮಾನ ಮಾಡಿದಹಾಗೆ ಇವತ್ತು ಸಭೆ ಮುಗಿಯ ಬೇಕಾಗಿತ್ತು. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಈಗ ಮತ್ತೆ ೩ ಗಂಟೆಗೆ ಸೇರೋಣ. ೫ ಗಂಟೆವರೆಗೆ ಬೇಕಾದರೆ ಚರ್ಚೆ ಮಾಡೋಣ. ನನಗೆ ಉತ್ತರ ಕೊಡುವುದಕ್ಕೆ ಮುಕ್ಕಾಲು ಗಂಟೆ ಅವಕಾಶ ಸಿಕ್ಕಿದರೆ ಸಾಕು. ೫ ಗಂಟೆಗೆ ಚರ್ಚೆ ಮುಗಿಸುವುದಾದರೆ ಮುಗಿಸಿ, ನಮ್ಮ ಕಡೆಯಿಂದ ಯಾರೂ ಮಾತನಾಡುವುದಿಲ್ಲ. ಅವರ ಕಡೆ ಯಾರಾದರೂ ಎರಡು ಜನರು ಮಾತನಾಡಿದರೆ ಸಾಕು. ಮಾತನಾಡುವವ ರೆಲ್ಲಾ ಮಾತನಾಡಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಶಿಕ್ಕಿಲಾಯರವರು, ಮಾನ್ಯ ಆರ್ಮುಗಂರವರು, ಮಾನ್ಯ ಬೊಮ್ಮಾಯಿಯವರು, ಮಾನ್ಯ ಕೊಡಗಿಯವರು ಮಾತನಾಡಿದ್ದಾರೆ. ಮಾನ್ಯ ದೇವೇಗೌಡರು ಮಾತನಾಡಬೇಕು ಆದುದರಿಂದ ಐದು, ಐದೂಕಾಲು ಗಂಟೆವರೆಗೆ ಮುಗಿಸಿ ಪರ್ವಾಗಿಲ್ಲ. ಆರು, ಏಳು ಗಂಟೆವರೆಗೆ ಬೇಕಾದರೆ ಕುಳಿತುಕೊಳ್ಳೋಣ, ನಾಳೆ ಪುನಃ ಸೇರುವ ಅವಶ್ಯಕತೆ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಸೆಂಬ್ಲಿ ಇವತ್ತೇ ಮುಗಿಯಬೇಕೇ.

ಅಧ್ಯಕ್ಷರು.—ಅನ್‌ಫಾರ್ಚುನೇಟ್ಲಿ ಎರಡು ದಿವಸ ಮುಂದೂಡಬೇಕಾಗಿ ಬಂತು.

ಶ್ರೀ ಡಿ. ದೇವರಾಜ ಅರಸ್.—ಇವತ್ತೇ ಅಸೆಂಬ್ಲಿ ಮುಗಿಯಬೇಕು ಎಂದು ಇದ್ದರೂ ಸಹ ಮಧ್ಯೆ ಕೆಲವು ಘಟನೆಗಳು ನಡೆದಿದ್ದರಿಂದ ನಿಧಾನವಾಗಬೇಕಾಗಿ ಬಂತು. ಖಾಸಗಿಯಾಗಿ ಸದಸ್ಯರುಗಳು ಕಳಿಸಿರ ತಕ್ಕ ಬಹಳ ಮುಖ್ಯವಾದ ವಿಚಾರಗಳಿವೆ. ಎರಡು ಹೊತ್ತು ಕುಳಿತುಕೊಳ್ಳುವುದಕ್ಕೆ ನಾವು ಒಪ್ಪಿಕೊಂಡ ಮೇಲೆ ನಾಳೆ ಬೆಳಿಗ್ಗೆ ಕುಳಿತುಕೊಳ್ಳುವುದಕ್ಕೆ ಅವರೂ ಒಪ್ಪಿಕೊಳ್ಳಲಿ. ಪ್ರಿವಿಲೇಜ್ ಮೋಷನ್ ಇದೆ, ಮತ್ತೆ ಕೆಲವು ಕಾಲಿಂಗ್ ಅಟೆನ್‌ಷನ್ ಮೋಷನ್‌ಗಳಿವೆ, ಇವತ್ತೇ ಮುಗಿಸಿಬಿಡಬೇಕು ಅಂದರೆ ಹೇಗೆ ಮುಗಿಸುವುದಕ್ಕೆ ಆಗುತ್ತದೆ ಸ್ವಾಮಿ. ಅವರೇ ಹೇಳಿದಹಾಗೆ, ಈ ಮಸೂದೆ ಅವರದು ನಮ್ಮದು ಎಲ್ಲಾ ಸೇರಿದರೆ ೬ ಗಂಟೆಯೊಳಗೆ ಮುಗಿಯಬಹುದು, ಬಾಕೀದೆಲ್ಲಾ ಯಾವಾಗ ತೆಗೆದುಕೊಳ್ಳುವುದು. ಆದುದ ರಿಂದ ಇವತ್ತು ಮುಗಿಸುವುದಕ್ಕೆ ಆಗುವುದಿಲ್ಲ; ಮೂರು, ನಾಲ್ಕು ಸಬ್ಜೆಕ್ಟ್‌ಗಳಿವೆ. ತಮ್ಮ ಮುಖೇನ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ನಾಳೆ ಬೆಳಿಗ್ಗೆ ಸಭೆ ಸೇರಿ ಮಧ್ಯಾಹ್ನದವರೆಗೆ ಕುಳಿತು ಕೊಂಡು ಇರತಕ್ಕಂಥ ಸಬ್ಜೆಕ್ಟ್ಸ್‌ನ್ನು ತೆಗೆದುಕೊಂಡು ಮುಗಿಸೋಣ.

ಅಧ್ಯಕ್ಷರು.—ಇವತ್ತು ಈ ಬಿಲ್ ಮುಗಿಸಿ, ಮಾನ್ಯ ಬಸವಲಿಂಗಪ್ಪನವರ ನೋಟೀಸನ್ನು ತೆಗೆದು ಕೊಳ್ಳೋಣ.

ಶ್ರೀ ಆರ್. ಗುಂಡೂರಾವ್.—ನಾಳೆ ಇಲ್ಲದೇ ಹೋದರೆ ಇನ್ನೂ ನೂರು ದಿವಸ ಕೂರೋಣ. ಮೊನ್ನೆ ಆದ ತೀರ್ಮಾನದ ಪ್ರಕಾರ ಇವತ್ತು ಸಭೆ ಮುಗಿಯಬೇಕಾಗಿತ್ತು. ಇವತ್ತು ಬೆಳಿಗ್ಗೆ ಮುಗಿಸೋಣ ಎಂದು ತೀರ್ಮಾನವಾಗಿತ್ತು. ವಿಷಯಗಳು ಮುಖ್ಯ ಎಂದು ಹೇಳುತ್ತಾ ಹೋದರೆ ಅನೇಕ ವಿಷಯಗಳಿರುತ್ತವೆ. ಬೇಕಾದರೆ ೨೭ನೇ ತಾರೀಖಿನವರೆಗೆ ಕುಳಿತುಕೊಳ್ಳೋಣ, ಆದುದರಿಂದ ಯಾವ ವಿಷಯ ಮುಖ್ಯವಾಗಿದೆ ಅದನ್ನು ಮುಗಿಸೋಣ ಎಂದು ಒಪ್ಪಿಕೊಂಡಿದ್ದೇವೆ. ಅವರ ದೃಷ್ಟಿ ಯಲ್ಲಿ ಎಲ್ಲವೂ ಮುಖ್ಯ ಅಂದರೆ ಪ್ರತಿಯೊಂದು ವಿಷಯವೂ ಬಂದೇ ಬರುತ್ತದೆ. ಮಾನ್ಯ ಫರ್ನಾಂಡಿಸ್ ಅವರು ಹಾಲಿನ ಡೈರಿ ವಿಷಯ ಬಹಳ ಮುಖ್ಯ ಎಂದು ಹೇಳಿದರು, ಇನ್ನೊಬ್ಬರು ಕೊಲೆಯಾಗಿರುವ ವಿಷಯ ಬಹಳ ಮುಖ್ಯ ಎಂದು ಹೇಳಿದರು. ನಾಳೆ ಇನ್ನೊಂದು ಸ್ಟ್ರೈಕ್ ಆಗಿರುವ ವಿಷಯ ಬರುತ್ತದೆ, ಅದೂ ಮುಖ್ಯ ಎಂದು ಹೇಳಬಹುದು. ಆದ್ದರಿಂದ ಇದಕ್ಕೆ ಒಂದು ಮಿತಿ ಹಾಕಿಕೊಳ್ಳಬೇಕು. ಆದ್ದರಿಂದ ಈ ವಿಷಯ ಬಹಳ ಮುಖ್ಯವಾಗಿರುವುದರಿಂದ ಇವತ್ತು ಬೆಳಿಗ್ಗೆ ಮತ್ತು ಮಧ್ಯಾಹ್ನ ಸೇರಿ ಚರ್ಚೆಮಾಡಿ ಮುಗಿಸೋಣ ಎಂದು ತೀರ್ಮಾನಮಾಡಿತ್ತು. ಇವತ್ತು ೫ ಗಂಟೆವರೆಗೆ ಚರ್ಚೆ ಮುಗಿಸಿ, ನಂತರ ರಿಪ್ಲೈ ಕೊಟ್ಟು ೬ ಗಂಟೆಗೆ ಮುಗಿಸೋಣ, ಈಗೇನೂ ಪ್ರೊರೋಗ್ ಆಗುವುದಿಲ್ಲ, ಪುನಃ ಜೂನ್ ೯ಕ್ಕೆ ಸೇರುತ್ತೇವಲ್ಲ.

ಶ್ರೀ ಡಿ. ದೇವರಾಜ ಅರಸ್.—ನಾಳೆ ಬೆಳಿಗ್ಗೆ ಸೇರುವುದಕ್ಕೆ ಏನು ಕಷ್ಟ.

ಶ್ರೀ ಆರ್. ಗುಂಡೂರಾವ್.—ಇನ್ಯಾವುದಾದರೂ ಮಹತ್ತರವಾದ ವಿಚಾರಗಳು ಬಂದರೆ ಅದನ್ನು ತೆಗೆದುಕೊಳ್ಳುವುದಿಲ್ಲ ಎಂದು ಅಶ್ಯೂರೆನ್ಸ್ ಕೊಟ್ಟರೆ ಆಗಬಹುದು.

ಶ್ರೀ ಡಿ. ದೇವರಾಜ ಅರಸ್.—ಇನ್ಯಾವುದಾದರೂ ಮಹತ್ತರವಾದ ವಿಷಯ ಬರುತ್ತದೆಂದು ನಾನು ಕನಸು ಕಂಡಿದ್ದೇನೆಯೇ. ನಾವು ಕೂರುವ ಟೈಮಿನಲ್ಲಿ ಬಂದರೆ ತೆಗೆದುಕೊಳ್ಳೋಣ. ಈಗಾಗಲೇ ಯಾವ ವಿಷಯಗಳು ಸದನದ ಮುಂದೆ, ಮಾನ್ಯ ಅಧ್ಯಕ್ಷರ ಮುಂದೆ ಇವೆ ಆ ವಿಷಯಗಳನ್ನು ತೆಗೆದು ಕೊಳ್ಳಿ ಎಂದು ಹೇಳಿದೆ. ಅಷ್ಟೆ,

ಕೆಲವು ಕಾಲಿಂಗ್ ಆಟೆನ್ಷನ್ ಇವೆ, ಮತ್ತೆ ಕೆಲವು ಪ್ರಿವಿಲೇಜ್ ಮೋಷನ್ ಇವೆ, ಅವುಗಳನ್ನೆಲ್ಲಾ ಇವತ್ತು ಮುಗಿಸುವುದಕ್ಕೆ ಆಗದಿದ್ದರೆ ನಾಳೆ ಬೆಳಿಗ್ಗೆ ಕುಳಿತು ಮುಗಿಸೋಣ. ಬಹುಶಃ ಬೆಳಕು ಹರಿಯು ವಷ್ಟು ಹೊತ್ತಿಗೆ ಏನು ಆಗುತ್ತದೆ, ಏನಾಗುವುದಿಲ್ಲವೆಂದು ಫೋರ್‌ಕ್ಯಾಸ್ಟ್ ಮಾಡಿ ಹೇಳುವುದಕ್ಕಾಗುವು ದಿಲ್ಲ. ಹಾಗೂ ಒಂದುವೇಳೆ ಏನಾದರೂ ಮಹತ್ತರವಾದ ಘಟನೆ ನಡೆದರೆ ಪುನಃ ನಾಳೆ ಬೆಳಿಗ್ಗೆ ಒಂದು ಗಂಟೆ ಹೆಚ್ಚಿಗೆ ಕುಳಿತುಕೊಳ್ಳಬೇಕಾಗುತ್ತದೆಂದು ಹೇಳಿದರೂ ಹೇಳಬಹುದು. ಆದುದರಿಂದ ನನ್ನ ಸಲಹೆ ಏನೆಂದರೆ ಇವತ್ತು ಆಗದಿದ್ದರೆ ನಾಳೆ ಬೆಳಿಗ್ಗೆ ಕುಳಿತುಕೊಂಡು ಮುಗಿಸೋಣ.

ಶ್ರೀ ಆರ್. ಗುಂಡೂರಾವ್.—ನಾಳೆ ಬೆಳಿಗ್ಗೆ ಬೇಕಾದರೆ ಈಗಿರುವ ಎರಡು ಮೂರು ಮುಖ್ಯವಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ಮುಗಿಸೋಣ ಮತ್ತೆ ಬೇರೆ ವಿಷಯ ಪ್ರಸ್ತಾಪ ಮಾಡಿದರೆ ಅದಕ್ಕೆ ಸರ್ಕಾರ ಸಿದ್ಧವಾಗಿಲ್ಲ.

ಅಧ್ಯಕ್ಷರು.—ಇಲ್ಲ ಅಜೆಂಡಾ ಪ್ರಕಾರವೇ ಹೋಗೋಣ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಮೂರು ಪ್ರಾಮುಖ್ಯವಾದ ವಿಷಯಗಳನ್ನು ಇಲ್ಲಿ ಚರ್ಚೆ ಮಾಡಬೇಕಾಗಿರುವುದರಿಂದ ಅದು ನಾಳೆಗೇ ಮುಗಿಯುವುದಿಲ್ಲ. ಇವತ್ತು ನಾನು ಸರ್ಕಾರದ ಮೇಲೆ ದೋಷ ಕೊಡುವುದಕ್ಕೆ ತಯಾರಾಗಿಲ್ಲ ಏತಕ್ಕೆಂದರೆ ನನ್ನ ಅನುಭವದಲ್ಲಿ ಹೇಳುವುದಾದರೆ ಈ ಬಿಲ್ಲಿನ ಮೇಲೆ ಇಲ್ಲಿಯವರೆಗೆ ೪ ಗಂಟೆಗಳ ಕಾಲಾವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ಇದು ಬಹಳ ಪ್ರಾಮುಖ್ಯವಾದ ಬಿಲ್ ಆಗಿರುವುದರಿಂದ ಮತ್ತು ಇದರಿಂದ ಕಾರ್ಮಿಕರ ಮೇಲೆ ಕೆಲವೊಂದು ದುಷ್ಪರಿಣಾಮವನ್ನು ಬೀರುವುದರಿಂದ ನಾವು ಇನ್ನು ಹೆಚ್ಚಿಗೆ ಜನ ಮಾತನಾಡಬೇಕಾಗಿದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದು ಅಲ್ಲದೆ ಇನ್ನು ಮುಖ್ಯವಾದ ಪ್ರಿವಿಲೇಜ್ ಮೋಷನ್ ಮತ್ತು ರಿಜರ್ವೇಷನ್ ಬಗ್ಗೆ ಮಾತನಾಡಬೇಕಾಗಿದೆ. ಆದುದರಿಂದ ಇವತ್ತು ಒಂದು ವಿಷಯವನ್ನು ತೆಗೆದು ಕೊಂಡು ಮುಗಿಸಿದರೆ ನಾಳೆ ಎರಡು ಮುಗಿಸುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಆಮೇಲೆ ತಮ್ಮನ್ನೆಲ್ಲಾ ಕರೆಯುತ್ತೇನೆ ಆಗ ನಾವು ಇದರ ಬಗ್ಗೆ ತೀರ್ಮಾನ ತೆಗೆದು ಕೊಳ್ಳೋಣ. ೩ ಗಂಟೆಗೆ ಬಿಜಿನಸ್ ಅಡ್ವೈಜರಿ ಮೀಟಿಂಗ್ ಕರೆಯುತ್ತಿದ್ದೇನೆ ಆಗ ಮಾತನಾಡೋಣ ಈಗ ಸಭೆಯು ಅಡ್ಜರ್ನ್ ಆಗಿ ಪುನಃ ೩ ಗಂಟೆಗೆ ಸೇರುವುದು.

(ಸಭೆಯು ೧-೨೫ ನಿಮಿಷಕ್ಕೆ ಅಡ್‌ಜರ್ನ್ ಆಗಿ ಪುನಃ ಮಧ್ಯಾಹ್ನ ೩ ಗಂಟೆಗೆ ಸೇರಲು ನಿರ್ಧರಿಸಿ ಮೇಲೆದ್ದಿತು.)

೩-೦೦ ಪಿ.ಎಂ.

(ಸಭೆಯು ಮಧ್ಯಾಹ್ನ ೩-೦೦ ಗಂಟೆಗೆ ಪುನಃ ಸೇರಿತು)

(ಅಧ್ಯಕ್ಷ ಪೀಠದಲ್ಲಿ ಶ್ರೀ ವೆಂಕಟರಮಣರವರು ಇದ್ದರು)

† ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ. ಈ ಶಾಸನವು ಹೇಗೆ ಕಾರ್ಮಿಕ ವಿರೋಧಿ ಮತ್ತು ರಾಜ್ಯಾಂಗ ವಿರೋಧಿಯಾಗುತ್ತದೆಂಬುದನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದೆ. ಇದರಲ್ಲಿ ಈ ಮಾತನ್ನು ಹೇಳುತ್ತಾ ಈ ಕಾನೂನು ತರುವ ಉದ್ದೇಶವನ್ನು ಹೇಳಿದ್ದಾರೆ.

"To prevent the workers of the Karnataka Electricity Board, the Bangalore Water Supply and Sewerage Board, the Karnataka State Road Transport Corporation and drivers

of transport services, including taxis and autorickshaws and other similar services to be notified by the Govt. from going on snap strikes frequently''

ಎಂಬ ಒಂದು ಕಾರಣವನ್ನು ಕೊಟ್ಟಿದ್ದಾರೆ.

(ವಿದ್ಯುಚ್ಛಕ್ತಿ ಸರಬರಾಜು ಬಂದ್ ಆಯಿತು)

ಶ್ರೀ ಪಿ. ರಾಮದೇವ್.— ಅಸೆಂಬ್ಲಿ ಪ್ರಾರಂಭವಾದಾಗಿನಿಂದ ದಿನಕ್ಕೆ ಒಂದಿಪ್ಪತ್ತು ಸಾರಿ ಲೈಟ್ ಹೋಗುತ್ತಿರುತ್ತದೆ. ಆದರೂ ಕೂಡ ಯಾರೂ ಈ ಕಡೆ ಗಮನ ಕೊಡುತ್ತಿಲ್ಲ. ತಾವಾದರೂ ಈ ಕಡೆ ಗಮನ ಕೊಟ್ಟು ಸಭೆಯನ್ನಾದರೂ ಅಡ್ಜರ್ನ್ ಮಾಡಿ. ಇಲ್ಲೇ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳೂ ಕುಳಿತಿದ್ದಾರೆ. ಅವರನ್ನು ತಮ್ಮ ಮುಖಾಂತರ ಕೇಳುತ್ತೇನೆ, ಅಸೆಂಬ್ಲಿಯಲ್ಲೇ ಹೀಗಾದರೆ ಬೇರೆ ಕಡೆ ಹೇಗಾಗುತ್ತದೆ ಎಂದು.

ಅಧ್ಯಕ್ಷರು.— ಆ ಬಗ್ಗೆ ನಿನ್ನೆಯೇ ನಾನು ಹೇಳಿಕಳುಹಿಸಿದ್ದೇನೆ.

ಶ್ರೀ ಹೆಚ್. ಗಂಗಾಧರನ್.— ಇದೇ ಕಾರಣವನ್ನು ಕೊಟ್ಟಿರತಕ್ಕ ಕೇಂದ್ರದ ಶಾಸನಗಳು ಯಾವುದಾದರೂ ಇದ್ದ ಪಕ್ಷದಲ್ಲಿ ನಾವು ಅದಕ್ಕೆ ವಿರುದ್ಧವಾಗಿ ಬೇರೆ ರಾಜ್ಯದಲ್ಲಿ ಸರ್ಕಾರ ಶಾಸನ ತರುವುದಕ್ಕೆ ಅವಕಾಶ ಇಲ್ಲದೆಯೂ ತಂದರೆ ಅದಕ್ಕೆ ಆಂಟಿ ಕಾನ್‌ಸ್ಟಿಟ್ಯೂಷನಲ್ ಬಿಲ್ ಎಂದು ಹೇಳಬಹುದು. ಹಿಂದೆ ಲೋಕಸಭೆಯಲ್ಲಿ ಇಂಡಸ್ಟ್ರಿಯಲ್ ರಿಲೇಷನ್ ಬಿಲ್ಲನ್ನು ಚರ್ಚೆ ಮಾಡುವ ಕಾಲದಲ್ಲಿ ಸಮಸ್ಯೆ ಉದ್ಭವಿಸಿತ್ತು. ಆ ಬಿಲ್ಲಿನಲ್ಲಿ

"No employee in any essential services shall go on strike in breach of contract which is illegal in essential services"

ಎಂಬ ಒಂದು ಕ್ಲಾಜ್ ಇತ್ತು. ಅದನ್ನು ಇಂಟ್ರಡ್ಯೂಸ್ ಮಾಡಿದಾಗ ಅಲ್ಲಿನ ಸದಸ್ಯರು ಅವರ ಮೇಲೆ ಕ್ರಿಯಾಲೋಪವನ್ನು ಎತ್ತಿ ಈ ತರಹ ಕ್ಲಾಜ್ ಇರತಕ್ಕ ಬಿಲ್ಲನ್ನು ತರುವುದಕ್ಕೆ ಈ ಲೋಕಸಭೆಗೇ ಅಧಿಕಾರವಿಲ್ಲ ಎಂದರು, ಯಾವ ಆಧಾರದ ಮೇಲೆ ಮತ್ತು ಯಾವ ಉದ್ದೇಶದಿಂದ ಆ ಬಿಲ್ಲನ್ನು ತಂದರೆಂಬ ಪ್ರಶ್ನೆ ಬಂತು. ಆ ಒಂದು ಪ್ರಶ್ನೆ ಇಲ್ಲಿ ಕೂಡ ಇದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರತಕ್ಕ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನ ಸೆಕ್ಷನ್ ೨೨ (೧)ರಲ್ಲಿ ಏನು ಹೇಳುತ್ತಾರೆಂದರೆ,

"No person employed in any public utility services shall go on strike in breach of contract''

ಎಂದು. ಅದಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ.

In the Industrial Disputes Act, 1947 Sec 22 (1) (a) says in addition to the above (a) without giving to the employer notice of strike, as hereinafter provided, within six weeks before striking; or (b) within fourteen days of giving such notice; or (c) before the expiry of the date of strike specified in any such notice as aforesaid (d) during the pendency of any concilliation proceedings before a conciliation officer and seven days after the conclusion of such proceedings.

ಯುಟಿಲಿಟಿ ಸರ್ವೀಸಸ್ ಬಗ್ಗೆ ಕೂಡ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್‌ನ ೨ (ಎನ್) ಡೆಫನಿಷನ್‌ನಲ್ಲಿ ವಿವರಣೆ ಕೊಡುತ್ತಾರೆ. ನಾವು ಇವತ್ತು ಏನು ಕಾನೂನನ್ನು ತಂದಿದ್ದೇವೆ ಅದು ಈ ಇಲಾಖೆಗೂ ಅಳವಡುತ್ತದೆ. ಆಂದಮೇಲೆ ಕೇಂದ್ರಸರ್ಕಾರ, ಪಾರ್ಲಿಮೆಂಟ್ ಮಾಡಿರತಕ್ಕ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟಿಗೆ ವಿರೋಧ

ವಾಗಿ ನಾವು ಪ್ರತ್ಯೇಕವಾಗಿ ಅದೇ ಅಂಶಗಳನ್ನು ಒಳಗೊಂಡಂಥ ಒಂದು ಕಾನೂನು ಮಾಡುವುದಕ್ಕೆ ಬರುವುದಿಲ್ಲವೆಂದು ನನ್ನ ಮಿತ್ರರು ಹೇಳಿದ್ದಾರೆ. Article 254 of the Constitution says as follows:

"If any provision of a law made by the Legislature of State is repugnant to any provision of law made by Parliment which Parliment is competent to enact, or to any provision of an existing law with respect to one of the matters enumerated in the Concurrent List, then, subject to the provisions of clause (2), the law made by the Parliament, whether passed before or after the law made by the Legislature of such State, or, as the case may be, the existing law, shall prevail and the law made by the Legislature of the State shall, to the extent of the repugnancy, be void"

ಇದು ಲೇಬರ್‌ಗೆ ಸಂಬಂಧಪಟ್ಟಿದ್ದು, ನಮಗೆ ಅನ್ವಯಿಸುತ್ತದೋ ಇಲ್ಲವೋ, ನಾವು ಮಾಡುವುದಕ್ಕೆ ಅಧಿಕಾರ ಇಲ್ಲವೇ ಎಂಬ ಸಮಸ್ಯೆಗೆ ಒಳಗಾಗಬೇಕಾದ ಅವಶ್ಯಕತೆ ಇಲ್ಲ. ಇಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ಆ ಬಗ್ಗೆ ಕೊಟ್ಟಿರುವುದು ಇದೆ. ಇಂಡಸ್ಟ್ರಿಯಲ್ ಆಕ್ಟಿನಲ್ಲಿ ಏನು ಕಾರಣ ಕೊಟ್ಟಿದ್ದಾರೋ ಅದನ್ನೇ ಈ ಮಸೂದೆಯಲ್ಲಿ ಕೊಟ್ಟಿದ್ದಾರೆ. ಒಂದು ಕಡೆ ಹೀಗೆ ಹೇಳುತ್ತಾರೆ.

In other words, the purpose of this Act *i.e.*, the Industrial Disputes Act is to settle disputes between workers and employers if not settled, would result in strikes or look-outs and entire dislocation of the work essential to the life of the community.

ಇದನ್ನೇ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಹೇಳುತ್ತಾ

"Promotion of measures for securing and preserving amity and good relations between employer and workmen."

ಎಂದು ಹೇಳಿದ್ದಾರೆ. ೩ನೆಯದಾಗಿ ಏನು ಹೇಳುತ್ತಾರೆಂದರೆ-

"Prevention of illegal strikes and lock-outs .... law of retrenchment... .... collective bargaining........."

ಎಲ್ಲಾ ಅವಕಾಶಗಳನ್ನೂ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಮಾಡಿಕೊಟ್ಟಿದ್ದರೂ ಅದೇ ಕಾರಣಕ್ಕಾಗಿ ರಾಜ್ಯ ವಿಧಾನ ಮಂಡಲದವರು ಮಸೂದೆಯನ್ನು ತಂದರೆ It becomes null and void and it will not stand in the Court of Law. ಇದನ್ನು ನಾವು ಮಾಡುತ್ತಿದ್ದೇವೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ೪೦ನೇ ಸೆಕ್ಷನ್‌ನಲ್ಲಿ ಒಂದು ಮಾತು ಇದೆ.

Section 40 of the Industrial Disputes Act says as follows:-

"The appropriate Government may, if it is of the opinion that it is expedient or necessary in the public interest so to do by Notification in the official gazette add to the first schedule any industry and on any such notification be issued, the first schedule shall deem to be amended accordingly."

ಇವತ್ತು ಇದರ ಜೊತೆಗೆ ಇನ್ನೊಂದು ತಂದಿದ್ದಾರೆ. ಸರ್ಕಾರ ನೋಟಿಫಿಕೇಷನ್ ಮಾಡಿ ಇದರಲ್ಲಿ ಯಾವುದನ್ನಾದರೂ ಸೇರಿಸಬಹುದು ಎಂದು. ಉದಾಹರಣೆಗೆ ಡೈರಿಯನ್ನು ಸೇರಿಸಬಹುದು ಎಂಬುದಾಗಿ ಈ

ಮಸೂದೆಯಲ್ಲಿ ಹೇಳಿದ್ದಾರೆ. ಆದರೆ ಅದನ್ನೂ ಕೂಡ ೪೦ನೇ ಸೆಕ್ಷನ್ ಪ್ರಕಾರ ಕೇಂದ್ರ ಸರ್ಕಾರವೇ ಇಟ್ಟು ಕೊಂಡಿದ್ದರೂ ರಾಜ್ಯ ಸರ್ಕಾರ ಮತ್ತೆ ತಿದ್ದುಪಡಿಯಾಗಲೀ ಅಥವಾ ಮಸೂದೆಯನ್ನಾಗಲೀ ತರುವುದಕ್ಕೆ ಅಧಿಕಾರ ಇಲ್ಲ. ಒಂದು ವೇಳೆ ತಂದರೆ ಇದು ನಿಲ್ಲತಕ್ಕದ್ದಲ್ಲ ಎಂದು ಇದರಿಂದ ಸಾಬೀತಾಗುತ್ತದೆ. ಇದೇ ಆಧಾರದ ಮೇಲೆ ಕೇಂದ್ರ ಸರ್ಕಾರದಲ್ಲಿ ಬಂದಂಥ ಇಂಡಸ್ಟ್ರಿಯಲ್ ರಿಲೇಷನ್ ಬಿಲ್ ಹಿಂದೆ ಇರತಕ್ಕ ಆಕ್ಟಿಗೆ ವಿರೋಧವಾಗುತ್ತದೆ ಎಂಬ ವಾದವನ್ನು ಲೋಕಸಭೆಯಲ್ಲಿ ಮಂಡಿಸಿರುವುದನ್ನು ನೋಡುತ್ತಿದ್ದೇವೆ. ಹೀಗಾಗಿ ರಾಜ್ಯಾಂಗಕ್ಕೆ ಇದು ವಿರೋಧವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಒಂದು ವೇಳೆ ಈ ಮಸೂದೆಯನ್ನು ಕಷ್ಟಪಟ್ಟು ಪಾಸ್ ಮಾಡಿದರೂ ಕೂಡ ಇದು ಕೋರ್ಟಿಗೆ ಹೋದರೆ ನಿಲ್ಲುವುದಿಲ್ಲ. ಅಲ್ಲಿ ಇದನ್ನು ರದ್ದುಪಡಿಸತಕ್ಕ ಅವಕಾಶವಿರುವುದರಿಂದ ಆತುರಾತುರವಾಗಿ ಏತಕ್ಕೆ ತರುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ರಾಜ್ಯಾಂಗಕ್ಕೆ ವಿರೋಧವಾದ ಕಾನೂನನ್ನು ಮಾಡಿ ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸುತ್ತೇವೆ ಎಂದು ಮಾನ್ಯ ಸರ್ಕಾರದವರು ಹೇಳುತ್ತಿದ್ದಾರೆ ೧೦೦ ಜನ ಹೊಟ್ಟೆ ತುಂಬಿರುವವರ ತಲೆ ಹೊಡೆದರೆ ೧೦೦೦ ಜನರ ಹೊಟ್ಟೆ ತುಂಬುತ್ತದೆ ಎಂಬ ಸಿದ್ಧಾಂತ ತಾವು ಮಾಡುತ್ತಿದ್ದೀರಿ. ಇದು ಸರಿಯಲ್ಲ This is a Naxalite philosophy of law. Fascist philosophy. ಕಾನೂನು ಬಾಹಿರವಾದ ಮುಷ್ಕರವನ್ನು ಮಾಡುವುದಕ್ಕೆ ಕಾರಣವೇನು. ಅದಕ್ಕೆ ಪರಿಹಾರವೇನು ಎಂಬುದನ್ನು ಕೊಟ್ಟಿಲ್ಲ. ಸಮತೋಲನವಾದ ಶಾಸನ ಮಾಡಬೇಕು. I would like call this as an anti-labour legislation. In 2(c) it has been stated thus :

> "...............without obtaining permission therefor of the authority competent to grant such permission under the relevant terms and conditions of service or his or their refusal to work........"

ಒಂದು ಉದಾಹರಣೆ ಹೇಳಬೇಕೆಂದರೆ ಒಬ್ಬ ನೌಕರ, ನನ್ನ ತಂದೆ ಸತ್ತುಹೋಗಿದ್ದಾನೆ, ನಾನು ಅವರ ಅಂತ್ಯಕ್ರಿಯೆ ಮಾಡಬೇಕು ಆದ್ದರಿಂದ ನನಗೆ ರಜಾ ಕೊಡಿ ಎಂದು ಅರ್ಜಿ ಕೊಟ್ಟರೆ ಮೇಲಧಿಕಾರಿ ನಾನು ನಮ್ಮಪ್ಪ ಸತ್ತಾಗ ಹೋಗಿರಲಿಲ್ಲ ಆದ್ದರಿಂದ ನೀನು ಏತಕ್ಕೆ ಹೋಗಬೇಕು ಎಂದು ಹೇಳುತ್ತಾನೆ. ಈ ರೀತಿ ಎಷ್ಟೋ ಕಡೆ ನಡೆಯುತ್ತವೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಕಾರ್ಮಿಕರ ಬಗ್ಗೆ ಅಧಿಕಾರಿ ಹೇಗೆ ವರ್ತಿಸಬೇಕು ಎಂಬ ಬಗ್ಗೆ ವಿವರಣೆ ಇಲ್ಲ. ಕಾರ್ಮಿಕನನ್ನು ಮಾತ್ರ ತಪ್ಪಿತಸ್ಥ ಎಂದು ತೀರ್ಮಾನ ಕೊಡುವಂಥ ಶಾಸನವನ್ನು ತಾವು ತರುತ್ತಿದ್ದೀರಿ. ಆದ್ದರಿಂದಲೇ ನಾನು ಇದನ್ನು 'anti-labour legislation'- ಎಂದು ಕರೆಯುತ್ತೇನೆ. Then Section 3-4 (b) says as follows :

> "any refusal to work declared or begun or continued, whether before or after the issue of the order, by any person employed in any such service, shall be illegal."

ತಾವು ಆರ್ಡರ್ ಇಷ್ಯೂ ಮಾಡುವುದಕ್ಕಿಂತ ಮುಂಚಿತವಾಗಿ ಆಗಿದ್ದರೂ ಕೂಡ ಅದನ್ನು ಕಾನೂನುಬಾಹಿರವಾದ ಮುಷ್ಕರ ಎಂದು ತೀರ್ಮಾನ ಕೊಡಬೇಕು ಎಂದು ಏನು ಕೊಟ್ಟಿದ್ದೀರಿ ಇದು ತುಂಬಾ ಅಭಾಸದ ಶಾಸನ. ಇದು ಸರಿಯಲ್ಲ.

Then Section 4 says as follows :—

> "Penalty for illegal refusal to work :—
>
> Any person who, without reasonable excuses refuses or continues to refuse to work in any essential service, such refusal being illegal under this Act shall, on conviction

> be punished with imprisonment for a term which may extend to one year, or with fine which may extend to two thousand rupees, or with both."

What is this reasonable excuse? It is not defined anywhere in this Act. "reasonable excuse" ಎಂದರೆ the excuse is at the fancy of the superior authorities; It is at the fancy of the bureaucracy. ಹೀಗೆ ನೀವು ಮಾಡುತ್ತೀರಾ? ಶಾಸನ ಮಾಡಿದ ಮೇಲೆ ಸಮಗ್ರವಾದ ಅರ್ಥವನ್ನು ಕೊಡುವಂಥ ವಿವರಣೆ ಕೊಡ ಬೇಡವೇ? ಈ ರೀತಿ ಇದು anti-labour legislation ಆಗುವುದನ್ನು ಕಾಣುತ್ತಿದ್ದೇವೆ. ಹೀಗೆ ಮಾಡುವ ಬದಲು ಎಲ್ಲರೂ ಕೂಡ ಸಮಗ್ರವಾಗಿ ಚರ್ಚೆ ಮಾಡಿ ಸಮಗ್ರವಾದ ಶಾಸನವನ್ನು ತರಬೇಕಾಗಿತ್ತು. ಯಾವ ಕಾರ್ಮಿಕನಿಗೇ ಆಗಲೀ ಅವನನ್ನು ತಪ್ಪಿತಸ್ಥ ಎಂದು ಹೇಳಬೇಕಾದರೆ ಅವನ ವಾದವನ್ನು ಮಂಡಿಸಲು ಅವಕಾಶ ಕೊಡಬೇಕು. ಕಾರ್ಮಿಕನಿಗೆ ರಕ್ಷಣೆ ಕೊಡಬೇಕು. ಅದು ಇಲ್ಲಿಲ್ಲ. Without giving him protection, you want to declare that a man is acting illegally. How do you say that what he is doing is illegal, unless you show what is the protection that you have given? ಅವನು ಸ್ಟ್ರೈಕ್ ಮಾಡುವುದಕ್ಕೆ ಕಾರಣವೇನು. ಅದಕ್ಕಿಂತ ಮುಂಚೆ ಅವನು ಏನು ಮಾಡಿರುತ್ತಾನೆ ಎಂಬುದನ್ನು ನೋಡಲು ಏನು ಮಾಡಬೇಕು ಎಂಬುದು ಇದರಲ್ಲಿಲ್ಲ. ಅಧಿಕಾರಿ ಮಾಡಿರುವ ತಪ್ಪಿಗಾಗಿ ಅನಿವಾರ್ಯ ವಾಗಿ ಕಾರ್ಮಿಕರು ಮುಷ್ಕರ ಮಾಡಬೇಕಾಗಿ ಬರುತ್ತದೆ. ಆಗಲೂ ಕಾರ್ಮಿಕ ತಪ್ಪಿತಸ್ಥ ಎಂದು ಹೇಳಿದರೆ ಹೇಗೆ? ಅಧಿಕಾರಿಗಳು ಮಾಡಿದ ತಪ್ಪಿನಿಂದ ಸಹಸ್ರಾರು ಜನರಿಗೆ ತೊಂದರೆಯಾದರೆ ಅಧಿಕಾರಿಗಳ ಮೇಲೆ ಯಾವ ಹೊಣೆಗಾರಿಕೆಯನ್ನು ಹೊರಿಸುತ್ತೀರಿ ಎಂಬುದು ಇದರಲ್ಲಿಲ್ಲ. ಅಧಿಕಾರಿಗಳನ್ನು ಶಿಕ್ಷಿಸುವುದಕ್ಕೆ ಅವಕಾಶಗಳಿಲ್ಲ. ಎಸೆನ್ಷಿಯಲ್ ಸರ್ವೀಸ್ ಎಂದು ಐ.ಎ.ಎಸ್. ಅಧಿಕಾರಿಗಳನ್ನು ಹಾಕುತ್ತೀರಿ. ಅವರಿಗೆ ನಿಮ್ಮ ಮುಲಾಗುದಾರ ಇಲ್ಲ. ಅದನ್ನು ಕೇಂದ್ರ ಸರ್ಕಾರದವರು ಹಾಕುತ್ತಾರೆ. ಹೀಗೆ ಅಧಿಕಾರಿ ಗಳು ಇದ್ದು ಅವರು ಮಾಡಿದ ತಪ್ಪನ್ನು ಬಿಟ್ಟು ಕಾರ್ಮಿಕರನ್ನು ತಪ್ಪಿತಸ್ಥರನ್ನಾಗಿ ಮಾಡುವುದು ಯಾವ ನ್ಯಾಯ? ಕಾರ್ಮಿಕನಿಗೆ ಮುಷ್ಕರ ಮಾಡಬೇಕು ಎಂಬ ಉದ್ದೇಶವಿರುವುದಿಲ್ಲ. ಅನಿವಾರ್ಯವಾಗಿ ಅವನು ಮಾಡಬೇಕಾಗುತ್ತದೆ. ಹಸಿದ ಹೊಟ್ಟೆಯಲ್ಲಿ ಅವನಿರುವಾಗ......

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ನಿಯಮದ ಪ್ರಕಾರ ಈ ಸದನದಲ್ಲಿ ಯಾರೂ ಕೂಡ ಸಿಗರೇಟ್ ಸೇದಬಾರದು, ಎಲೆ ಅಡಿಕೆ ಹಾಕಬಾರದು. ನಶ್ಯ ಮಾತ್ರ ಹಾಕಬಹುದು ಎಂದು ನೀವೇ ಹೇಳಿದ್ದೀರಿ. ಆದರೆ ಈ ಮನೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಎಲೆ ಅಡಿಕೆ ಹಾಕಿಕೊಂಡು ಜಗಿಯುತ್ತಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್.—ಅವರು ಹೇಳಿದ ತಕ್ಷಣ ನಾನು ನುಂಗಿಬಿಟ್ಟೆ.

SRI C. M. ARUMUGHAM.—Sir, I want to know the ruling of the Chair on the point of order raised by Sri J. H. Patel. Sir, in all seriousness, he raised that point of order. I only beg of you to kindly give a ruling on that.

ಅಧ್ಯಕ್ಷರು.—ಅವರು ನುಂಗಿಬಿಟ್ಟೆ ಎಂದು ಹೇಳಿರುವುದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ.

೩-೩೦ ಪಿ.ಎಂ.

ಶ್ರೀ ಹೆಚ್. ಗಂಗಾಧರನ್.—ಅಧಿಕಾರಿ ಮಾಡಿದ ತಪ್ಪಿನಿಂದಾಗಿ ಕಾರ್ಮಿಕರು ತಪ್ಪುದಾರಿಗೆ ಹೋದ ಪ್ರಸಂಗದಲ್ಲಿ ಅವರ ರಕ್ಷಣೆ ಮಾಡುವುದಕ್ಕೆ ಈ ಕಾನೂನಿನಲ್ಲಿ ಯಾವ ಅವಕಾಶವೂ ಇಲ್ಲ. ಆದುದರಿಂದ, ಇದು ಕಾರ್ಮಿಕ ವಿರೋಧಿ ಕಾನೂನಾಗುತ್ತದೆಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮಸೂದೆಯ ೪, ೫ ಮತ್ತು ೬ನೇ ಸೆಕ್ಷನ್ ಗಳಲ್ಲಿ ಯಾವ ಯಾವ ಕಾರಣಗಳಿಗಾಗಿ ಕಾರ್ಮಿಕರಿಗೆ ಶಿಕ್ಷೆ ಕೊಡಬೇಕೆಂದು ತಿಳಿಸ ಲಾಗಿದೆ. ಸೆಕ್ಷನ್ ೬ರಲ್ಲಿ ಕಾನೂನು ಬಾಹಿರ ನಿರಾಕರಣೆಗೆ ಹಣ ಸಹಾಯ ನೀಡುವುದಕ್ಕೆ ಶಿಕ್ಷೆ ಕುರಿತು ವಿವರಿಸ

ಲಾಗಿದೆ. ಯಾವುದೋ ಒಂದು ಸಕಾರಣಕ್ಕಾಗಿ ಕಾರ್ಮಿಕರು ಮುಷ್ಕರ ಹೂಡಿದ ಸಂದರ್ಭದಲ್ಲಿ ಕಾರ್ಮಿಕನೊಬ್ಬನ ಬಂಧು ತೀರಿಕೊಂಡರೆ ಆತನ ಅಂತ್ಯಕ್ರಿಯೆಗೆ ಈತ ಹೋಗಬೇಕಾಗುತ್ತದೆ ಮತ್ತು ಆ ಪರಿಸ್ಥಿತಿಯಲ್ಲಿ ಅವನಲ್ಲಿ ಹಣವಿಲ್ಲದಿದ್ದರೆ ಯಾರಾದರೊಬ್ಬರು ಅವನಿಗೆ ಹಣ ಸಹಾಯ ನೀಡಿದರೆ, ಹಣ ಕೊಟ್ಟವನನ್ನು ಸೆಕ್ಷನ್ ೭ರ ಮೇರೆಗೆ ಮುಷ್ಕರ ಸಂದರ್ಭದಲ್ಲಿ ಕಾನೂನು ಬಾಹಿರ ನಿರಾಕರಣೆಗೆ ಹಣ ಸಹಾಯ ನೀಡಿದ್ದಕ್ಕೆ ಶಿಕ್ಷೆಯನ್ನು ವಿಧಿಸುವ ಅಧಿಕಾರಿಗಳೂ ಇರುತ್ತಾರೆ. ಇಂತಹ ನಿದರ್ಶನಗಳೂ ಇವೆ ಕಾರ್ಮಿಕ ಸಂಘದಲ್ಲಿ ನಾವು ದುಡಿಯುತ್ತಿರುವುದರಿಂದ ಇಂತಹ ನಿದರ್ಶನಗಳು ನಮಗೆ ಬಂದಿವೆ. ಸೆಕ್ಷನ್ ೭ರಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಅವಕಾಶ ಮಾಡಲಾಗಿದೆ. ಇದು ಅನಾವಶ್ಯಕ; ಸರಿಯಾದುದಲ್ಲ. ಸಾರ್ವಜನಿಕರಿಗೆ ಉಪಯುಕ್ತವಾಗಿರುವ ಸಂಸ್ಥೆ ಅಥವಾ ಇಲಾಖೆಗಳಲ್ಲಿ ಮುಷ್ಕರವಾಗುವುದನ್ನು ನಾವು ಒಪ್ಪುವುದಿಲ್ಲ. ಮುಷ್ಕರಗಳು ಒಳ್ಳೆಯ ಪ್ರವೃತ್ತಿ ಎಂದು ನಾನು ಭಾವಿಸುವುದಿಲ್ಲ. ಒಂದು ದಿವಸ ಮುಷ್ಕರ ನಡೆದರೆ ಸುಮಾರು ಏಳು ಕೋಟಿ ರೂಪಾಯಿಗಳ ನಷ್ಟವಾಗುವ ಸಂಭವವಿರುವಲ್ಲಿ ದೇಶದ ಉತ್ಪನ್ನಕ್ಕೆ ನಷ್ಟವಾಗಬೇಕೆನ್ನುವುದು ನನ್ನ ಭಾವನೆಯಲ್ಲ. ಆದರೆ, ನಷ್ಟವಾಗದ ರೀತಿಯಲ್ಲಿ ಕಾರ್ಮಿಕರ ಹಿತರಕ್ಷಣೆ ಮಾಡತಕ್ಕ ಕಾನೂನು ನಮ್ಮ ಮುಂದಿಲ್ಲ. ಕಾರ್ಮಿಕ ಸಂಬಂಧವಾದ ಹಲವಾರು ಮೊಕದ್ದಮೆಗಳನ್ನು ನಾನು ನಡೆಸಿದ್ದೇನೆ. ಒಬ್ಬ ಕಾರ್ಮಿಕನನ್ನು ಸೇವೆಯಿಂದ ವಜಾ ಮಾಡಿದ ಪ್ರಕರಣ ಇತ್ಯರ್ಥವಾಗಬೇಕಾದರೆ ಹದಿಮೂರು ವರ್ಷಗಳು ಬೇಕಾಯಿತು. ಅಲ್ಲಿಯವರೆಗೆ ಅವನು ಇನ್ನೊಂದು ಕಡೆ ಕೆಲಸಕ್ಕೆ ಹೋಗುವ ಹಾಗಿಲ್ಲ. ಹಾಗಾದರೆ ಅವನ ಕುಟುಂಬದ ಪರಿಸ್ಥಿತಿ ಏನು ? ಇಂಥ ಪರಿಸ್ಥಿತಿಯಲ್ಲಿ ಕಾರ್ಮಿಕನಿಗೆ ಯಾವ ರಕ್ಷಣೆಯೂ ಸಿಗುತ್ತಿಲ್ಲ. ಜೀವನ ಮಾಡುವುದಕ್ಕೆ ಅನ್ಯ ಮಾರ್ಗವಿಲ್ಲದ ಪರಿಸ್ಥಿತಿಯಲ್ಲಿ ಮುಷ್ಕರದ ಅಸ್ತ್ರ ಬಿಟ್ಟರೆ ಬೇರೇನೂ ಕಾರ್ಮಿಕನಿಗೆ ಸಿಕ್ಕುವುದಿಲ್ಲ. ಕಾನೂನುಬಾಹಿರ ಮುಷ್ಕರ ನಡೆಸಬಾರದೆಂದು ಅವನಿಗೆ ಹೇಳುವಾಗ ಅವನಿಗೆ ಯಾವುದೇ ವಿಧವಾದ ಅನ್ಯಾಯವೂ ಆಗದಂತೆ ನೋಡಿಕೊಳ್ಳಬೇಕು. ಅಧಿಕಾರಿ ಮಾಡುವ ಅಪರಾಧದಿಂದಾಗಿ ಕಾರ್ಮಿಕ ವಿನಾಕಾರಣ ತೊಂದರೆಗೊಳಗಾಗಬಾರದು. ಇಷ್ಟೆಲ್ಲ ವಿಚಾರ ಮಾಡಿದಾಗ ನಮಗೆ ಈ ಮಸೂದೆ ಏಕಮುಖವಾಗಿರುವುದರಿಂದ ಮತ್ತು ಕಾರ್ಮಿಕ ವಿರೋಧಿ ಶಾಸನವಾಗಿರುವುದರಿಂದ ಹಾಗೂ ಕೆಲವು ಕಲಂಗಳು ರಾಜ್ಯಾಂಗದ ವಿರುದ್ಧವಾಗಿರುವುದರಿಂದ, ಇದನ್ನು ವಿರೋಧಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ. (ನಂಜನಗೂಡು).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಒಂದು ಕರಾಳ ಮಸೂದೆಗೆ ಅನೇಕ ಮಿತ್ರ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದಾರೆ. ನಾನೂ ಕೂಡ ಈ ಮಸೂದೆಯನ್ನು ವಿರೋಧಿಸುತ್ತ, ಈಗಾಗಲೇ ಮಾತನಾಡಿದ ಮಿತ್ರ ಸದಸ್ಯರು ಪ್ರಸ್ತಾಪ ಮಾಡದೆ ಇರುವ ವಿಚಾರಗಳನ್ನು ಸ್ಪಷ್ಟವಾಗಿ ಸಭೆಯ ಗಮನಕ್ಕೆ ತರಬಯಸುತ್ತೇನೆ. ಸೆಕ್ಷನ್ ೩ರಲ್ಲಿ ಕೆಲವು ಅಗತ್ಯ ಸೇವೆಗಳಲ್ಲಿ ಕೆಲಸ ಮಾಡಲು ನಿರಾಕರಿಸುವುದನ್ನು ಪ್ರತಿಬಂಧಿಸಲು ಅಧಿಕಾರ ನೀಡಲಾಗಿದೆ. ಶಾಸನದ ವ್ಯಾಖ್ಯೆಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮತ್ತು ಸಾರಿಗೆ ಹಾಗೂ ಸರಕಾರ ಅಗತ್ಯ ಬಂದಾಗ ಘೋಷಿಸುವ ಅಗತ್ಯ ಸೇವೆಗಳನ್ನೊಳಗೊಂಡಿದೆ. ಇಂತಹ ಅಧಿಕಾರವನ್ನು ಪಡೆದು ಮುಂದೆ ತಮಗೆ ಬೇಕಾದ ಸೇವೆಗಳನ್ನು ಅಗತ್ಯ ಸೇವೆಗಳೆಂದು ಘೋಷಿಸಿ ಕಾರ್ಮಿಕ ವರ್ಗ ಮತ್ತು ಶ್ರಮಜೀವಿಗಳ ವರ್ಗವನ್ನು ದಮನ ಮಾಡುವುದಕ್ಕೆ ಉಪಯೋಗಿಸಬಹುದು, ದುಡಿದು ಬಾಳುವ ಜನ ದುಡಿಮೆಯ ಜೊತೆಗೆ ತಮ್ಮ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಂಡು ಮರ್ಯಾದೆಯಿಂದ ಜೀವನ ಮಾಡುವ ಒಂದು ಅವಕಾಶ ಈ ಒಂದು ಮಸೂದೆಯಿಂದ ಮೊಟಕಾಗುತ್ತದೆಂದು ನನ್ನ ಸ್ಪಷ್ಟವಾದ ಭಾವನೆ. ಈ ಕಾನೂನನ್ನು ತರಲಿಕ್ಕೆ ಸರ್ಕಾರಕ್ಕಿದ್ದ ಅವಶ್ಯಕತೆ ಏನು? ಸನ್ನಿವೇಶವೇನು? ಸರ್ಕಾರ ನಡೆಯುತ್ತಿದೆಯೋ ಅಥವಾ ಇಲ್ಲವೆ? ಸರ್ಕಾರವನ್ನು ನಡೆಸಲಿಕ್ಕೆ ಕಾರ್ಮಿಕರು ಅಡ್ಡ ಬರುತ್ತಿದ್ದಾರೆಯೆ? ಅಥವಾ ಈ ರೀತಿಯ ಅಪಾಯ ಸರ್ಕಾರಕ್ಕಿದೆಯೆ? ಈ ಶಾಸನ ತರಲಿಕ್ಕೆ ನಿಮಗೆ ಯಾವ ಹೆದರಿಕೆ ಕಾರಣವಾಗಿತ್ತು? ಕಾಂಗ್ರೆಸ್ ಪಕ್ಷದ ಗುರಿ ರಾಷ್ಟ್ರದಲ್ಲಿ ಸಮಾಜವಾದಿ ಸಮಾಜವನ್ನು ನಿರ್ಮಾಣ ಮಾಡುವುದೇ ಆಗಿದೆ ಎಂದು ೧೯೭೧ರಲ್ಲಿ ಘೋಷಿಸಲಾಯಿತು. ಇದಾದ ಮೇಲೆ workers participation in managements ಅನ್ನು ೨೦ ಅಂಶಗಳ ಕಾರ್ಯಕ್ರಮದಲ್ಲಿ ಹೇಳಲಾಯಿತು, ಆದರೆ, ಈಗ ಸಮಾಜವಾದಿ ಸಿದ್ಧಾಂತಗಳಿಗೆ ತಿಲಾಂಜಲಿಯನ್ನು ನೀಡಲಾಗಿದೆ, ೨೦ ಅಂಶಗಳ ಕಾರ್ಯಕ್ರಮಗಳನ್ನು ಬಾಯಲ್ಲಿ ಹೇಳುತ್ತಾ, ಅವುಗಳನ್ನು ಜಾರಿಗೆ ಕೊಡುವಾಗ ಇಂತಹ ಕರಾಳ ಶಾಸನಗಳನ್ನು ತಂದು ಸಮಾಜದಲ್ಲಿ ಬಹುಸಂಖ್ಯಾತ ಶ್ರಮಜೀವಿಗಳನ್ನು ದಮನ ಮಾಡಲಿಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ೩೦ ವರ್ಷಗಳ ಪ್ರಗತಿಯನ್ನು ನೋಡಿದಾಗ ಈ ದೇಶದಲ್ಲಿ ಸಂಪತ್ತು ಜಾಸ್ತಿಯಾಗಿರುವುದು ಕಂಡುಬರುತ್ತದೆ. ಈ ಸಂಪತ್ತು ಯಾರಿಂದ ಜಾಸ್ತಿಯಾಗಿದೆ? ಕಾರ್ಮಿಕರಿಂದ ಮತ್ತು ಶ್ರಮಜೀವಿಗಳಿಂದ. ಆದರೆ, ಇದರ

ಲಾಭ ಯಾರಿಗೆ ಸಿಕ್ಕಿದೆ? ಕೆಲವೇ ಜನಗಳಿಗೆ ಮಾತ್ರ ಸಿಕ್ಕಿದೆ. ಈ ಕೆಲವೇ ಜನಗಳ ಸಂಪತ್ತನ್ನು ಈ ಶಾಸನದ ಮೂಲಕ ಇನ್ನಷ್ಟು ಬೆಳೆಸಬೇಕೆನ್ನುವುದು ಸರ್ಕಾರದ ಉದ್ದೇಶವಿರುವಂತೆ ನನಗೆ ಕಾಣುತ್ತಿದೆ. ಕಾರ್ಮಿಕರ ಪರವಾಗಿ ಈ ಮಸೂದೆಯಲ್ಲಿ ಒಂದು ಅಕ್ಷರ ಶಬ್ದವನ್ನೂ ಹೇಳಿಲ್ಲ. ರಾಜ್ಯಾಂಗದತ್ತವಾದ ಎಲ್ಲಾ ಹಕ್ಕು ಬಾಧ್ಯತೆಗಳನ್ನೂ ಕಸಿದುಕೊಂಡು, ನಾವು ಹೇಳಿದ ಹಾಗೆ ಕೆಲಸ ಮಾಡಿ ಇಲ್ಲದಿದ್ದರೆ ಮನೆಗೆ ಹೋಗಿಎಂದು ಬಂಡವಾಳಶಾಹಿಗಳ ರೀತಿ ಹೇಳುತ್ತಿರುವುದಲ್ಲದೆ ೧೮ನೇ ಶತಮಾನದ ವಿಕ್ಟೋರಿಯಾಳ ಗತವೈಭವದ ಕಾಲಕ್ಕೆ ಹೋಗುತ್ತಿದ್ದಾರೆ. ಸಮಾಜವಾದವನ್ನು ತರುತ್ತೇವೆ ಎಂದು ಬಾಯಲ್ಲಿ ಹೇಳುತ್ತಾ ಕಾರ್ಮಿಕ ವಿರೋಧಿ ಶಾಸನಗಳನ್ನು ತರುತ್ತಿರುವುದು ಒಂದು ವಿಪರ್ಯಾಸ. ಸಮಾಜವಾದ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾದ ಶಾಸನಗಳನ್ನು ತರುವಲ್ಲಿ ಮುಂದೆ ಮುಂದೆ ಹೆಜ್ಜೆ ಇಡಬೇಕಾದ ಸಂದರ್ಭದಲ್ಲಿ ಇವರು ಎರಡೆರಡು ಹೆಜ್ಜೆ ಹಿಂದಕ್ಕೆ ಹೋಗುತ್ತಿರುವಂತೆ ಕಾಣುತ್ತಿದೆ. ಇದು ಪ್ರಗತಿಗೆ ವಿರೋಧವಾದ, ಸಮಾಜ ಕಲ್ಯಾಣಕ್ಕೆ ಆತಂಕವಾದ ಮತ್ತು ಇಡೀ ಕಾರ್ಮಿಕರು ಮತ್ತು ದೀನದಲಿತರು ಹಾಗೂ ಶ್ರಮಜೀವಿಗಳ ಹಿತಕ್ಕೆ ತೊಂದರೆಯಾಗುವ ಕರಾಳ ಶಾಸನವೆಂದು ನನಗನ್ನಿಸುತ್ತದೆ. ಆದುದರಿಂದ ದಯವಿಟ್ಟು ಇದನ್ನು ಕಾನೂನು ಮಾಡುವುದಕ್ಕೆ ಹೋಗಬೇಡಿ, ಕಾರ್ಮಿಕರಿಗೆ ಅನ್ಯಾಯ ಮಾಡಿ ಯಾರೂ ಬದುಕಿಲ್ಲ. ಅವರು ನಿಮಗೆ ಮತ ನೀಡಿದ್ದಾರೆ. ಶ್ರೀಮಂತರು ನಿಮಗೆ ಹಣ ಕೊಟ್ಟಿದ್ದರೆ ಕಾರ್ಮಿಕರು ಮತ್ತು ಶ್ರಮಜೀವಿಗಳು ಮತ ನೀಡಿದ್ದಾರೆ. ಅದನ್ನು ನೀವು ಮರೆಯಬಾರದು. ಇದು ಕಾರ್ಮಿಕ ವಿರೋಧಿ ಶಾಸನವೆಂದು ಅವರಿಗೆ ಅರ್ಥವಾಗಿಬಿಟ್ಟರೆ ಮತ್ತು ಇದನ್ನು ನಮ್ಮ ವಿರುದ್ಧವಾಗಿಯೇ ತಂದಿದ್ದಾರೆಂದು ಅವರಿಗೆ ಕಂಡುಬಂದಿದ್ದೇ ಆದರೆ ಅಂದಿನಿಂದಲೇ ವರ್ಗಕಲಹ ಪ್ರಾರಂಭವಾಗುತ್ತದೆ, ಈ ವರ್ಗಕಲಹ ನಿಮ್ಮ ನಾಶಕ್ಕೆ ಕಾರಣವಾಗುತ್ತದೆ.

ಶ್ರೀ ಎಸ್, ಎಸ್. ಅರಕೇರಿ.— ಯಾರು ವರ್ಗಕಲಹ ಮಾಡುತ್ತಾರೆ? ಯಾರು ವರ್ಗಕಲಹದಿಂದ ನಾಶವಾಗುತ್ತಾರೆ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಕಾರ್ಮಿಕರು ಹಾಕುವ ಶಾಪವನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಅರಕೇರಿ.— ಕಾರ್ಮಿಕರು ಕೇವಲ ಶೇಕಡ ಹತ್ತರಷ್ಟಿದ್ದಾರೆ, ಶೇಕಡ ತೊಂಬತ್ತರಷ್ಟು ಬೇರೆ ಜನರಿದ್ದಾರೆ.

ಶ್ರೀ ಕೆ. ಬಿ. ಶಿವಯ್ಯ.— ಈ ಮಸೂದೆಯ ಪ್ರಕಾರ ಸುಮಾರು ಶೇಕಡ ೭೦ರಷ್ಟು ಕಾರ್ಮಿಕರು ಇದರ ವ್ಯಾಪ್ತಿಗೆ ಬರುತ್ತಾರೆ.

ಶ್ರೀ ಜೆ ಹೆಚ್. ಪಟೇಲ್.— ಪ್ರೊಫೆಸರ್ ಅರಕೇರಿಯವರು ಮೊದಲು ಚೆನ್ನಾಗಿಯೇ ಇದ್ದರು, ಈಗ ಏತಕ್ಕೆ ಹೀಗೆ ಮಾತನಾಡುತ್ತಿದ್ದಾರೆ?!

ಶ್ರೀ ಬಿ.ವಿ. ಕಕ್ಕಿಲಾಯ.— ಮಾನ್ಯ ಸದಸ್ಯರು ಕೇವಲ ಶೇಕಡ ಹತ್ತರಷ್ಟು ಕಾರ್ಮಿಕರಿದ್ದಾರೆಂದು ಹೇಳುತ್ತಿದ್ದಾರೆ. ಆ ಶೇಕಡ ಹತ್ತರಷ್ಟು ಮಂದಿಯಿಂದಲೇ ಜೀವನ ನೀವು ಮಾಡುತ್ತಿರುವುದು. ಅವರಿಲ್ಲದಿದ್ದರೆ ನಿಮಗೆ ಜೀವನ ಮಾಡುವುದೇ ಕಷ್ಟವಾಗುತ್ತದೆ.

† ಶ್ರೀ ಕೆ.ಬಿ. ಶಿವಯ್ಯ.— ಕಾರ್ಮಿಕರು ಸರ್ಕಾರದ ವಿರುದ್ಧ ಸಿಡಿದೆದ್ದರೆ ಅವರು ನಿಮ್ಮ ಹಿಡಿತಕ್ಕೆ ಸಿಕ್ಕುವುದಿಲ್ಲ. ಈ ಮಸೂದೆಯನ್ನು ಜಾರಿಗೆ ತರದೆ ಕಾನೂನಿನ ಚೌಕಟ್ಟಿನಲ್ಲಿ ಕಾರ್ಮಿಕರಿಂದ ಕೆಲಸ ತೆಗೆದುಕೊಳ್ಳಲು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟ್‌ನಲ್ಲಿ ಹಲವಾರು ಅವಕಾಶಗಳಿವೆ. ಅದನ್ನು ಉಪಯೋಗಿಸಿಕೊಳ್ಳಬೇಕು ಎಲ್ಲಿ ಕಾರ್ಮಿಕರ ಮತ್ತು ಮಾಲೀಕರ ನಡುವೆ ಮಧುರ ಸಂಬಂಧವಿರುವುದಿಲ್ಲ ಅಲ್ಲಿ ನೀವು ಎಂಥಾ ಕಾನೂನನ್ನು ತಂದರೂ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ನನ್ನ ವೈಯಕ್ತಿಕ ಅನುಭವ. ನಾನು ಕಾರ್ಮಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನೇರವಾಗಿ ಕುಳಿತು ಚರ್ಚೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಎಲ್ಲಿ ಹೋಗುತ್ತಾರೆ ಅಲ್ಲಿ ಹೆಚ್ಚಿನ ಉತ್ಪನ್ನವಾಗುತ್ತದೆ ಮತ್ತು ಕಾರ್ಮಿಕರ ಮತ್ತು ಮಾಲೀಕರ ಬಾಂಧವ್ಯ ಚೆನ್ನಾಗಿರುತ್ತದೆ ಈ ಶಾಸನವನ್ನು ಜಾರಿಗೆ ತರುವುದೇ ಒಂದು ಸಾಧನೆ ಎಂದು ನೀವು ಭಾವಿಸಿದ್ದರೆ, ಇದನ್ನು ಜಾರಿಗೆ ತಂದು ನೋಡಿ, ಇನ್ನೊಂದು ಸಲ ನಾವು ಸಭೆ ಸೇರುವಾಗ್ಗೆ ಪರಿಸ್ಥಿತಿ ಏನಾಗುತ್ತದೆಂಬುದು ತಮಗೆ ಗೊತ್ತಾಗುತ್ತದೆ. ಆದುದರಿಂದ, ಕಾರ್ಮಿಕ ವಿರೋಧಿ ಶಾಸನವನ್ನು ಜಾರಿಗೆ ಕೊಡುವ ದುಸ್ಸಾಹಸವನ್ನು ದಯವಿಟ್ಟು ಮಾಡಬೇಡಿ. ಪ್ರಗತಿಪರವಾದ ಕಾನೂನುಗಳನ್ನು ಮಾಡಬೇಕೆಂದಿದ್ದರೆ ಬಡವರ ಪರವಾಗಿ ಮಾಡಿ, ಹಿಂದುಳಿದವರು ಮತ್ತು ದೀನದಲಿತರ ಪರವಾಗಿ ಮಾಡಿ. ಎಲ್ಲರನ್ನೂ ಹಿಡಿತದಲ್ಲಿರಿಸಿಕೊಂಡು ನಾವು ಹೇಳಿದ ಹಾಗೆ ಕೇಳುವಂತೆ ರಾಜ್ಯಭಾರ

ಮಾಡುತ್ತೇವೆಂದು ನೀವು ಭಾವಿಸಬೇಡಿ. ಮೊದಲನೆ ಸಲ ನಿಮ್ಮ ಮಾತನ್ನು ಜನ ನಂಬಬಹುದು. ಎರಡನೆಯ ಸಲವೂ ನಂಬಬಹುದು. ಆದರೆ ಮೂರನೆ ಸಲವಂತೂ ನಿಮ್ಮನ್ನು ನಂಬುವುದೇ ಇಲ್ಲ. ಈಗಂತೂ ನಿಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ಹಿಂದುಳಿದವರು ಮತ್ತು ದೀನದಲಿತರು ನಿಮ್ಮ ಮಾತನ್ನು ಕೇಳಬಾರದೆನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಅವರನ್ನು ಮೋಸ ಮಾಡುವುದಕ್ಕಾಗುವುದಿಲ್ಲ. ಆದುದರಿಂದ. ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ನನ್ನ ಸಲಹೆ. ಮಾನ್ಯ ಗುಂಡೂರಾಯರು ಈಗ ಸಭೆಯಲ್ಲಿಲ್ಲ ಇಂತಹ ಶಾಸನಗಳನ್ನು ಬಡ ಕಾರ್ಮಿಕರ ಮೇಲೆ ಉಪಯೋಗಿಸುವುದರ ಬದಲು ಬೇಕಾದಷ್ಟು ಐಶ್ವರ್ಯ ಗಳಿಸಿರುವ ಶ್ರೀಮಂತರ ಮೇಲೆ ಉಪಯೋಗಿಸಿ ಎಂದು ನಾನವರಿಗೆ ಹೇಳಬಯಸುತ್ತೇನೆ. ಬಾಯಲ್ಲಿ ಒಂದನ್ನು ಹೇಳುತ್ತಾ ಕಾರ್ಯದಲ್ಲಿ ಇಂತಹ ಶಾಸನಗಳನ್ನು ತರುವುದು ಸರಿಯಾದ ನೀತಿಯಲ್ಲ. ಹೇಳಿದಂತೆ ನಡೆದುಕೊಳ್ಳದೆ ಹೋದರೆ ಜನ ನಿಮ್ಮನ್ನು ನಂಬುವುದಿಲ್ಲವೆಂದು ಹೇಳಿ ಈ ಕರಾಳ ಮಸೂದೆಗೆ ನನ್ನ ಸಂಪೂರ್ಣ ವಿರೋಧವನ್ನು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI MICHEL FERNANDES (Bharathinagar) —Mr. Speaker Sir, I rise to oppose this Bill very stoutly, not because I am afraid of this Bill but because of the provision contained in it. I know that if this becomes a law it will sow the seeds of destructions. The working class will rise against this. Just three years ago the people removed the emergency though it was imposed on us. This Act will also be destroyed in the same manner. If the purpose behind this Act is for the prosperity and betterment, one could understand this. I want to remind that in no developing country and in no prosperous country, a situation has come to such a position, necessitating to have this kind of Act. I don't know for what reason they have brought this Act ? This will affect the poor people in having a peaceful existence in the State. In the morning there was a reference and the leader of the opposition termed this as a draconian law. If the present leader of the opposition is the man behind this Bill, I don't think that this Bill was really drafted by him. I am happy that he has opposed this Bill today and called this as a draconian law. By calling this as draconian law, the word 'draconian' has been insulted. The intention and the language covered in this Bill is worse than draconian.

I would like to question also the morality of the Chief Minister about the reference made by him this morning. It is the question of applying double standards. Then, Sir, who is supposed to administer this Act when once it comes into existence ? I suppose it is the Government and therefore, it is the ruling party that behind the Government. What is the conduct of the Ruling Party ? It is the Congress (I) that rules the State. It is the Congress(I) which sits in Opposition in Jammu and Kashmir State. Just two months ago, *i.e.*, in the middle of March, there was a major crisis in the Assembly there. The State transport workers there had gone on strike. I think it went on for quite a few days. There was a total strike by workers and hundreds of workers were arrested under the existing law. Who opposed it ? It is the Congress (I). They created commotion ; they created a major crisis in the Assembly. The Congress (I) MLAs sat

on Dharna along with the wives and mothers of the arrested drivers. If there has been this Act in that State, would not the Congress (I) opposed its implementation ? like-wise, if the Congress (I) were to come and sit in the Opposition side in course of time, I am sure, they also would like to oppose the implementation of this Act. Therefore, why should there be this double standard ? When you were in Opposition, you have done everything to see that what you did not want was not implemented ; but you don't want the present Opposition to do what you had done when you were in the Opposition. Therefore, I say, that they should not apply double standard in this matter. The Ruling Party believes in one leader, one slogen, one policy and so on. Therefore, let them also have one tongue, instead of double tongue. On Page 2, *i e.*, in (iii), you have said "any other service" apart from specifying two specific types of services. To make it clear, I would like to quote what it says. It reads thus :

> " (iii) Any other service or employment or class thereof connected with any matter with respect to which the State Legislature has power to make laws "

It is almost an omni-bus thing and you don't know where it will end. Further, you have said :

ಇವತ್ತು ಕಾರ್ಮಿಕವರ್ಗ ಸಂಘಟಿತರಾಗುವುದಕ್ಕೆ ಇಡೀ ದೇಶದಲ್ಲಿ ಪ್ರಯತ್ನ ಮಾಡುತ್ತಿದೆ. ಮತ್ತು ಈಗಾಗಲೇ ಅನೇಕ ಕಾರ್ಮಿಕವರ್ಗಗಳು ಸಂಘಟಿತರಾಗಿ ತಮ್ಮ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಿವೆ. ಉದಾಹರಣೆಗೆ ಹೇಳುವುದಾದರೆ, ಸಿಮೆಂಟ್ ಕೈಗಾರಿಗೆ, ಸಕ್ಕರೆ ಕೈಗಾರಿಕೆಗಳ ಕಾರ್ಮಿಕರು ಸಂಘಟಿತರಾಗಿ ಇಡೀ ಭಾರತದಲ್ಲಿ ಒಂದೇ ರೀತಿಯಾದ ವೇತನವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸಂಘಟಿತವಾದ ಕಾರ್ಮಿಕವರ್ಗ ಯಾವ ಗೊಂದಲಕ್ಕೂ ಅವಕಾಶ ಕೊಡುತ್ತಿಲ್ಲ. ಇಂಥ ಒಂದು ಸಂಘಟಿತ ಕಾರ್ಮಿಕವರ್ಗದ ಮೇಲೆ ಗದಾ ಪ್ರಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಂಘಟನೆ ಇಲ್ಲದೇ ಇರತಕ್ಕ ಕಡೆಗಳಲ್ಲಿ ಅಲ್ಲಿನ ಕಾರ್ಮಿಕ ಒಂದು ದಿವಸ ಕೆಲಸಕ್ಕೆ ಬರದೇ ಇದ್ದರೆ ಅವನನ್ನು ಒಂದು ವರ್ಷ ಜೈಲಿಗೆ ಕಳಿಸುವುದು, ಒಂದು ಸಾವಿರ ರೂಪಾಯಿ ದಂಡ ವಿಧಿಸುವುದು ಮಾಡಿದ್ದೀರಿ. ಇದರಿಂದೇನಾಗುತ್ತದೆಂದರೆ ಯಾರಾದರೂ ಕೆಲಸಕ್ಕೆ ಸೇರಬೇಕಾದರೆ ಇನ್ನು ಮುಂದೆ ಎರಡು ಸಾವಿರ ರೂಪಾಯಿ ಡಿಪಾಸಿಟ್ ಇಟ್ಟೇ ಬರಬೇಕು. ಏತಕ್ಕೆಂದರೆ ಯಾವ ಸಂದರ್ಭದಲ್ಲಿ ಅವನು ಹಣ ಕಟ್ಟಬೇಕಾಗಿ ಬರುತ್ತದೋ ಹೇಳುವುದಕ್ಕಾಗುವುದಿಲ್ಲ. ಇಂಥ ಒಂದು ಶಾಸನವನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ (ಐ) ಸರ್ಕಾರ ಏನು ತರುತ್ತಿದೆ ಇದು ಸರಿಯಾದುದಲ್ಲ. ಒಂದು ವೇಳೆ ಈ ಶಾಸನವನ್ನು ಪಾಸ್ ಮಾಡಿದರೂ ಕೂಡ ಅದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಸಂಘಟಿತ ಕಾರ್ಮಿಕವರ್ಗವನ್ನು ಕೆಣಕುವುದರಿಂದ ತಮ್ಮ ಆಡಳಿತಕ್ಕೆ ಯಾವರೀತಿಯ ಉಪಯೋಗವೂ ಆಗುವುದಿಲ್ಲ. ಆದ್ದರಿಂದ ನಾನು ಇವತ್ತು ಮಾನ್ಯ ಮಂತ್ರಿಗಳಲ್ಲಿ ಮತ್ತು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯುವಿಟ್ಟು ಇದನ್ನು ಕೈಬಿಡಿ. ಇಲ್ಲದಿದ್ದರೆ ಸಂಘಟಿತ ಕಾರ್ಮಿಕವರ್ಗ ಇದಕ್ಕೆ ವಿರುದ್ಧವಾಗಿ ಭಾರಿ ಚಳುವಳಿಯನ್ನು ಹೂಡಬೇಕಾಗುತ್ತದೆ. ಹೋರಾಟ ಮಾಡಬೇಕಾಗುತ್ತದೆ. ತಮ್ಮ ಸರ್ಕಾರವನ್ನು ಕೆಳಗಿಳಿಸುವುದಕ್ಕೆ ಏನೇನು ವ್ಯವಸ್ಥೆಯನ್ನು ಮಾಡಬೇಕಾಗುತ್ತದೋ ಅವನ್ನೆಲ್ಲಾ ಮಾಡಬೇಕಾಗುತ್ತದೆ. ಕಾರ್ಮಿಕವರ್ಗ ಸುಮ್ಮನೆ ಕುಳಿತಿದೆ ಎಂದು ತಿಳಿದುಕೊಳ್ಳಬೇಡಿ. ನಮ್ಮ ರಾಜ್ಯದಲ್ಲಿ ಇಂಥ ಶಾಸನಗಳನ್ನು ತರುವುದರಿಂದ ಏನೂ ಉಪಯೋಗವಾಗುವುದಿಲ್ಲ. ಉತ್ಪಾದನೆ ಹೆಚ್ಚಾಗಬೇಕು, ಸಂಘಟಿತ ಕಾರ್ಮಿಕವರ್ಗಕ್ಕೆ, ಕೃಷಿ ಕಾರ್ಮಿಕರಿಗೆ ಒಳ್ಳೆಯದಾಗಬೇಕು ಎಂಬ ಭಾವನೆ ನಿಮಗಿದ್ದರೆ ಇದನ್ನು ತಕ್ಷಣ ವಾಪಸ್ ತೆಗೆದುಕೊಳ್ಳಿ. ಏನಾದರೂ ಸಮಸ್ಯೆಗಳಿದ್ದರೆ ಬೇರೆ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ. ಕಾರ್ಮಿಕರು ಮುಷ್ಕರ ಮಾಡಬೇಕಾದರೆ ಏನೂ ಕಾರಣಗಳಿಲ್ಲದೆ ಮಾಡುವುದಿಲ್ಲ. ಉದಾಹರಣೆಗೆ ಬಾಗಲಕೋಟೆ ಸ್ಪಿನ್ನಿಂಗ್ ಮಿಲ್‌ನವರು ೨೬ನೇ ತಾರೀಖಿನಿಂದ ಸ್ಟ್ರೈಕ್ ಮಾಡುತ್ತಿದ್ದಾರೆ. ಅವರು ಸುಮ್ಮನೆ ಮಾಡುತ್ತಿಲ್ಲ. ಅದಕ್ಕೆ ಕಾರಣ ಇದೆ. ಲೇಬರ್ ಕಮಿಷನರ್‌ರವರು ೧೯೭೭ರಲ್ಲಿ ಆಗಿದ್ದಂಥ ಅಗ್ರಿಮೆಂಟನ್ನು ಜಾರಿಗೆ ತನ್ನಿ ಎಂದು ಹೇಳಿದ್ದರೂ ಜಾರಿಗೆ ತಂದಿಲ್ಲ. ೧೯೭೯ನೇ ಜನವರಿಯಲ್ಲಿ ಅಗ್ರಿಮೆಂಟ್ ಆಗಿದೆ. ಆದರೂ ಜಾರಿಗೆ ತರದಿದ್ದುದರಿಂದ ೧೯೮೦ನೇ ಮೇ ತಿಂಗಳಲ್ಲಿ ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ. ಲೇಬರ್ ಕಮೀಷನರ್ ಮುಂದೆ ಅಗ್ರಿಮೆಂಟ್ ಆಗಿರುವುದನ್ನು ಒಂದು ವರ್ಷವಾದರೂ ಜಾರಿಗೆ ಕೊಡದೇ ಇದ್ದುದರಿಂದ ಅನಿವಾರ್ಯವಾಗಿ ಮುಷ್ಕರ ಮಾಡುತ್ತಿದ್ದಾರೆ. ಅದನ್ನು ಜಾರಿಗೆ ತನ್ನಿ ಎಂದು ಮುಷ್ಕರ ಮಾಡುತ್ತಿದ್ದಾರೆ. ಇದರಲ್ಲಿ ಕಾರ್ಮಿಕರ ತಪ್ಪು ಏನಿದೆ ? ಅಗ್ರಿಮೆಂಟನ್ನು ಜಾರಿಗೆ ತರದೇ ಇದ್ದ ಅಧಿಕಾರಿಗಳ ತಪ್ಪೇ ಅಥವಾ ಕಾರ್ಮಿಕರ ತಪ್ಪೇ ಎಂಬುದನ್ನು ಯೋಚನೆ ಮಾಡಿ. ಅಗ್ರಿಮೆಂಟನ್ನು ಜಾರಿಗೆ ತರದೇ ಇದ್ದ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟರೆ ಖಂಡಿತವಾಗಿಯೂ ನಾವು ಬೆಂಬಲ ಕೊಡುತ್ತೇವೆ. ಅದನ್ನು ಬಿಟ್ಟು ಡ್ರೈರಿಯವರು ಏನೋ ಮುಷ್ಕರ ಮಾಡಿದರು ಎಂಬ ಕಾರಣವನ್ನಿಟ್ಟುಕೊಂಡು ಅಥವಾ ಕೆ. ಎಸ್. ಆರ್. ಟಿ. ಸಿ. ಯವರು ಮುಷ್ಕರ ಮಾಡುತ್ತಾರೆ ಎಂಬ ಕಾರಣವನ್ನಿಟ್ಟುಕೊಂಡು ಜನಜೀವನಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಸರ್ಕಾರದವರು ಇಂಥ ಒಂದು ಶಾಸನವನ್ನು ತರುವುದಾದರೆ ಕಾರ್ಮಿಕವರ್ಗದ ಸ್ಥಿತಿಗತಿ ಏನಾಗುತ್ತದೆ ? ಕೆ.ಎಸ್.ಆರ್.ಟಿ.ಸಿ.ಯಲ್ಲಿ ಈ ಬಸ್ಸು ಸರಿಯಿಲ್ಲ ಬೇರೆ ಬಸ್ಸನ್ನು ಕೊಡಿ ಎಂದು ಹೇಳಿದರೆ ಅಧಿಕಾರಿಗಳು ಅದೇ ಬಸ್ಸನ್ನು ತೆಗೆದುಕೊಂಡು ಹೋಗು ಎಂದು ಒತ್ತಾಯ ಮಾಡುತ್ತಾರೆ. ೩ ತಿಂಗಳ ಮುಂಚೆ ಇದೇ ಕಾರಣದಿಂದ ಒಂದು ಬಸ್ಸು ಅಪಘಾತಕ್ಕೆ ಈಡಾಗಿ ೧೦ ಜನ ಸತ್ತ ವಿಷಯ ಎಲ್ಲರಿಗೂ ಗೊತ್ತಿದೆ. ಈಗ ತಾವು ತಂದಿರತಕ್ಕ ಶಾಸನದ ಪ್ರಕಾರ ಚಾಲಕ ಅಂಥ ಬಸ್ಸನ್ನು ತೆಗೆದುಕೊಂಡು ಹೋಗುವುದಕ್ಕೆ ನಿರಾಕರಿಸಿದರೆ ಅವನು ಜೈಲಿಗೆ ಹೋಗಬೇಕು. ಅಂಥ ಬಸ್ಸನ್ನು ತೆಗೆದುಕೊಂಡು ಹೋದರೆ ಜನ ಸಾಯುತ್ತಾರೆ. ಚಾಲಕ ಯಾವುದನ್ನು ಮಾಡಬೇಕು.

ಈ ಬಸ್ಸು ಸರಿಯಿಲ್ಲ. ಬ್ರೇಕು ಸರಿಯಾಗಿಲ್ಲ. ಟೈರು ಸರಿಯಾಗಿಲ್ಲ ಎಂದು ಹೇಳಿದರೆ ನಮ್ಮ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದಾನೆ, ಜೈಲಿಗೆ ಹೋಗು ಎಂದು ಹೇಳಿದರೆ ಇದರಲ್ಲಿ ಯಾವ ನ್ಯಾಯ ಇದೆ ? ಒಂದು ವೇಳೆ ಅಧಿಕಾರಿಗಳ ಆಜ್ಞೆ ಪ್ರಕಾರ ಬಸ್ಸನ್ನು ಓಡಿಸಿದರೆ ಜನ ಸಾಯುತ್ತಾರೆ. ಟೈರು ಒಡೆದುಹೋಗಿ ಒಂದು ಬಸ್ಸು ಅಪಘಾತಕ್ಕೆ ಈಡಾಗಿ ಜನ ಸತ್ತಿರುವುದನ್ನು ನೋಡಿಲ್ಲವೇ ? ಕೆ.ಎಸ್.ಆರ್.ಟಿ ಸಿ.ಯಲ್ಲಿರ ತಕ್ಕ ಬಸ್ಸುಗಳನ್ನು ನೋಡಿದರೆ ಯಾರೂ ಡ್ರೈವಿಂಗ್ ಮಾಡುವುದಕ್ಕಾಗುವುದಿಲ್ಲ ಯಾರೂ ಡ್ರೈವಿಂಗ್ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಇಂಥ ಬಸ್ಸುಗಳನ್ನು ಸರಿಪಡಿಸುವುದಕ್ಕೆ ಸರ್ಕಾರಪ್ರಯತ್ನ ಮಾಡ ಬೇಕೇ ಹೊರತು ಜೈಲಿಗೆ ಕಳಿಸುವುದಕ್ಕಲ್ಲ. ಜೈಲಿಗೆ ಕಳುಹಿಸುವುದಕ್ಕಲ್ಲ ಜನ ನಿಮಗೆ ಓಟು ಹಾಕಿ ಆರಿಸಿರು ವುದು. ಈ ರೀತಿ ಕಾರ್ಮಿಕ ವಿರೋಧಿ ನೀತಿಯನ್ನು ಸರ್ಕಾರ ಏನು ಅನುಸರಿಸುತ್ತಿದೆ ಇದನ್ನು ನಾವು ಖಂಡಿಸಬೇಕಾಗಿದೆ. ಸರ್ಕಾರ ತಂದಿರುವ ಈ ಮಸೂದೆಯನ್ನು ಕಾರ್ಮಿಕ ವಿರೋಧಿ ಮಸೂದೆ ಎಂದು ಹೇಳಿ ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ನಾನು ಖಡಾಖಂಡಿತವಾಗಿ ಈ ಮಸೂದೆಯನ್ನು ವಿರೋಧ ಮಾಡುತ್ತೇನೆ. ನಾನು ವಿರೋಧ ಮಾಡಿ ಸುಮ್ಮನಿರುವುದಿಲ್ಲ, ಇದರ ವಿರುದ್ಧ ಇಡೀ ರಾಜ್ಯದಲ್ಲಿ ಒಂದು ಬೃಹತ್ ಚಳುವಳಿಯನ್ನು ರೂಪಿಸಬೇಕಾ ದೀತು ಎಂಬ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಅಂಥ ಒಂದು ವಾತಾವರಣವನ್ನು ದಯವಿಟ್ಟು ಕಲ್ಪಿಸಿಕೊಡಬೇಡಿ. ಅದಕ್ಕೆ ಆಸ್ಪದ ಕೊಡದಂತೆ ಈ ಕಾಯಿದೆಯನ್ನು ವಾಪಸ್ ಪಡೆಯುವಂತೆ ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಸೂಚನೆ ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI VEERASHETTY KUSNOOR (Bidar).—Mr. Speaker Sir, already some of the eminent personalities have spoken about this Bill and some of them have said this as a draconian law. Some opined that this is just like a bonded labour law, anti-labour law and so on and so forth. Sir, we are also the protector of labourers and their rights and privileges. At the same time, we cannot keep quiet when the interest of the public suffers. For example,-if all the labourers without having any reasons go on strike, Government will have to take proper steps to deal with the situation. For that reason only, the Government have brought this Act. Sri A. Laxmi Sagar stated that this would jeopardise the interest of the labourers *etc.*, But during the recent times several instances have been brought to the notice of the Govt. wherein strikes have taken place without giving any prior notice. For example some time back K.S.R.T.C. people have gone on strike; autorikshaw people went on strike and taxi people have also gone on strike, as a result of which people had to suffer during that period. When such things take place, we cannot take any action unless there is a law. For that reason only this law has been brought here. I think this is not going to be used against any individuals who are against the Govt. This law will be used against people who are going on an illegal strike. I was also a party for this law when this came before the then Cabinet. There is nothing wrong in this Bill.

SRI K. H. SRINIVAS.—Now we are all parties for its withdrawal. Can you also join with us?

SRI VEERASHETTY KUSNOOR.—I am a part and parcel of the Government. Now the question is this. It has been stated that this is an anti-Constitutional Bill. They said that it is against the Constitution. In other States, such kinds of laws have been passed. It is not only in this State that this kind of law is going to be passed. In the recent past, in other States also, such kind of laws have been passed and I don't think the Supreme Court has invalidated such kind of laws. My submission to the House is that it is not against the Constitution and it comes within the Constitution. Here, only three aspects have been discussed in this Bill. (1) About the Essentail Services, i e, What are the essentail Services (2) Refusal to work and (3) Penalty. These are the only three things which have been suggested in this Bill. They have clearly defined what are the Essential Services in Clause 2. The first Essential Service is Water Supply and Electric ty the second is Transport service and that too goods services and the passengers and thirdly they have said that whenever the Government feels it necessary to declare a service as essential, it can declare. So, the power to declare a service as an essential service has also been given to the Government. My submission is that the Government is not going to use these powers unnecessarily. They will use these powers after taking into consideration all aspects. My submission is, this apprehension in the minds of the hon. Members and others is not well-founded apprehension. I am also sorry to say that they are giving threats to the Government. They are telling-We will see that this kind of legislation is not accepted in the House i e., is not passed in the House and also see that it is not implemented. They are giving such kind of threats. No Government will tolerate and also the Treasury Bench will not tolerate such kinds of threats.

SRI AZEEZ SAIT.—A warning is given by Sri Kushnoor.

SRI V. M KUSHNOOR.—All the Members who have spoken from that side have given threats. Therefore, I said like that. With these words, I support the Bill and thank the Chair and conclude.

ANNOUNCEMENT

MR. CHAIRMAN.—The Business Advisory Committee at a meeting held to-day have recommended that all stages of the Karnataka Essential Services Maintenance Bill, 1979, should be completed to-day. They have also recommended that the House may sit tommorrow also to complete the business listed out for to-day's afternoon sitting and then adjourn. Now Sri K. H. Srinivas to speak.

†SRI K. H. SRINIVAS (Shimoga).—Mr. Speaker Sir, while every stoutly opposing this piece of legislation which is before this August House, it shall be my endeavour to offer some comments without trading on the path already traversed by more eminent people on the Floor of this House.

Sir, my friend Sri A. Lakshmi Sagar was trying to explain to us probably what was working in the minds of the Government while piloting such a legislation. He was also pleased to illustrate "There is a quarrel with auto rikshaw driver, the entire fleet of autorikshaws goes off the track. He said there is a quarrel between an autorikshaw driver and a taxi driver, the entire fleet of autorikshaws plus taxies goes off the track." It is true. Infact, I very much like Sri Lakshmisagar to add there is a quarrel between two political leaders and the Governments will go off the track in this country.

ಶ್ರೀ ಸಿ. ಎಂ. ಇಬ್ರಾಹಿಂ.—ನೀವೆಲ್ಲಾ ಅದಕ್ಕೆ ವಿಕ್ಟಿಮ್ಸ್ ಆಗಿದ್ದೀರಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಆಗಲಿ, ನೀವೇ ಅದರ ಲಾಭವನ್ನು ಪಡೆದುಕೊಳ್ಳಿ. But the situation remains what it is. If you look at the Industrial rela tions presently obtaining in our State and the country. it is not that hope less. It is not that diobolically black, and it is not totally white also but I don't think the industrial relations that is presently obtaining is so hopeless that we are unable to deal with it without arming our selves with sweeping powers which are intended by this legislation, For example there are very excellent Unions, labour unions which have remarkable performance. For example, it is a very unfortunate irony that the State Electricity Board gets a prominent mention in the Statement of Objects and Reasons, because the whole State knows that we have got one Union for 30,000 workers in the State, and the State Electricity Board Union has been one of the most excellent Unions in the whole country and it is ages since ever had strike and I have had the experience to deal with the Labour negotiations as a Member of the Electricity Board and as also Minister incharge of Electricity. Without any hesitati n, I am proud to say that it was a pleasure to deal with that workers' union. So, it is not as though everything in this labour field has become degenerated and has become so diabolically black and we have to arm ourselves with diabolical powers. I can sympathise with the Government and I can say that this Government will be confronted with very delicate situation, wherein they had to weigh be ween safe guarding the interests of the chunk of the labour and safeguarding the interests of the wider public at large, But the present Government has been on the saddle for just three months. I would appeal to them

to explore whether you have got enough powers under the Acts already in vogue to deal with this situation. Please take your own time and make a direct study of the powers that you are already having. Please don't be led by Officers who would like to be more loyal than the King and it is a tendency with them to go on arming with more and more powers only to cover up their deficienies and their inefficiencies to use the existing powers. This is the tendency of these Officers. I am not trying to find fault with any individual Officer but this is a phonemenon which we have got to take into cognisance and the Government in power must also guard against this sort of tendency and the advice that it gets on account of such tendencies. Now very very sweeping powers are tried to be usurped inspite of existing laws on the subject. The Government is trying to usurp sweeping powers and invest these powers in an unqualified manner with Officers who are proved to misuse them. When we say that powers are likely to be misused, I would like that we may not be mistaken for making an allegation against the Minister or the Chief Minister. That is not our intention. It is not an attempt to question the bona-fides of the Chief Minister or the Minister concerned when we say that powers are likely to be misused. It is to be viewed in its proper perspective Tomorrow for example, this power investing a Police Officer to arrest any person without a warrant is not going to be exercised at the level of the Chief Minister or the Home Minister or any Minister this is going to be exercised by a Police Constable or a Head Constable incharge of the Police Station. So, knowing fully well their capacity and their grasp, we, reasonably apprehend that these sweeping powers which are invested with Officers who don't have the equipment to wield this power will be misused It is not enough that we have powers. Powers are to be invested with persons who have the capacity to wield back. If suppose a very dangerous weapon is given to the hands of a person who is incapable of using it or who does not know its mechanism, it may misfire.

It is always dangerous to remain ourselves with more confidence than what is needed whether it be an individual or a Government. My submission here is we are trying to project some more laws in addition to the existing laws to deal with the labour problems. We do understand the difficulties that are being faced by the Government. We have all the sympathy and I do not want to blame the Government because sometimes Government cannot also deal with some delicate matters quickly and effectively. Suppose some school going children indulge in pelting stones on the vehicles Government cannot ask the police officers to open fire on them. We are here to understand the difficulties of the Government and fully sympathise with them and we

do not want to use double standards. We do not want to create confusion. That is not our intention. Our intention is Government should comeforward to promote industrial relation and industrial peace this country instead of bring a bad law of this kind which would affect the interest of the labourers. This is a most retrograde step taken by this Government:

Another thing, which I would like to point out is that this Bill will not stand scrutiny of law. This will clearly 'affend Article 254 of the Constitution. I will read Article 254 of the Constitution of India.

> 254. (1) If any provision of a law made by the Legislature of a State is repugnant to any provisions of a law made by Parliament which Parliament is competent to enact, or to any provision of an existing law with respect to one of the matters enumerated in the Concurrent List, then, subject to the provisions of clause (2). the law made by Parliament, whether passed before or after the law made by the Legislature of such State, or as the case may be the existing law, shall prevail and the law made by the Legislature of the State shall, to the extent of the repugnancy, be void".

Sir, in this Bill there are so many provisions which are repugnant to the existing laws like Industrial Disputes Act, Electricity Supply Act, Indian Penal Code etc., I am not going to deal with all those matters now and quite a few provisions in this bill are repugnant to Article 254 of the Constitution. The State cannot pass such a law without the concurrence of the Government of India or the Parliament. I would only say that the State Government has by-passed this procedure. I do not understand why the Government would like to bring this legislation inspit of recent amendments to the Industrial Disputes Act. Even with all this if they wanted to bring this enactment it will not succeed. This will be construed as a law affending the provisions of the existing laws already in vogue. In that view of the matter I once again appeal to the Government to have a second look at this legislation and reconsider the matter.

†ಕುಮಾರಿ ಎಸ್. ಪ್ರಮಿಳಾ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಇದುವರೆಗೆ ಸದನದಲ್ಲಿ ಮಾತನಾಡಿದ ಎಲ್ಲಾ ಸದಸ್ಯರ ಮಾತನ್ನು ಕೇಳಿದೆ. ಮಾನ್ಯ ಆಪರ್ಣಗೌರವರಿಂದ ಹಿಡಿದು ಮಾನ್ಯ ಶ್ರೀನಿವಾಸ್‌ರವರವರೆಗೆ ಮಾತನಾಡಿದಂಥ ಸದಸ್ಯರ ಮಾತನ್ನು ಕೇಳಿದೆ. ಇವರೆಲ್ಲರೂ ಒಂದು ಮಾತನ್ನು ಹೇಳಿದ್ದಾರೆ ಏನೆಂದರೆ, ಆರ್ಟಿಕಲ್ ೨೫೪ ಪ್ರಕಾರ ಅಫೆಂಡ್ ಆಗುತ್ತದೆ, ರಿಪ್‌ಗ್‌ನೆಂಟ್ ಆಫ್ ಕಾನ್‌ಸ್ಟಿಟ್ಯೂಷನ್ ಆಗುತ್ತದೆ ಎಂದು ಹೇಳಿದ್ದಾರೆ. ಆದರೆ ಈ ಬಿಲ್ಲಿನಲ್ಲಿರತಕ್ಕ ಯಾವುದೇ ಒಂದು ಸೆಕ್ಷನ್ ಆಗಲಿ ಆರ್ಟಿಕಲ್ ೨೫೪ಗೆ ರಿಪ್‌ಗ್‌ನಂಟ್ ಆಗಿರುವುದು ನನಗೆ ಕಾಣುತ್ತಾ ಇಲ್ಲ, ಕಂಡುಬರುತ್ತಾ ಇಲ್ಲ. ಈ ಆರ್ಟಿಕಲ್ ೨೫೪ ಏನಿದೆ ನನ್ನ ಪ್ರಕಾರ ಈ ಸ್ಟೇಟ್ ಲಿಸ್ಟ್‌ನಲ್ಲಿ ಎಂಟ್ರಿ ನಂಬರ್ 17·h Schedule ನಲ್ಲಿ

"1. Public order (but not including the use of any naval, military or air force or any other armed force of the Union or of any other force subject to the control of Union or of any contingent or unit thereof in aid of the civil power

ಎಂದು ಇದೆ. ಅದೇ ಪ್ರಕಾರ,

"2. Police (including railway and village police) subject to the provisions of entry 2A of List I.".

ಮೇಲೆ ಹೇಳಿದಂತೆ it cannot be repugnant to the Constitution. ಇದು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರುತ್ತದೆ ಎಂದು ಕಾಣುವುದಿಲ್ಲ. Earlier the Privy Council had dealt with this matter in Megharaj's case (47 P. C 72) ಅದರಲ್ಲಿ ಟ್ರೇಡ್ ಯೂನಿಯನ ಬಗ್ಗೆ ಆಗಲಿ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಬಗ್ಗೆ ಆಗಲಿ ಇನ್‌ಸಿಡೆಂಟಲಿ ಟಚ್ ಮಾಡಿದರೆ ಆರ್ಟಿಕಲ್ ೨೫೪ ಅಪ್ಲಿಕೇಷನ್ ಆಗುವುದಿಲ್ಲ ಎಂದು ಹೇಳಿದ್ದಾರೆ. We have the power to enacta law of this kind which is a must so far as our State is concerned. ಇದು ಕಾರ್ಮಿಕರು ತಾವಾಗಿಯೇ ಮಾಡಿಕೊಂಡಿರತಕ್ಕಂಥ ಪರಿಸ್ಥಿತಿ. ಇತ್ತೀಚೆಗೆ ಸಮಾಜಘಾತುಕ ಶಕ್ತಿಗಳ ಕೆಲಸಗಳು ಜಾಸ್ತಿಯಾಗುತ್ತಾ ಇದೆ. ಕಾರ್ಮಿಕರು ೩ ಕೋಟಿ ಜನರು ಇರತಕ್ಕ ಕರ್ನಾಟಕದಲ್ಲಿ ಅಶಾಂತ ಪರಿಸ್ಥಿತಿಯನ್ನು ಯಾವರೀತಿ ಉಂಟುಮಾಡಿದ್ದಾರೆ, ಇದನ್ನು ಪರಿಹಾರ ಮಾಡಬೇಕಾದರೆ ಈಗಿರತಕ್ಕ ಕಾನೂನುಗಳಲ್ಲಿ ಅಂದರೆ ಐ. ಪಿ. ಸಿ. ಯಲ್ಲಾಗಲೀ, ಸಿ. ಆರ್.ಪಿ.ಸಿ. ಯಲ್ಲಾಗಲೀ, ಎಸೆನ್‌ಷಿಯಲ್ ಸರ್ವಿಸ್‌ಸ್ ಮೇಂಟೆನೆನ್ಸ್‌ನಲ್ಲಾಗಲೀ, ಎಲೆಕ್ಟ್ರಿಸಿಟಿಬೋರ್ಡ್ ಆಕ್ಟ್‌ನಲ್ಲಾಗಲೀ, ಯಾವುದೇ ಇಂಡಸ್ಟ್ರಿಯಲ್ ಡಿಸ್ಪ್ಯೂಟ್‌ನಲ್ಲಾಗಲೀ ತಹಬಂದಿಗೆ ತರುವುದಕ್ಕೆ ಯಾವ ಕಾನೂನೂ ಇಲ್ಲ. ಇತ್ತೀಚೆಗೆ ಕಳೆದ ನಾಲ್ಕು ದಿವಸಗಳಿಂದ ಬೆಂಗಳೂರಿನ ಹಾಲಿನ ಡೈರಿಯಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ, ತಕ್ಷಣ ಮುಷ್ಕರ ನಿಲ್ಲಿಸಿ, ಕೆಲಸಮಾಡಿ, ಹಾಲು ಸರಬರಾಜು ಮಾಡಿ ಎಂದು ಹೇಳಿ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಈಗಿನ ಕಾನೂನು ಪ್ರಕಾರ ಸಾಧ್ಯವಿಲ್ಲ. ಈಗ ಇಡೀ ಸಾರ್ವಜನಿಕರಿಗೆ ಉಪಯೋಗ ಮಾಡತಕ್ಕ ಕಾನೂನನ್ನು ಏನು ತಂದಿದ್ದೀರಿ ಇವನ್ನು ದುರುಪಯೋಗ ಪಡಿಸುವುದಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ ಒಂದು ವೇಳೆ ದುರುಪಯೋಗ ಪಡಿಸಿಕೊಂಡರೆ ಅದನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆ. ಈಗ ನಾನು ಎರಡು ಸಲಹೆಗಳನ್ನು ಕೊಡುತ್ತೇನೆ.

Section 2 (iii) says "any other service or employment or class there of connected with any matter with respect to which the State Legislature has power to make laws......

ಎಂದು ಹೇಳಿದ್ದೀರಿ. ದುರುಪಯೋಗಪಡಿಸಿಕೊಂಡರೆ ಅದನ್ನು ತೆಗೆದು ಕೊಳ್ಳುವುದಕ್ಕೆ ಅವಕಾಶವಿದೆ. ಅದನ್ನು ಮಾಡಿರುವುದು ತಪ್ಪು ಎಂದು ಮಾನ್ಯ ಸದಸ್ಯರು ಹೇಳಿದರು ಎಸೆನ್‌ಷಿಯಲ್ ಸರ್ವಿಸ್ ಡೆಫಿನಿಷನ್‌ನಲ್ಲಿ, .

"(i) any service connected with the supply of water or electricity

(ii) any transport service for the carriage of passengers or goods by motor vehicles"

ಎಂದು ಹೇಳಿದ್ದೀರಿ. ಇದರ ಜೊತೆಗೆ ಮಿಲ್ಕ್, ಮೆಡಿಸಿನ್ ಇದೆಲ್ಲಾ ಸೇರಿಸಿಕೊಂಡು ಇನ್ ಅದರ್ ಸರ್ವೀಸಸ್ ಎಂದು ಇಡಬೇಕಾಗಿತ್ತು. ಈಗ ವೇಗ್ ಆಗಿ ಇಟ್ಟಿದ್ದೀರಿ, ಇದನ್ನು ತೆಗೆದುಹಾಕಿ ಡೆಫಿನೆಷನ್‌ನಲ್ಲಿ ಇವೆಲ್ಲಾ ಹಾಕಿಕೊಂಡು ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ಇಡಿ, ದೇಶದ ಹಿತರಕ್ಷಣೆ ಮಾಡುವುದಕ್ಕೆ ಇಟ್ಟಿದ್ದೀರಿ. ಇದರಿಂದ ಲಕ್ಷ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ ಎಂದು ಏನು ಹೇಳಿದ್ದಾರೆ, ಅನ್ಯಾಯವಾಗುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ ನಿಯಮ ೩೩ (೩) ಪ್ರಕಾರ ಕೋರ್ಟಿಗೆ

ಹೋಗಬಹುದು. ಡಿಸ್‌ಮಿಸ್ ಮಾಡಿದರೆ ಕೋರ್ಟಿನ ಮುಖಾಂತರ ಪರಿಹಾರ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಯಾವುದೋ ಕ್ಷುಲ್ಲಕ ಕಾರಣ ಇಟ್ಟುಕೊಂಡು ಸಾರ್ವಜನಿಕರಿಗೆ ಕೊಡತಕ್ಕ ಅನುಕೂಲ ಗಳನ್ನು ತಪ್ಪಿಸತಕ್ಕ ವ್ಯವಸ್ಥೆ ಏನಿದೆ ಅದನ್ನು ತಪ್ಪಿಸುವುದಕ್ಕೆ ಇದರಿಂದ ಅವಕಾಶವಾಗಿದೆ. ಇದು ಒಳ್ಳೆಯ ಕಾನೂನಾಗಿದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ

5. 30 PM.

† SRI AZEEZ SAIT (Chamaraja):—Mr. Speaker Sir, I have understood what the Members on the other side said. The Hon. Member has said that this is not going to involve Art. 252 of the Constitution. I would like to ask the Government whether there are any powers vested with the Government to deal with essential industries. For instance, they have notified some of the industries as essential industries. If there were to be any strike a notice has to be issued So also in the Labour laws there are sufficient powers for the Government to deal with the situation. For example in ITC strike is going on. In the Industrial Act, Government has got ample power to issue show cause notice. I think it is for the first time in the State of Karnataka that this kind of Bill is coming up. When there was a strike in Harihar polyfibre, I solved it without any difficulty as a Labour Minister, because, there is enough power for the Government. I call this Bill as a black Act. A Few days back we have mourned the death of our Dy. Chairman and another Member. Similarly we have to mourn for this Bill also. The Govt. has got ample powers to deal with the situation.

Now Smt. Pramila says that there is nothing in the new Bill. But I could say that it is nothing but interference in the labour legislation. It has given enormous powers under the Constitution-in the amended Bill it further provides for making laws in any service or classes of service. In item No. 1 and 2 the Government may declare any service as essential service. What is happening in MICO? Though one section of the labour said that the matter has been referred to Industrial Disputes Tribunal still disturbance is going on. Government is unable to deal with the situation The other, day, when I was coming from Wilson Garden, near Lalbhagh a van belonging to Bangalore Dairy was set fire. Though a constable was standing nearby, he was a mere silent spectator. The vehicle was allowed to burnt. If the workers still resort to strike inspite of ban by the Government, can you not prevent it? When you have got such powers, why do you want to bring this Bill. Sri Kushnur said that some Members are opposing this Bill not only here but outside also. Yes. we are opposing outside also They can bring amendments to the Industrial Disputes Act also. Most

iof the seasoned labour leaders have advocated one Union for on tndustry. But here, politics is going on, There will be a union o the ruling party and another of the opposition. Then, naturally, here will always be quarrel. Let them bring an amendment to s ay that one industry should have only one union. and not more. Today leadership should be developed within the labourers themselves. An outsider should not be allowed to enter the Union in any capacity In the light of the above facts, I appeal to the Government to withdraw this Bill and bring an amendment to the existing labour law and see that the present situation is improved.

Further Sir C, M. Ibrahim the Hon Minister for Labour said just now that he has ordered prosecution of the management. He can't make such sweeping remarks and say that he has ordered for prosecution. Have you got any Labour Inspectors to implement these laws? How many Labour Inspectors are there to see whether minimum the wages Act is implemented or not in the country either in Agricultural field or in other fields? To ay, you are talking about the essential services. Sri Pampapathi said that there are about 2500 vehicles which have to be replaced. In Gulbarga the Labour union is not allowing any vehicles to be driven by the driver which is not road-worthy and in good conditon. So, Government has to go into all these details for which they will have to appoint an expert committee and then think of bringing certain amendments to the labour legislation, I think the Labour Department has not given serious con ideration. In the absence of the re-organisation of the Labour Department I don't think Government is justified in bringing this Act. Therefore. strongly urge the Government to withdraw this Bill and bring an ame dment to the existing labour laws.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಕರ್ನಾಟಕ ಎಸೆನ್ಸಿಯಲ್ ಮೇನ್‌ಟೆನೆನ್ಸ್ ಬಿಲ್ ೭೯ ಈ ಬಿಲ್ಲಿನ ಬಗ್ಗೆ ಬೆಳಿಗ್ಗೆಯಿಂದ ಸುಮಾರು ೯ ಗಂಟೆಗಳ ಕಾಲ ಸುಧೀರ್ಘವಾದ ಚರ್ಚೆ ನಡೆದಿದೆ. ಒಂದು ಸಂತೋಷದ ವಿಷಯವೇನೆಂದರೆ ವಿರೋಧ ಪಕ್ಷದಲ್ಲಿ ಮಾಜಿ ಕಾರ್ಮಿಕ ಮಂತ್ರಿಗಳು ಹೆಚ್ಚಾಗಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರಿಂದ ಹಿಡಿದು ಈಗ ಕೊನೆಯವರೆಗೂ ಮಾತನಾಡಿದಂಥ ಶ್ರೀಮಾನ್ ಅಜೀಜ್ ಸೇಠ್‌ರವರಿಗೆ ಬಹಳ ಜನ ಕಾರ್ಮಿಕ ಇಲಾಖೆಯಲ್ಲಿ ಆಡಳಿತವನ್ನು ನಡೆಸಿದಂಥ ಅನುಭವನ್ನು ಹೊಂದಿರತಕ್ಕ ವ್ಯಕ್ತಿಗಳು ವಿರೋಧ ಪಕ್ಷದಲ್ಲಿ ಕೂಡಿದ್ದಾರೆ. ಇದು ನಿಜಕ್ಕೂ ಹೆಮ್ಮೆ ಪಡತಕ್ಕ ವಿಚಾರವಾಗಿದೆ. ಆದರೆ ನಾನು ಈ ಒಂದು ಸಂದರ್ಭದಲ್ಲಿ ಒಪ್ಪಿಕೊಳ್ಳಬೇಕಾದ್ದು ಏನೆಂದರೆ ನಾನು ಯಾವುದೇ ಕಾರ್ಮಿಕ ರಂಗದಲ್ಲಿ ಕೆಲಸ ಮಾಡಿದಂಥ ವ್ಯಕ್ತಿಯಲ್ಲ. ಆದರೆ ಬೆಳಿಗ್ಗೆಯಿಂದ ನಡೆದಂಥ ವಾದವ ಸರಣಿಯನ್ನು ಕೇಳಿದ ಮೇಲೆ ಈಗಿರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ಯಾವುದೇ ಒಂದು ಸಂಸ್ಥೆಯ ಕಾರ್ಮಿಕರು ಕಾನೂನು ಬಾಹಿರವಾದಂಥ ಮುಷ್ಕರಗಳನ್ನು ಮಾಡಿದರೆ, ಆದರಿಂದಾಗಿ ಸಾರ್ವಜನಿಕರಿಗೆ ಆಗತಕ್ಕ ತೊಂದರೆ ಏನಿದೆ ಅದನ್ನು ತಪ್ಪಿಸುವುದಕ್ಕೆ ಈಗಿರತಕ್ಕ ಕಾನೂನಿನ ಚೌಕಟ್ಟಿನಿಂದ ಸಾಧ್ಯವಿದೆ ಎಂದು ಬಹು ಜನರ ಅಭಿಪ್ರಾಯವಾಗಿದೆ.

ಆದರೆ ಸರ್ಕಾರವನ್ನು ನಡೆಸತಕ್ಕವರಿಗೆ ಬಹುಶಃ ಈಗಿರತಕ್ಕ ಕಾನೂನುಗಳಿಂದ unlawful ಸ್ಟ್ರೈಕುಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಭಾವನೆ ಇರಬಹುದು ಅದು ನನಗೆ ಗೊತ್ತಿಲ್ಲ. ಮಾನ್ಯ ದೇವರಾಜ ಅರಸುರವರು ಈ ರಾಜ್ಯದ ಆಡಳಿತದಲ್ಲಿ ಬಹುಶಃ ಇಲ್ಲಿರತಕ್ಕ ಎಲ್ಲ ಸದಸ್ಯರುಗಳಿಗಿಂತ ಹೆಚ್ಚು ಅನುಭವವನ್ನು ಹೊಂದಿರತಕ್ಕ ವ್ಯಕ್ತಿ ಎಂದರೆ ಅದೇನು ಉತ್ಪ್ರೇಕ್ಷೆಯ ಮಾತಾಗಲಾರದು. ನಾವು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಅವರು ಸರ್ಕಾರವನ್ನು ನಡೆಸತಕ್ಕ ಕಾಲದಲ್ಲಿ ಈ ಮಸೂದೆಯನ್ನು ಯಾವ ಕಾರಣದಿಂದ ತಂದೆ ಎಂಬುದನ್ನು ಹೇಳಿದರು. ಶ್ರೀಮಾನ್ ಗುಂಡೂರಾಯರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಆ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಶಿಸ್ತು ಸಂಯಮವನ್ನು ತರುವುದು ಕಷ್ಟ ಎಂದು ಒತ್ತಾಯ ಮಾಡಿದ ಕಾರಣವಾಗಿ ಈ ಮಸೂದೆಯನ್ನು ತಂದೆ ಎಂದರು. ಅದು ಪ್ರಾಮಾಣಿಕವಾದ ಅಭಿಪ್ರಾಯ ಇರಬಹುದು. ಆದಾದಮೇಲೆ ಅವರು ರಾಜಕೀಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ ರಂಗದಲ್ಲಿ ಪ್ರವೇಶ ಮಾಡಿದ ಮೇಲೆ ಅನೇಕ ಜನ ಕಾರ್ಮಿಕ ಮುಖಂಡರು ಕೂಡ ಈ ಒಂದು ಕಾನೂನಿನ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಮೇಲೆ ಅದರ ಬಗ್ಗೆ ಮರು ಪರಿಶೀಲನೆ ಮಾಡುವ ಅವಶ್ಯಕತೆ ಬಂತು ಎಂದು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಯಾವುದೇ ರೀತಿಯ ಅನಾವಶ್ಯಕ ಅಭಿಪ್ರಾಯವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ರಾಷ್ಟ್ರೀಯ ರಂಗದಲ್ಲಿ ತಮ್ಮ ರಾಜಕಾರಣವನ್ನು ವಿಸ್ತರಿಸಿಕೊಂಡ ಮೇಲೆ ಅನೇಕ ಜನ ಮುಖ್ಯ ಮಂತ್ರಿಗಳು ಈ ಕಾನೂನನ್ನು ತರುವುದು ಯೋಗ್ಯವಲ್ಲ ಎಂದು ಹೇಳಿದ್ದಾರೆ, ಆಗ ಅವರು ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡಿದ್ದೇನೆಂದು ಪ್ರಾಮಾಣಿಕವಾಗಿ ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ಅಜೀಜ್ ಸೇಠ್ ರವರು ಹೇಳಿದಂತಹ ಒಂದು ಮಾತನ್ನು ಬೇರೆ ಯಾರೂ ಅನ್ಯಥಾ ಭಾವಿಸಬಾರದು. ಕಾರ್ಮಿಕ ರಂಗದಲ್ಲಿ ಅನವಶ್ಯಕ ರಾಜಕೀಯ ಪ್ರವೇಶ ಇದೇ ಕಾರ್ಮಿಕ ರಂಗದ ಮೇಲೆ ಇರತಕ್ಕ ವಿಶ್ವಾಸವನ್ನು ಕಳೆದುಕೊಳ್ಳುವುದಕ್ಕೆ ಮೂಲ ಕಾರಣವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಸಂಸ್ಥೆಗೂ ಒಂದೊಂದು ಯೂನಿಯನ್ ಇರಬೇಕು ಅದನ್ನು ನಾವು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಪ್ರತಿಯೊಂದು ಕಾರ್ಮಿಕ ರಂಗದಲ್ಲೂ ಹೊರಗಡೆಯವರ ಪ್ರವೇಶದಿಂದ ಇವತ್ತು ಅನಾವಶ್ಯಕವಾಗಿ ಗೊಂದಲ ಉಂಟಾಗುವುದಕ್ಕೆ ಅವಕಾಶವಾಗಿದೆ ಎಂಬುದನ್ನು ಮಾನ್ಯ ಅಜೀಜ್ ಸೇಠ್ ರವರು ಹೇಳಿದರು ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಕಾರ್ಮಿಕ ರಂಗದಲ್ಲಿ ತನ್ನದೇ ಆದ ಮುಖಂಡತ್ವ ಬೆಳೆಯಲು ಬಿಡಕೊಡುವುದಕ್ಕೆ ನಾವು ಸಿದ್ಧವಿಲ್ಲ. ಇದಕ್ಕೆ ಒಂದು ನಿದರ್ಶನ ಕೊಡುವುದಾದರೆ, ಇಂದಿನ ವಿರೋಧ ಪಕ್ಷದ ನಾಯಕರು ಮುಖ್ಯ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಬಿನ್ನಿ ಮಿಲ್ ಸುಮಾರು ಎರಡೂವರೆ ತಿಂಗಳುಗಳ ಕಾಲ ಲಾಕ್ ಔಟ್ ಆಗಿತ್ತು. ಆ ಸಂದರ್ಭದಲ್ಲಿ ಒಬ್ಬ ಕಾರ್ಮಿಕ ಹೊಟ್ಟೆಗೆ ಅನ್ನವಿಲ್ಲದೆ ಸತ್ತು ಹೋದನೆಂದು ತಿಳಿದ ಕೂಡಲೇ ನಾನು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಕೂಡಲೆ ಆ ಲಾಕ್ ಔಟನ್ನು ತೆಗೆಯದೇ ಹೋದರೆ ಆಮರಣಾಂತ ಉಪವಾಸ ಮಾಡುತ್ತೇನೆಂದು ಹೇಳಿದೆ. ಆಗ ಮಾನ್ಯ ದೇವರಾಜ ಅರಸುರವರು ನನ್ನನ್ನು ಕರೆಸಿ ಚರ್ಚೆ ಮಾಡಿದರು. ಮತ್ತು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಲಾಕ್ ಔಟನ್ನು ತೆಗೆಸಿದರು. ಆ ಸಂದರ್ಭದಲ್ಲಿ ನಡೆದ ಘಟನೆಯನ್ನು ಹೇಳುವುದಾದರೆ, ಅನೇಕ ಜನ ರಾಜಕೀಯ ಮುಖಂಡರುಗಳು ಮಧ್ಯೆ ಪ್ರವೇಶ ಮಾಡಿದರು, ದೇವೇಗೌಡರು ಎಂದು ಕಾರ್ಮಿಕ ರಂಗದಲ್ಲಿ ಪ್ರವೇಶ ಮಾಡಿದವರಲ್ಲ. ಅಂಥವರು ಇವತ್ತು ಕಾರ್ಮಿಕ ರಂಗದಲ್ಲಿ ಪ್ರವೇಶಿಸಿರುವುದರಿಂದ ಅವರಿಗೆ ಕೀರ್ತಿ ಸಲ್ಲುತ್ತದಾದ್ದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ಅನೇಕರು ಪ್ರಯತ್ನಿಸಿದರು ನೀವು ಲಾಕ್ ಔಟನ್ನು ತೆಗೆಯಬಾರದೆಂದು ಹೇಳಿ ರಾಜಕೀಯ ಬಣ್ಣ ಕಟ್ಟಲಿಕ್ಕೆ ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಮಾನ್ಯ ಅರಸುರವರು ಮಣಿಯಲಿಲ್ಲ, ಇಲ್ಲಿ ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಇದೇ ಕಾರ್ಮಿಕ ವರ್ಗಕ್ಕೆ ಪೇಟ್ರಿಯಾಟಿಸಂ ಇಲ್ಲವೆಂದು ಹೇಳುವುದಕ್ಕೆ ಸಿದ್ಧವಿಲ್ಲ. ಆದರೆ ಆ ಒಂದು ರಂಗಕ್ಕೆ ಕೆಟ್ಟ ಹೆಸರನ್ನು ತರುವುದಕ್ಕೆ ಪ್ರಯತ್ನ ನಡೆದಿದೆ ಎಂದು ಹೇಳಬೇಕಾಗಿದೆ. ನನ್ನ ಅಲ್ಪ ಅನುಭವದಲ್ಲಿ ಹೇಳುವುದಾದರೆ, ಮಾನ್ಯ ದೇವರಾಜ ಅರಸುರವರು (ಅವರು ಅಧಿಕಾರದಲ್ಲಿರಲಿ, ಇಲ್ಲದಿರಲಿ) ಆ ಮಹಾನ್ ಶಕ್ತಿ ರಾಷ್ಟ್ರೀಯ ಮಟ್ಟದಲ್ಲಿ ರಾಜಕಾರಣವನ್ನು ನಡೆಸುವಂತಹ ಶಕ್ತಿಯನ್ನು ಗಳಿಸಿಕೊಂಡಿದ್ದಾರೆ. ಮನುಷ್ಯರನ್ನು ಬೆಳೆಸತಕ್ಕ ಕಾಲದಲ್ಲಿ ಪಕ್ಷದ ರಾಜಕಾರಣವನ್ನು ಕಾರ್ಮಿಕ ರಂಗದಲ್ಲಿ ಪ್ರವೇಶ ಮಾಡಿಸಕೂಡದು. ಇದು ಎಲ್ಲ ಪಕ್ಷಗಳಿಗೂ ಹೊರತಾದ ವಿಷಯ. ಪ್ರತಿಯೊಂದು ರಾಜಕೀಯ ಪಕ್ಷಗಳೂ ತನ್ನ ಮುಂದಿನ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಬೇಕಾದ ಅವಕಾಶಗಳನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ. ಇದು ಪ್ರತಿ

ಯೊಂದು ರಾಜಕೀಯ ಪಕ್ಷಕ್ಕೆ ಅಂಟಿರುವ ದೋಷವೆಂದು ಹೇಳಬೇಕಾಗುತ್ತದೆ. ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಇಂಡಸ್ಟ್ರಿಯಲ್ ರಿಲೇಷನ್ ಆಕ್ಟನ್ನು ಜಾರಿಗೆ ತಂದಿತು ಎಂದು ಮಾನ್ಯ ಕಕ್ಕಿಲಾಯರವರು ಹೇಳಿದರು. ಅದಕ್ಕೆ ನಮ್ಮಲ್ಲಿ ಉಗ್ರ ಪ್ರತಿಭಟನೆ ಆಯಿತು. ಅದರಲ್ಲಿ ವಿವಿಧ ಆಸಕ್ತಿಗಳನ್ನು ಹೊಂದಿದ ಕಾರ್ಮಿಕರ ಪರವಾಗಿ ವಾದ ಮಾಡಬೇಕಾಗುತ್ತದೆ. ಸರ್ಕಾರ ಎಲ್ಲರ ಹಿತಾಸಕ್ತಿಗಳನ್ನು ಕಾಪಾಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಪ್ರತಿಯೊಂದು ರಾಜಕೀಯ ಪಕ್ಷಗಳೂ ರಾಜಕೀಯವನ್ನು ಬೆಳಸುವುದಕ್ಕೆ ಬದಲಾಗಿ, ಈ ದೇಶದಲ್ಲಿ ಆಗುತ್ತಿರುವ ಕಾರ್ಮಿಕರ ಶೋಷಣೆಯನ್ನು ತಡೆಗಟ್ಟುವುದಕ್ಕೆ ಸೂಕ್ತ ಮಾರ್ಗವನ್ನು ಕಂಡುಹಿಡಿದು, ಉತ್ಪಾದನೆ ಕುಂಟಿತವಾಗುವುದಕ್ಕೆ ಅವಕಾಶ ಕೊಡದೆ, ಯಾವ ರೀತಿ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಇಡೀ ಹಿಂದೂಸ್ಥಾನದಲ್ಲಿ ಇಲ್ಲಿಯವರೆಗೆ ಒಂದು ರಾಷ್ಟ್ರೀಯ ವೇತನ ನೀತಿಯನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಈ ಮಾತನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ರಾಜಕೀಯ ಪಕ್ಷಕ್ಕೂ ಕೂಡ ಆ ಒಂದು ಶಕ್ತಿಯನ್ನು ಕೊಡಲಿಲ್ಲ. ಈ ಬಗ್ಗೆ ಜನತಾದವರು ಮಾಡಿರುವುದು ತಪ್ಪಿರಬಹುದು. ಆದರೆ ಅದರ ಬಗ್ಗೆ ಈ ಸಂದರ್ಭದಲ್ಲಿ ಚರ್ಚೆ ಮಾಡಲು ಕಾಲ ತೆಗೆದುಕೊಳ್ಳುವುದಿಲ್ಲ. ಇವತ್ತು ಕೇಂದ್ರದಲ್ಲಿ ಕಾಂಗ್ರೆಸ್ ಮುಖಂಡತ್ವ ಇದೆ. ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಎಲ್ಲಿಯವರೆಗೆ ಈ ದೇಶದಲ್ಲಿ ಒಂದು ರಾಷ್ಟ್ರೀಯ ವೇತನ ನೀತಿಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಪ್ರತಿಯೊಂದು ಕಾರ್ಮಿಕ ವರ್ಗದಲ್ಲೂ ಅಸಂತೋಷ ತಾಂಡವ ಮಾಡುತ್ತದೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮ್ಯಾನೇಜಿಂಗ್ ಡೈರೆಕ್ಟರಿಗೆ ತಿಂಗಳೊಂದಕ್ಕೆ ೩ ಸಾವಿರ ರೂಪಾಯಿ ಸಂಬಳ ಕೊಡುವುದು ಮತ್ತು ಕಾರ್ಮಿಕರಿಗೆ ಕೇವಲ ೨-೩ ನೂರು ರೂಪಾಯಿ ಸಂಬಳ ಕೊಡುವ ನೀತಿ ಏನಿದೆ ಇದು ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಕಾರ್ಮಿಕ ರಂಗದಲ್ಲಿ ಅಸಂತೋಷ ತಾಂಡವವಾಡುತ್ತಿರುತ್ತದೆ. ಅದನ್ನು ಇಂಥ ಒಂದು ಕಾನೂನನ್ನು ತಂದು ಬಗೆಹರಿಸುತ್ತೇವೆಂದು ತಿಳಿದುಕೊಂಡಿದ್ದರೆ ಅದು ಕೇವಲ ತಾತ್ಕಾಲಿಕ ಪರಿಹಾರವನ್ನು ಒದಗಿಸಿದಂತಾಗುತ್ತದೆಂದು ಹೇಳುತ್ತೇನೆ. ಅದು ಶಾಶ್ವತವಾದ ಪರಿಹಾರವಲ್ಲ. ಇವತ್ತು ಒಂದು ಮಧುರ ಬಾಂಧವ್ಯ ಈ ದೇಶದ ಕಾರ್ಮಿಕ ರಂಗದಲ್ಲಿ ಬೆಳೆಯಬೇಕೆಂದಿದ್ದರೆ ಮೂಲ ದೋಷ ಎಲ್ಲಿದೆ ಎಂಬುದನ್ನು ಮೊದಲು ಪತ್ತೆ ಮಾಡಬೇಕು. ರಾಷ್ಟ್ರೀಯ ವೇತನ ನೀತಿಯನ್ನು ತರುವುದಕ್ಕೆ ಶಕ್ತಿ ಇಲ್ಲದಂತಹ ಈ ಸನ್ನಿವೇಶದಲ್ಲಿ ಇಂಥ ಕಾನೂನುಗಳನ್ನು ಮಾಡುವುದರ ಮೂಲಕ ಕಾರ್ಮಿಕ ರಂಗದಲ್ಲಿ ಶಿಸ್ತನ್ನು ತರುತ್ತೇವೆಂದು ತಿಳಿದಿದ್ದರೆ ಅದು ಗಗನ ಕುಸುಮವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇವತ್ತು ಇಂಥದ್ದೇ ರಾಜಕೀಯ ಪಕ್ಷ ದೋಷದಿಂದ ಕೂಡಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಕಳೆದ ೩೦ ವರ್ಷಗಳಲ್ಲಿ ಎಲ್ಲರೂ ಎಡವಿದ್ದಾರೆಂಬುದು ಖಚಿತ. ಈ ಸಂದರ್ಭದಲ್ಲಿ, ನಾನು ಪಕ್ಷದ ಸಮಸ್ಯೆಯ ಬಗ್ಗೆ ಮಾತನಾಡುತ್ತಾ, ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳು ಹೇಳಿರುವ ಒಂದೆರಡು ಮಾತುಗಳನ್ನು ನಮ್ಮ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ. ನಾನು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗದೇ ಪರಿಸ್ಥಿತಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅದು ಈ ರೀತಿ ಇದೆ,—

'ವಾಮ ಪಂಥೀಯ ಪಕ್ಷಗಳ ಆಡಳಿತವಿರುವ ರಾಜ್ಯಗಳಾದ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ಕಾರ್ಮಿಕ ಸಂಘಗಳು ತಮ್ಮ ಕಾರ್ಯ ವಿಧಾನವನ್ನು ಬದಲಾಯಿಸಬೇಕೆಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳಾದ ಜ್ಯೋತಿಬಸು ಬುದ್ಧಿ ಹೇಳಿದ್ದಾರೆ.'

ಅಲ್ಲಿ ಅವರ ಸರ್ಕಾರಕ್ಕೆ ಪೆಟ್ಟು ಬಿದ್ದೀತೆಂದು ಮತ್ತೆ ಮುಂದೆ ಈ ರೀತಿ ಹೇಳಿದ್ದಾರೆ.

'ಅವರ ಅಭಿಪ್ರಾಯದಂತೆ ಈ ಮೂರು ರಾಜ್ಯಗಳಲ್ಲಿ ಕಾರ್ಮಿಕ ಸಂಘಗಳ ಚಳುವಳಿ ಉತ್ಪಾದನೆಯನ್ನು ದೃಷ್ಟಿಯಲ್ಲಿಟ್ಟುಕೊಂಡಂಥದ್ದಾಗಿರಬೇಕಲ್ಲದೆ ಬೇಡಿಕೆ ಆಧಾರದ್ದಾಗಿರತಕ್ಕದ್ದಲ್ಲ. ಈ ರಾಜ್ಯಗಳಲ್ಲಿನ ಕಾರ್ಮಿಕ ಚಳುವಳಿ ಬೇರೆ ರಾಜ್ಯಗಳಲ್ಲಿರುವುದಕ್ಕಿಂತ ಬೇರೆಯ ರೀತಿಯದಾಗಿರಬೇಕಂತೆ...........

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸ್ವಾಮಿ, ನಾನು ಇದನ್ನೇ ಬಹಳ ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುವುದರ ಮೂಲಕ ಹೇಳುತ್ತಿದ್ದೇನೆ. ಏನೆಂದರೆ, ಇಂತಹ ಸಮಸ್ಯೆಗಳು ಬಂದಾಗ ಇದು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದು ಎಂದು ತಿಳಿದುಕೊಳ್ಳದೆ ಮುಖ್ಯವಾಗಿ ಕಾಂಗ್ರೆಸ್ (ಐ) ಪಕ್ಷದ ವಿಷಯ ಎಂದು ತಿಳಿದು ಕೊಳ್ಳದೆ, ರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಒಂದು ಕಡೆ ಕೂತುಕೊಂಡು ಬಗೆಹರಿಸ ಬೇಕಾಗುತ್ತದೆ. ಮತ್ತು ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಒಂದು ರಾಷ್ಟ್ರೀಯ ನೀತಿಯನ್ನು ಅನುಷ್ಠಾನಕ್ಕೆ ತರದಿದ್ದರೆ ಇಂತಹ ಸಮಸ್ಯೆಗಳು ಯಾವಾಗಲೂ ಬಗೆಹರಿಯುವುದಿಲ್ಲವೆಂದು ಹೇಳುತ್ತೇನೆ. ಯಾವುದೇ ಒಂದು ಹೋರಾಟ ನಡೆದಾಗ ಅದು ಒಂದು ಪಕ್ಷಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳತಕ್ಕಂಥ ಯುಗ ಹೋಯಿತು. ಆದಕಾರಣ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ಒಂದು ಕಡೆ ಕೂತು ಮಾತನಾಡುವುದರ ಮೂಲಕ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಏಕಮುಖವಾಗಿ ಹೋರಾಟ ಮಾಡುವ ಕಾಲ ಬಂದಿದೆ ಎಂದು ಈ ಸಂದರ್ಭದಲ್ಲಿ ಸವಿನಯವಾಗಿ ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ. ಈ ಬಿಲ್‌ನಲ್ಲಿರತಕ್ಕಂಥ ಕೆಲವು ಕಲಂಗಳ ಬಗ್ಗೆ ಸಾಕಷ್ಟು ರೀತಿಯಿಂದ ಈ ಸದನದಲ್ಲಿ ಚರ್ಚೆಯಾಗಿದೆ. ಈ ಮಸೂದೆಯ ಮೂಲಕ ಸರ್ಕಾರ ಹೆಚ್ಚಿನ ಅಧಿಕಾರ ಪಡೆಯುಕೊಳ್ಳಲು ಪ್ರಯತ್ನ ಮಾಡಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿರುವುದು ಸತ್ಯಾಂಶದಿಂದ ಕೂಡಿದೆ. ಮಾನ್ಯ ದೇವರಾಜ ಅರಸ್ ಅವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಏನೆಂದರೆ ಕಾರ್ಮಿಕರ ಬೇಡಿಕೆಗಳು ಯೋಗ್ಯವಾಗಿಲ್ಲದಿದ್ದರೆ ಅದಕ್ಕೆ ತಾವೂ ಸಹ ಬೆಂಬಲ ಕೊಡುವುದಿಲ್ಲವೆಂದು ಹೇಳಿದರು. ಈ ಮಾತನ್ನು ಅವರು ಪ್ರಾಮಾಣಿಕವಾಗಿ ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ಕೆಲವು ಸಲ ಕಾರ್ಮಿಕರು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದುಕೊಂಡು ಅನಾವಶ್ಯಕವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಮುಷ್ಕರ ಹೂಡುತ್ತಾರೆ. ಆ ಸಮಯದಲ್ಲಿ ಈಗಿರುವಂತಹ ಕಾನೂನುಗಳ ಚೌಕಟ್ಟಿನಲ್ಲಿಯೇ ಕ್ರಮ ಕೈಕೊಳ್ಳಲು ಸಾಧ್ಯವೇ ಹೇಗೆ ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಈ ದೃಷ್ಟಿಯಿಂದಲಾದರೂ ನಮ್ಮ ಪಕ್ಷದ ನಾಯಕರಾದ ಶ್ರೀ ಬೊಮ್ಮಾಯಿ ಅವರು ಸೂಚನೆ ಮಾಡಿದಂತೆ ಈ ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಮಾನ್ಯ ಕಕ್ಕಿಲಾಯ ಅವರು ಹೇಳಿದಂತೆ ಇದನ್ನು ಏನಾದರೂ ಪಬ್ಲಿಕ್ ಒಪೀನಿಯನ್‌ಗೆ ಕಳುಹಿಸಿಕೊಟ್ಟರೆ ಅದು ನಿಮಗೇ ವಿರುದ್ಧವಾಗುತ್ತದೆ ಮಾನ್ಯ ಜೆ. ಎಚ್. ಪಟೇಲ್ ಅವರು ಮಾತನಾಡುವಾಗ ನಮ್ಮ ದೇಶದಲ್ಲಿ ಇರತಕ್ಕಂಥ ೨೦ ಕೋಟಿ ಕಾರ್ಮಿಕರ ಪೈಕಿ ಕೇವಲ ೫ ಮಿಲಿಯನ್ ಕಾರ್ಮಿಕರು ಮಾತ್ರ ಆರ್ಗನೈಸ್ಡ್ ಲೇಬರರ್ಸ್ ಆಗಿದ್ದಾರೆಂದು ಹೇಳಿದರು. ಈಗ ನಮ್ಮ ಹೋರಾಟವೆಲ್ಲಾ ಈ ಕಾರ್ಮಿಕರ ಬಗ್ಗೆಯೇ ಆಗಿದೆಯೇ ಹೊರತು, ಅನ್-ಆರ್ಗನೈಸ್ಡ್ ಲೇಬರರ್ಸ್ ಬಗ್ಗೆ ಮತ್ತು ಅವರ ಪರಿಸ್ಥಿತಿಯ ಬಗ್ಗೆ ಹೋರಾಟ ಮಾಡಲು ಯಾರೂ ಸಹ ಪ್ರಯತ್ನ ಮಾಡಿಲ್ಲ. ಮಾನ್ಯ ಚರಣಸಿಂಗ್ ಅವರು ಈ ಕಾರ್ಮಿಕರ ಬಗ್ಗೆ ಹೋರಾಟ ಮಾಡಲು ಪ್ರಯತ್ನ ಮಾಡಿದರು ಆದರೆ ಅವರಿಗೆ ಅದರಲ್ಲಿ ಸಂಪೂರ್ಣ ಫಲ ಸಿಗಲಿಲ್ಲ. ಇದರ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡಲು ಹೋಗುವುದಿಲ್ಲ. ಶ್ರೀಮತಿ ಪ್ರಮಿಳಾ ಅವರು ಭಾಷಣ ಮಾಡುವಾಗ ಪಬ್ಲಿಕ್ ಗ್ಯಾಲರಿಯಿಂದ ಯಾರೋ ಚಪ್ಪಾಳೆ ಹೊಡೆದರು. ಅವರಿಗಿರತಕ್ಕಂಥ ಒಂದೇ ಒಂದು ತಾಪತ್ರಯ ಏನೆಂದರೆ, ಬೆಂಗಳೂರಿನ ನಾಗರಿಕರಿಗೆ ಹಾಲು ಸಿಗುತ್ತಿಲ್ಲ ಎಂಬುದು. ಇವೊತ್ತು ಆರ್ಗನೈಸ್ಡ್ ಲೇಬರ್ಸ್‌ಗೆ ಸಿಕ್ಕುತ್ತಿರುವ ಸವಲತ್ತುಗಳು ಬೇರೆ ವರ್ಗದ ಜನರಿಗೆ ಸಿಗುತ್ತಿಲ್ಲ. ಈ ಸಮಯದಲ್ಲಿ ನಾನು ಪರ್-ಕ್ಯಾಪಿಟಾ ಇನ್‌ಕಮ್ ಬಗ್ಗೆ ಹೇಳಲು ಹೋಗುವುದಿಲ್ಲ. ಆದರೆ ಇವೊತ್ತು ನಮ್ಮ ದೇಶದಲ್ಲಿ ಎರಡು ಹೊತ್ತು ಊಟ ಮಾಡದಿರುವಂತಹ ಜನರು ಲಕ್ಷಾಂತರ ಮಂದಿ ಇದ್ದಾರೆ. ಈ ಎಲ್ಲ ಕಾರಣಗಳಿಂದ ಇದನ್ನು ಪಬ್ಲಿಕ್ ಒಪೀನಿಯನ್‌ಗೆ ಕಳುಹಿಸಿಕೊಡಲು ತಾವು ಹೋಗಬೇಡಿ.

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ, ಸನ್ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮಿಳಾ ಅವರು ಮಾತನಾಡುವಾಗ ಪಬ್ಲಿಕ್ ಗ್ಯಾಲರಿಯಿಂದ ಚಪ್ಪಾಳೆ ಹೊಡೆದರೆಂದು ನನ್ನ ಮಾನ್ಯ ಮಿತ್ರರಾದ ಶ್ರೀ ದೇವೆಗೌಡರು ಹೇಳಿದರು. ಇದೇ ಮಾನ್ಯ ದೇವೇಗೌಡರನ್ನು ಮೀಸಾದ ಕೆಳಗೆ ಜೈಲಿಗೆ ಹಾಕಿದಾಗಲೂ ಸಹ ಜನರು ಚಪ್ಪಾಳೆ ಹೊಡೆದರು.

ಶ್ರೀ ಎಚ್. ಡಿ. ದೇವೆ ಗೌಡ.—ಮಾನ್ಯ ಪಟೇಲ್ ಅವರಿಗೆ ವಾಸ್ತವಾಂಶಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಶಕ್ತಿ ಇದೆ ಎಂದು ನಾನು ಭಾವಿಸುತ್ತೇನೆ. ಆ ಸಮಯದಲ್ಲಿ ನಾನು ಮೀಸಾ ಕಾನೂನನ್ನು ವಿರೋಧ ಮಾಡಿದ್ದರಿಂದ ನನ್ನನ್ನು ಜೈಲಿಗೆ ಹಾಕಿದರು. ಮುಂದೆ ಜನತಾ ಪಕ್ಷ ಅಧಿಕಾರಕ್ಕೆ

ಬಂದಮೇಲೆ ಇದೇ ಮೀಸಾ ಕಾನೂನನ್ನು ಮತ್ತೆ ಜಾರಿಗೆ ತರಲ ಪ್ರಯತ್ನ ಮಾಡಿತು. ಮತ್ತು ಮಧ್ಯಪ್ರದೇಶದಲ್ಲಿ ಮಿನಿಮೀಸಾ ಕಾನೂನನ್ನು ಜಾರಿಗೆ ತರಲಾಯಿತು. ಆದಕಾರಣ ನಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ನಾವು ಮಾಡಿದ್ದೆಲ್ಲಾ ಸರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ದೇವರಾಜ ಅರಸ್ ಅವರೂ ಸಹ ಈ ಮಸೂದೆಯನ್ನು ತಾವು ಅಧಿಕಾರದಲ್ಲಿದ್ದಾಗ ಈ ಸಭೆಯ ಮುಂದೆ ಮಂಡನೆ ಮಾಡಿದ್ದು ತಪ್ಪಾಯಿತು ಎಂಬುದನ್ನು ಒಪ್ಪಿಕೊಂಡರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ರಾಜಕೀಯ ಮುಖಂಡರ ಲಕ್ಷಣವೆಂದು ನಾನು ಹೇಳುತ್ತೇನೆ ಈಗ ಮೊನ್ನೆತಾನೆ ಪ್ರಿವೆಂಟೀವ್ ಡಿಟೆನ್‌ಷನ್ ಆಕ್ಟನ್ನು ಜಾರಿಯಲ್ಲಿ ತಂದಿದ್ದಾರೆ. ಈ ಆಕ್ಟ್ ಪ್ರಕಾರ ಯಾವುದೇ ಕಾರಣವಿಲ್ಲದೆ. ಯಾವ ಒಬ್ಬ ವ್ಯಕ್ತಿಯನ್ನು ಬೇಕಾದರೂ ಅರೆಸ್ಟ್ ಮಾಡಬಹುದಾಗಿದೆ. ಆದರೆ ವ್ಯಾಪಾರಸ್ಥರೆಲ್ಲ ಅಪ್ರಮಾಣಿಕರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಯೋಗ್ಯರೂ ಇದ್ದಾರೆ. ಯಾವುದೋ ಒಂದು ಸಹಕಾರ ಸಂಘದ ಸೆಕ್ರೆಟರಿ ಹಣ ತಿಂದಿದ್ದಾನೆಂದುಕೊಂಡು ಈ ಆಕ್ಟ್ ಕೆಳಗೆ ಜೈಲಿಗೆ ಹಾಕಿದ್ದಾರೆ. ಹಾಗಿದ್ದರೆ ದುಡ್ಡು ತಿನ್ನದಿರುವ ಸಹಕಾರ ಸಂಘಗಳು ಯಾವುದಾದರೂ ಇವೆಯೇ ಎಂದು ನಾನು ಕೇಳುತ್ತೇನೆ ? ಎಲ್ಲ ಜಿಲ್ಲಾ ಸಹಕಾರ ಬ್ಯಾಂಕ್‌ಗಳು ಸರಿಯಾಗಿ ನಡೆಯುತ್ತಿವೆಯೋ ಹೇಗೆ ಎಂಬ ತರ್ಕವಿತರ್ಕಕ್ಕೆ ನಾನು ಈಗ ಹೋಗುವುದಿಲ್ಲ. ಒಟ್ಟಿನಲ್ಲಿ ಇದನ್ನು ಪಬ್ಲಿಕ್ ಒಪೀನಿಯನ್‌ಗೆ ಕಳುಹಿಸಿದರೆ ಸರಿಹೋಗುವುದಿವೆಂಬುದು ನನ್ನ ವಾದ. ಕಾರ್ಮಿಕರ ಮೇಲಿನ ಶೋಷಣೆ ತಪ್ಪಬೇಕು ಮತ್ತು ಅವರಿಗೆ ತಮ್ಮ ಒಂದು ನ್ಯಾಯವಾದ ಹಕ್ಕನ್ನು ಪ್ರತಿಪಾದನೆ ಮಾಡಲು ಅವಕಾಶವಿರಬೇಕೆಂಬುದನ್ನು ನಾನೂ ಸಹ ಒಪ್ಪುತ್ತೇನೆ ಆದರೆ ಅದೇ ಕಾಲಕ್ಕೆ ಈ ಸಮಾಜದಲ್ಲಿರತಕ್ಕಂಥ ಬೇರೆ ಜನರಿಗೂ ಸಹ ಎಲ್ಲ ರೀತಿಯ ಸವಲತ್ತುಗಳನ್ನು, ಒದಗಿಸುವಂತಹ ಒಂದು ಹೊಣೆಯನ್ನು ಹೊತ್ತುಕೊಂಡು ನಾವು ಇಲ್ಲಿಗೆ ಬಂದಿದ್ದೇವೆ. ಇದನ್ನು ಯಾರೂ ಮರೆಯಬಾರದು. ಆದಕಾರಣ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಅಲ್ಲಿ ಆ ಕಮಿಟಿಯವರು ಕೂಲಂಕಷವಾಗಿ ಇದನ್ನೆಲ್ಲಾ ಪರಿಶೀಲನೆ ಮಾಡಿ ನೋಡುತ್ತಾರೆ. ಕೆಲವರು ಇದು ರಾಜ್ಯಾಂಗಕ್ಕೇ ವಿರುದ್ಧವಾಗಿದೆ, ಆರ್ಟಿಕಲ್ ೨೫೪ಕ್ಕೆ ಇದು ವಿರುದ್ಧವಾಗಿದೆ ಎಂದು ಹೇಳಿದರು. ಇದೇ ಕಾರಣದಿಂದ ಇದನ್ನು ವಾಪಸ್ ಪಡೆಯಬೇಕೆಂದು ಹೇಳಿದರು. ಆ ರೀತಿ ಏನಾದರೂ ಇದ್ದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಸ್ವಲ್ಪ ಮಾರ್ಪಾಡು ಮಾಡಬೇಕಾಗುತ್ತದೆ. ಅನಂತರ ಇಲ್ಲಿ ಪುನಃ ಪರಿಶೀಲನೆಗೆ ತೆಗೆದುಕೊಳ್ಳಲು ನಮಗೆ ಅವಕಾಶ ಇದ್ದೇ ಇದೆ. ಆದಕಾರಣ ಅದಕ್ಕೆ ಯಾರೂ ಸಹ ರಾಜಕೀಯ ಬೆರೆಸುವುದು ಬೇಡ. ಇಂತಹ ವಿಷಯಗಳು ಬಂದಾಗ ರಾಷ್ಟ್ರೀಯ ಸಮಸ್ಯೆ ಎಂದು ನಾವು ತಿಳಿದುಕೊಂಡು ಮಾತನಾಡಬೇಕೇ ಹೊರತು. ನಾವು ವಿರೋಧಪಕ್ಷದಲ್ಲಿದ್ದೇವೆಂಬ ಕಾರಣದಿಂದ ಎಲ್ಲದಕ್ಕೂ ರಾಜಕೀಯ ಲೇಪ ಹಚ್ಚುವುದು ಬೇಡ ಎಂದು ಹೇಳುತ್ತೇನೆ. ನಾನು ಈ ಬಿಲ್ಲನ್ನು ಮಂಡನೆ ಮಾಡಿದಾಗ ಯಾವ ಜಾಗದಲ್ಲಿ ಇದ್ದೆನೋ, ಅದೇ ಜಾಗದಲ್ಲಿ ಈ ಬಿಲ್ ಕನ್ಸಿಡರೇಷನ್‌ಗೆ ಬಂದಾಗಲೂ ಸಹ ಇದ್ದೇನೆ, ೧೯೭೮ರಲ್ಲಿ ಇದನ್ನು ಇಂಟರ್‌ಡ್ಯೂಸ್ ಮಾಡಿದಾಗ ಯಾವ ಜಾಗದಲ್ಲಿ ಇದ್ದೆನೋ ಅದೇ ಜಾಗದಲ್ಲಿ ಈಗಲೂ ಇದ್ದೇನೆ. ಆದಕಾರಣ ನಮ್ಮ ನಿಲುವು ಯಾವ ಕಾರಣಕ್ಕೂ ಬದಲಾವಣೆಯಾಗುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ನಮ್ಮ ನಿಲುವು ಬದಲಾವಣೆಯಾಗಲು ಯಾವುದೇ ಸನ್ನಿವೇಶ ಒದಗಿ ಬಂದಿಲ್ಲ ಆದಕಾರಣ ಸರ್ಕಾರಕ್ಕೆ ಈ ಬಗ್ಗೆ ಒಂದು ಸೂಚನೆ ಕೊಡುತ್ತೇನೆ. ಏನೆಂದರೆ ಮಾನ್ಯ ದೇವರಾಜ ಅರಸ್ ಅವರು ಕೊಟ್ಟಿರುವಂತಹ ಹಗ್ಗವನ್ನು ನೀವು ನೇಣು ಹಾಕಿಕೊಳ್ಳಲು ಉಪಯೋಗಿಸಬೇಡಿ ಎಂದು. ತಾವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ, ಈ ಬಗ್ಗೆ ತಾವು ಯಾವುದೇ ಪ್ರತಿಷ್ಠೆಯ ಮೇಲೆ ಕೂರಬೇಡಿ. ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟರೆ, ಅಲ್ಲಿ ಅವರು ಪರಿಶೀಲನೆ ಮಾಡಿ ನೋಡುತ್ತಾರೆ. ನಂತರ ಅವರ ಅಭಿಪ್ರಾಯದಂತೆ ಕ್ರಮ ತೆಗೆದುಕೊಳ್ಳಲು ನಮಗೆ ಅವಕಾಶವಾಗುತ್ತದೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI D. DEVARAJ URS.—Before the Hon'ble Chief Minister commences his reply I would like to point out one thing which I had forgotten while I was speeking on this Bill.

ಅಧ್ಯಕ್ಷರು.—ಹೇಳಿ.

ಶ್ರೀ ಡಿ. ದೇವರಾಜ ಅರಸ್.—ನಮ್ಮಲ್ಲಿ Prevention of Black Marketting Maintenance of Supply of Essential Commodities Act ಎಂಬುದು ಈಗ ಜಾರಿಯಲ್ಲಿದೆ. ಎಲ್ಲ ರಾಜ್ಯ ಸರ್ಕಾರಗಳಿಗೂ ಇದನ್ನು ಉಪಯೋಗ ಮಾಡಲು ಅವಕಾಶವಿದೆ. ಇದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಸೆಕ್ಷನ್ ೩ರಲ್ಲಿ

> "Power to make orders detaining certain persons.—The Central Government or the State Government or any Officer of the Central Government not below the rank of Joint Secretary of that Government specially empowered for the purpose of this Section by that Government, or any Officer of the State not below the rank of a Secretary to that Government specially empowered for the purpose of this section by that Government may if satisfied with respect to any person, with a view to preventing from acting in any manner prejudicial to the maintenance of supply of commodities which are essential, it is necessary to direct such persons to be detained".

6-00 P.M.

ಎಂದು ಇದರಲ್ಲಿ ಇದೆ. ಇದನ್ನು ಕೇವಲ ಎಸೆನ್ಷಿಯಲ್ ಕಮಾಡಿಟೀಸ್‌ಗೆ ಮಾತ್ರ ಅಪ್ಲೈ ಆಗುತ್ತದೆ, ಬೇರೆ ಯಾವುದಕ್ಕೂ ಅಪ್ಲೈ ಆಗುವುದಿಲ್ಲ ಎನ್ನುವ ವಾದ ಹೇಳಬಹುದು.

Sec. 2—Explanation—it says like this:

> "For the purpose of this clause, the expression "motor vehicle" shall have the meaning assigned to it in clause (18) of Sec. 2 of the Motor Vehicles Act, 1939 (Central Act IV of 1939)."

In sub-sec. (iii) it is stated :

> "any other service or employment or class thereof connected with any matter with respect to which the State Legislature has power to make laws under list II in the Seventh Schedule to the Constitution etc.,"

Let us see what is that schedule list ? ಸುಮಾರು ಇದರಲ್ಲಿ ೬೦ ಸಬ್ಜೆಕ್ಟ್ಸ್ ಇದೆ: ಇದರಲ್ಲಿ ಬರದೇ ಇರತಕ್ಕ ವಿಷಯವೇ ಇಲ್ಲ ಅಂತ ಹೇಳಬಹುದು, If you see that list you can make laws in all aspects. Whether it is industrial production, supply and distribution including agriculture in all those things you can make laws. If the Government is of the opinion that there is refusal to work which prejudicially affects the public utility or the pnblic safety or the maintenance of supply in those cases also they could make laws. ಇದಕ್ಕೆಲ್ಲಾ ಅಪ್ಲೈ ಮಾಡಬಹುದು. ಸರ್ಕಾರಕ್ಕೆ ಕಷ್ಟ ಇದೆ ಎನ್ನುವುದು ನಮಗೂ ಗೊತ್ತು. ಕೆಲವು ಅಗತ್ಯ ಸೇವೆಗಳಲ್ಲಿ ವಿನಾಕಾರಣ ಸಾರ್ವಜನಿಕರನ್ನು ತೊಂದರೆಗೆ ಗುರಿ ಮಾಡುವಂತ ಸಂದರ್ಭದಲ್ಲಿ ಈ ಕಾನೂನನ್ನು ಉಪಯೋಗ ಮಾಡುವುದಕ್ಕೆ ಸಾಧ್ಯ ಇದೆ. All these provisions sufficiently take care of such situations which you have envisaged here. Beyond this, I don't think there is any need to have this Act. That is my opinion.

MR. SPEAKER.—Now the Minister for Law and Parliamentary Affairs will make a statement

Statement by the Minister

ಬೆಂಗಳೂರು ಡೈರಿಯಲ್ಲಿನ ಕಾರ್ಮಿಕ ಅಶಾಂತಿ ಸ್ಥಿತಿಯ ಬಗ್ಗೆ ಹೇಳಿಕೆ

ಶ್ರೀ ವೈ. ರಾಮಕೃಷ್ಣ (ಪಶು ಸಂಗೋಪನಾ ಸಚಿವರು).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಡೈರಿಯ ಕಾರ್ಮಿಕರು ದಿನಾಂಕ ೧-೫-೧೯೮೦ರ ಬೆಳಿಗ್ಗೆಯಿಂದ ಮುಷ್ಕರ ಹೂಡಿದ್ದರು. ಬೆಂಗಳೂರು ಡೈರಿಯ ಭದ್ರತಾ ಸಿಬ್ಬಂದಿಯವರಿಗೆ ಹೆಚ್ಚಿನ ಬಡ್ತಿಗಳನ್ನು ಕೊಟ್ಟ ಕಾರಣ ಈ ಮುಷ್ಕರಕ್ಕೆ ಪ್ರಚೋದನೆ ಆಗಿತ್ತು. ಬೆಂಗಳೂರು ಡೈರಿಯು ಸಾರ್ವಜನಿಕ ಸೇವಾ ಸಂಸ್ಥೆಯೆಂದು ಘೋಷಿಸಲ್ಪಟ್ಟಿದ್ದರೂ ಈ ಮುಷ್ಕರದ ಬಗ್ಗೆ ಯಾವ ಮುಂಗಡ ತಿಳುವಳಿಕೆ ಸೂಚನೆಯು ಕಾರ್ಮಿಕ ಇಲಾಖೆಗೆ ಬಂದಿರಲಿಲ್ಲ. ಈ ಕಾನೂನು ಬಾಹಿರ ಮುಷ್ಕರದ ಕಾರಣವಾಗಿ ಮಾಲೀಕ ವರ್ಗದವರು ೧-೫-೧೯೮೦ರಲ್ಲೇ ಬೀಗ ಮುದ್ರೆ ಘೋಷಿಸಿದರು.

ಬೆಂಗಳೂರು ವಿಭಾಗದ ಡೆಪ್ಯುಟಿ ಲೇಬರ್ ಕಮೀಷನರ್‌ರವರು ಈ ಬಗ್ಗೆ ಮಧ್ಯೆ ಪ್ರವೇಶಿಸಿ ೨-೫-೧೯೮೦ ಮತ್ತು ೩-೫-೧೯೮೦ರಂದು ಜಂಟಿ ಸಭೆಗಳನ್ನು ಕರೆದಿದ್ದರು. ಈ ಸಂದಿಗ್ಧ ಪರಿಸ್ಥಿತಿಯ ನಿವಾರಣೆಗಾಗಿ ಕಾರ್ಮಿಕ ಕಮೀಷನರ್‌ರವರೇ ಸ್ವತಃ ಜಂಟಿ ಸಭೆಗಳನ್ನು ೪-೫-೧೯೮೦, ೫-೫-೧೯೮೦ ಮತ್ತು ೬-೫-೧೯೮೦ ರಂದು ನಡೆಸಿದರು.

ಈ ಸಂದರ್ಭದಲ್ಲಿ ಕಾನೂನು, ಪಾರ್ಲಿಮೆಂಟರಿ ವಿಷಯ ಹಾಗೂ ಹೈನುಗಾರಿಕೆಯ ಸಚಿವರು ಹಾಗೂ ಕಾರ್ಮಿಕ, ಸಣ್ಣ ಕೈಗಾರಿಕೆ, ವಕ್ಫ್, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರುಗಳು ಮಧ್ಯೆ ಪ್ರವೇಶಿಸಿ ಒಂದು ಒಪ್ಪಂದಕ್ಕೆ ಬರಲು ಸಹಾಯ ಮಾಡಿದರು.

ಫಲಿತಾಂಶವಾಗಿ ಕಾರ್ಮಿಕ ಕಮೀಷನರ್‌ರವರ ಮುಂದೆ ಒಂದು ಒಪ್ಪಂದವನ್ನು ೬-೫-೧೯೮೦ ರಂದು ಸಹಿ ಮಾಡಲಾಯಿತು. ಆ ಒಪ್ಪಂದದ ವಿವರಗಳು ಈ ಕೆಳಕಂಡಂತೆ ಇವೆ.

ಬೆಂಗಳೂರು ಡೈರಿಯ ಕಾರ್ಮಿಕರು ಇಂದು ರಾತ್ರಿಯಿಂದ ಕೆಲಸಕ್ಕೆ ಹಾಜರಾಗುತ್ತಾರೆ. ಮಾಲಿಕರು ಬೀಗ ಮುದ್ರೆಯನ್ನು ಇಂದಿನಿಂದ ತೆರವು ಮಾಡುತ್ತಾರೆ. ಸರ್ಕಾರವು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ತಕ್ಷಣ ರಚಿಸುವುದು.

(೧) ಬೆಂಗಳೂರು ಡೈರಿಯಲ್ಲಿರುವ ಕಾರ್ಮಿಕ ಸಂಘಗಳ ವತಿಯಿಂದ ಇಬ್ಬರು ಸದಸ್ಯರು,

(೨) ಕೆಡಿಡಿಸಿ (ಬೆಂಗಳೂರು ಡೈರಿ ಸೇರಿ) ವತಿಯಿಂದ ಇಬ್ಬರು ಸದಸ್ಯರು.

ಮೇಲ್ಕಂಡ ಸಮಿತಿಯು ಬೆಂಗಳೂರು ಡೈರಿಗೆ ಸಂಬಂಧಿಸಿದಂತೆ ಕೆಳಕಂಡ ವಿಷಯಗಳ ಬಗ್ಗೆ ವಿಚಾರಣೆ ಮಾಡಿ ವರದಿ ಸಲ್ಲಿಸುತ್ತದೆ.

೧. ಡೈರಿಯಲ್ಲಿ ಇರಬೇಕಾದ ಜನಬಲದ ಯೋಜನೆ (ಮ್ಯಾನ್‌ಪವರ್ ಪ್ಲಾನಿಂಗ್)

೨. ಕೆಲಸದ ಭಾರ, ಕೆಲಸದ ಮೌಲ್ಯಮಾಪನ, ಕೆಲಸದ ವಿವರ ಹಾಗೂ ಕೆಲಸದಲ್ಲಿನ ಜವಾಬ್ದಾರಿ, ಇತ್ಯಾದಿ ಬಗ್ಗೆ.

೩. ಕೆಡಿಡಿಸಿ ಮತ್ತು ಡೈರಿ ಇಲ್ಲಿನ ವೇತನ ಶ್ರೇಣಿಗಳಲ್ಲಿ ಪರಸ್ಪರ ಹೊಂದಾಣಿಕೆ.

೪. ಕೆಲಸದ ಸ್ಥಾನಗಳನ್ನು ಮೇಲ್ಮಟ್ಟಕ್ಕೆ ಏರಿಸುವ ಬಗ್ಗೆ.

೫. ತಾತ್ಕಾಲಿಕ ಬದಲಿ ಹಾಗೂ ಒಟ್ಟು ಸಂಬಳ ಪಡೆಯುವ ಕೆಲಸಗಾರರ ಸ್ಥಾನಗಳನ್ನು ಖಾಯಂಗೊಳಿಸುವ ಬಗ್ಗೆ.

೬. ಒಂದು ಕಾಲಮಿತಿಯಲ್ಲಿ ಆಗುವಂತಹ ಬಡ್ತಿಯ ಯೋಜನೆಯನ್ನು ಜಾರಿಗೆ ತರುವ ಬಗ್ಗೆ.

ಈ ಸಮಿತಿ ತನ್ನ ನೇಮಕ ಆದ ೨೪ ಗಂಟೆಗಳಲ್ಲಿ ಎಲ್ಲೆಲ್ಲಿ ಅಗತ್ಯವೋ ಅಲ್ಲಿ ತಾತ್ಕಾಲಿಕ ಮಧ್ಯವರ್ತಿ ಪರಿಹಾರದ ಬಗ್ಗೆಯೂ ಸಹ ಶಿಫಾರಸು ಮಾಡುವುದು.